ದುಡಿವ ಜನರ ಪ್ರಾಣಮಿತ್ರ

ಜನಶಕ್ತಿ

ಕನ್ನಡ ವಾರಪತ್ರಿಕೆ


ಸಂಪುಟ 2 ಸಂಚಿಕೆ 12

ಮಾರ್ಚ್ 23, 2008

ರೂ. 5/-



ಬಿಜೆಪಿಯ ಕೊಲೆಗಡುಕ ರಾಜಕೀಯ



ಕರ್ನಾಟಕದ ಬಜೆಟ್ ಎಂಬ ಲೇಖಾನುದಾನ



ಭಯೋತ್ಪಾದನೆ ವಿರುದ್ಧ ಫತ್ವಾ

ಯು.ಪಿ.ಎ. ಸರ್ಕಾರ ಹುಸಿಯಾದ ನಿರೀಕ್ಷೆ

ಇದ್ದದ್ದು ಇದ್ಹಾಂಗ

ಕಿಕ್ ಬ್ಯಾಕ್ ವ್ಯವಹಾರ

"ರಾಜ್ಯದಲ್ಲಿ ಜೆಡಿ(ಎಸ್) ಜತೆ ಸೇರಿ ಅಧಿಕಾರ ನಡೆಸುವಾಗ ಕೈಗಾರಿಕಾ ಖಾತೆ ಹೊಂದಿದ್ದ ಬಿಜೆಪಿ ಸಚಿವರು ಮೈಸೂರು, ಮಂಗಳೂರು ಮತ್ತು ಬೆಂಗಳೂರು ನಗರಗಳಲ್ಲಿ ಮೂರುವರೆ ಸಾವಿರ ಎಕರೆ ಭೂಮಿ ಡಿನೋಟಿಫೈ ಮಾಡಿ ಭಾರೀ ಕಿಕ್ ಬ್ಯಾಕ್ (ಲಂಚ) ಪಡೆದಿದ್ದಾರೆ"

-ಎಚ್.ಡಿ.ರೇವಣ್ಣ
ಮಾಜಿ ಸಚಿವರು

★

ಒಪ್ಪುವ ವಿಶ್ವಾಸ!?

"ಎಡಪಕ್ಷಗಳು ಭಾರತ ಅಮೇರಿಕಾ ಅಣು ಒಪ್ಪಂದವನ್ನು ಕೆಲವೊಮ್ಮೆ ವಿರೋಧಿಸುವ ಹಾಗೆ ಕಾಣುತ್ತವೆ. ಪರಿಸ್ಥಿತಿ ಅರ್ಥ ಮಾಡಿಕೊಂಡು ಎಡಪಕ್ಷಗಳ ಮುಖಂಡರು ಕೂಡ ಒಪ್ಪಂದಕ್ಕೆ ಒಪ್ಪಿಗೆ ನೀಡುವ ವಿಶ್ವಾಸ ಇದೆ."

-ವೀರಪ್ಪ ಮೊಯಲಿ
ಕಾಂಗ್ರೆಸ್ ಮುಖಂಡರು

★

"ಭಾರತ ಅಮೇರಿಕಾ ಅಣು ಒಪ್ಪಂದದ ಹೈಡ್ ಕಾಯ್ದೆ ವಿಚಾರದಲ್ಲಿ ಎಡಪಕ್ಷಗಳ ವಿಶ್ಲೇಷಣೆಯೇ ಸರಿ ಇರುವಂತೆ ಕಾಣುತ್ತಿದೆ"


-'ಪ್ರಜಾವಾಣಿ' ಸಂಪಾಕೀಯದಲ್ಲಿ


ಜಂಟಿ ತನಿಖೆ ಅಗತ್ಯ

ಸಿಪಿಐ(ಎಂ) ಕರ್ನಾಟಕ ರಾಜ್ಯ ಸಮಿತಿಯ ಕಾರ್ಯದರ್ಶಿಯವರ ಮನೆಯ ಮೇಲೆ ದಾಳಿ ಮಾಡಿದವರನ್ನು ಪತ್ತೆ ಹಚ್ಚಬೇಕೆಂದು ಪಕ್ಷದ ರಾಜ್ಯ ಸಮಿತಿ ಸರ್ಕಾರವನ್ನು ಒತ್ತಾಯಿಸಿದೆ. ಬಿಜೆಪಿಯ ಸುಳ್ಳು ಆರೋಪವನ್ನು ಸಮಿತಿ ಖಂಡಿಸಿದೆ. ಮಾತ್ರವಲ್ಲ ಆ ಬಗ್ಗೆಯೂ ತನಿಖೆಯಾಗಬೇಕೆಂದು ಒತ್ತಾಯಿಸಿದೆ.

ಈ ಪ್ರಕರಣದಲ್ಲಿ ಎರಡು ರಾಜ್ಯಗಳ ಕ್ರಿಮಿನಲ್‌ಗಳು ಭಾಗವಹಿಸಿದ್ದು ಕಂಡು ಬಂದಿರುವುದರಿಂದ ಜಂಟಿ ತನಿಖೆ ಮಾಡಲು ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕೆಂದು ಸಿಪಿಐ(ಎಂ) ಪಕ್ಷ ಆಗ್ರಹಿಸಿದೆ.

ದೇಶಾದ್ಯಂತ ಹಾಗೂ ವಿಶೇಷವಾಗಿ ರಾಜ್ಯದಲ್ಲಿ ಕೋಮುವಾದಿಗಳ ಈ ದಾಳಿಯನ್ನು ಖಂಡಿಸಿ, ಕಾಳಜಿ ವ್ಯಕ್ತಪಡಿಸಿದ ಎಲ್ಲ ವ್ಯಕ್ತಿಗಳಿಗೆ ಮತ್ತು ಸಂಘಟನೆಗಳಿಗೆ ಕೃತಜ್ಞತೆಗಳನ್ನು ಸಲ್ಲಿಸಿದೆ. ಸಿಪಿಐ(ಎಂ) ಈ ಶಕ್ತಿಗಳ ವಿರುದ್ಧ ತನ್ನ ಹೋರಾಟವನ್ನು ಮುನ್ನಡೆಸಲಿದೆ. ಮುಂದಿನ ಚುನಾವಣೆಯಲ್ಲಿ ಬಿಜೆಪಿ ಅಧಿಕಾರಕ್ಕೆ ಬರುವುದನ್ನು ತಡೆಯಲು ದೃಢವಾದ ಹೋರಾಟವನ್ನು ನಡೆಸಲಿದೆ ಎಂದು ಪತ್ರಿಕಾಗೋಷ್ಠಿಯಲ್ಲಿ ವಿಜೆಕೆ ನಾಯರ್ ತಿಳಿಸಿದರು.






ಇಎಂಎಸ್ ಭವನ ನಿಧಿ

ಎರಡನೇ ಹಂತದ ಸಂಗ್ರಹ

ಹಿಂದಿನ ಸಂಚಿಕೆಯಿಂದ	20.17.397.00
ಸಿಪಿಐ(ಎಂ) ದ.ಕ. ಜಿಲ್ಲಾ ಸಮಿತಿ ಮೂಲಕ	2,00,000.00
ನಾಗರಾಜ್‌ರಾವ್, ವಿಜಯಾಬ್ಯಾಂಕ್ ಹುಬ್ಬಳ್ಳಿ	5,000.00
ಕೆ.ಎಸ್.ಶಾಂತಮೂರ್ತಿ, ವಿಜಯಾ ಬ್ಯಾಂಕ್, ಹುಬ್ಬಳ್ಳಿ	5,000.00
ಕೆ.ವಿಶ್ವನಾಥಹೊಳ್ಳ, ವಿಜಯಾ ಬ್ಯಾಂಕ್, ಹುಬ್ಬಳ್ಳಿ	1,000.00
ಕೆ.ಶಂಕರ ಶೆಟ್ಟಿ, ವಿಜಯಾಬ್ಯಾಂಕ್, ಹುಬ್ಬಳ್ಳಿ	1,000.00
ಶಶಿಕಲಾ ಬೆಳಗಲಿ, ಬೆಂಗಳೂರು	100.00
ಜಯರಾಮ ಶೆಟ್ಟಿ ವಿಜಯಾ ಬ್ಯಾಂಕ್, ಹುಬ್ಬಳ್ಳಿ	100.00
ಎಸ್.ಜಿ.ಹೆಗಡೆ, ವಿಜಯಾ ಬ್ಯಾಂಕ್, ಧಾರವಾಡ	501.00
ಬಿ.ಚಂದ್ರಶೇಖರ ಶೆಟ್ಟಿ, ವಿಜಯಾ ಬ್ಯಾಂಕ್, ಧಾರವಾಡ	1,001.00
ಹೆಚ್.ಶಂಕರ ಶೆಟ್ಟಿ, ವಿಜಯಾ ಬ್ಯಾಂಕ್, ಹುಬ್ಬಳ್ಳಿ	500.00
ಬಸಪ್ಪ ಪಿ.ಎನ್, ವಿಜಯಾ ಬ್ಯಾಂಕ್, ಗುಳೇದಗುಡ್ಡ	500.00
ಅಪ್ಪಯ್ಯ ಹಿರೇಮಠ, ಧಾರವಾಡ	500.00
ಪಿ.ವಿ.ಹೆಗ್ಡೆ ಎಲ್‌ಐಸಿ ಆಫ್ ಇಂಡಿಯಾ, ಗದಗ	4,000.00
ಲಿಖಿತ್ ಬಿ. ಶೆಟ್ಟಿ, ಬೆಂಗಳೂರು	500.00
ಒಟ್ಟು	22,37,099.00

ಹಿರಿಯ ಸ್ವಾತಂತ್ರ್ಯ ಹೋರಾಟಗಾರ, ಸಿಪಿಐ(ಎಂ) ನೇತಾರ

ಸ್ಫೂರ್ತಿಯ ಚೇತನ ಕಾಮ್ರೆಡ್ ಮುಗುವಾಳಪ್ಪ ನಿಧನ



ಕಾಂ. ಮುಗುವಾಳಪ್ಪ. ಅವರ ಹೆಸರೇ ಚೈತನ್ಯದಾಯಕ. 1934 ಕಾಂಗ್ರೆಸ್ ಸೇವಾದಳದ ಕಾರ್ಯಕರ್ತರಾಗಿದ್ದವರು. ಮಹಾತ್ಮ ಗಾಂಧಿಯವರನ್ನು ಕಂಡರು, ದೊಡ್ಡಬಳ್ಳಾಪುರಕ್ಕೆ ಕರೆತಂದವರು. ತ್ರಿಪುರ ಕಾಂಗ್ರೆಸ್ ಮಹಾಧಿವೇಶನ, ಕರ ನಿರಾಕರಣೆ ಚಳುವಳಿ, ಶಿವಪುರ ಸತ್ಯಾಗ್ರಹ, ಕ್ವಿಟ್ ಇಂಡಿಯಾ ಚಳುವಳಿ... ಹೀಗೆ ಮಹತ್ತರ ಸ್ವಾತಂತ್ರ್ಯ ಹೋರಾಟಗಳಲ್ಲಿ ಪಾಲ್ಗೊಂಡವರು.

ಸ್ವಾತಂತ್ರ್ಯಾನಂತರ ಕಾಂಗ್ರೆಸ್ ಪಕ್ಷದ ನೀತಿಗಳಿಂದ ಭ್ರಮನಿರಸನಗೊಂಡು ಕಮ್ಯುನಿಸ್ಟ್ ಪಕ್ಷ ಸೇರಿದವರು... ಬಡ ರೈತರು, ಭೂಹೀನ ರೈತರು, ಜನತೆಯ ಪರವಾದ ಹೋರಾಟಗಳಿಗೆ ಜೀವನಪೂರ್ತಿ ತಮ್ಮನ್ನೇ ಸಮರ್ಪಿಸಿಕೊಂಡವರು.

ಕಮ್ಯುನಿಸ್ಟ್ ಪಕ್ಷದ ಸರಳತೆಯೇ ಮೈವೆತ್ತವರು, ಪಕ್ಷದ ಪತ್ರಿಕೆಯ ಪ್ರಸಾರಕ್ಕಾಗಿ, ಜನರಿಗೆ ತಲುಪಿಸುವುದಕ್ಕಾಗಿ ಸಾಯುವ ದಿನಗಳ ಸಮೀಪದವರೆಗೆ ಹಂಬಲಿಸಿ ಹಂಬಲಿಸಿ, ಶ್ರಮಿಸಿದವರು. ಪತ್ರಿಕೆಯ ಹಣ ಎಂದೂ 'ಬಾಕಿ' ಮಾಡದೇ ನಿರಂತರವಾಗಿ ಚುಕ್ತ ಮಾಡಿದವರು. ವೈಯಕ್ತಿಕ ಜೀವನದ ಉದ್ದಕ್ಕೂ ಪಕ್ಷಕ್ಕಾಗಿ ಜನತೆಗಾಗಿ ತನ್ನದನ್ನು ಅರ್ಪಿಸುವ ತ್ಯಾಗ ಪರಂಪರೆಯನ್ನು ಎತ್ತಿ ಹಿಡಿಯುತ್ತಾ ಬಂದವರು.... 97 ವರ್ಷದ ಹಿರಿಯ ಜೀವ ಮಾರ್ಚ್ 11 ರಂದು ನಮ್ಮಿಂದ ದೂರವಾಗಿದೆ. ಆದರೆ ಸ್ಫೂರ್ತಿ ನಮ್ಮೊಂದಿಗೆ ಹಾಗೇ ಇದೆ. ಮಾರ್ಚ್ 12 ರ ಅಂತಿಮ ಯಾತ್ರೆಯ ಸಂದರ್ಭದಲ್ಲಿ ದೊಡ್ಡಬಳ್ಳಾಪುರಕ್ಕೆ ದೊಡ್ಡಬಳ್ಳಾಪುರವೇ ಒಮ್ಮೆ ಸ್ಥಗಿತವಾಗಿ ಈ ಹಿರಿಯ ಚೇತನಕ್ಕೆ ತೋರಿದ ಗೌರವ ಹ್ಲಾಂ..... ವಿವರಗಳು ಮುಂದಿನವಾರ.



ಸಾವಿನ ಹಾಸಿಗೆಯಲ್ಲೂ ಪತ್ರಿಕೆಗಾಗಿ ಮಿಡಿಯಿತು ಆ ಜೀವ...

ಅವರು ಕುಳಿತುಕೊಳ್ಳುವ ಸ್ಥಿತಿಯಲ್ಲಿ ಇರಲಿಲ್ಲ. ಮಾತನಾಡಲೂ.....! ಅಜ್ಜಪ್ಪನ ಆರೋಗ್ಯ ತೀರಾ ಹದಗೆಟ್ಟಿದೆಯೆಂದು ತಿಳಿದಾಗ ಅವರನ್ನು ನೋಡಿ ಬರೋಣವೆಂದು ನಾನು, ಬಾಲಕೃಷ್ಣ ಶೆಟ್ಟಿಯವರು ಮನೆಗೆ ಹೋದಾಗ ಸ್ಥಿತಿ ಹೀಗಿತ್ತು...

ಅವರ ಪತ್ನಿ "ನೋಡಿ ನಿಮ್ಮ ಗೆಳೆಯರು ಬಂದಿದ್ದಾರೆ, ಕಾಮ್ರೇಡರು" ಎಂದಾಗ ಕಣ್ಣುಮುಚ್ಚಿದ್ದ ಅಜ್ಜಪ್ಪ ರೆಪ್ಪೆ ತೆರೆದು ನೋಡಿದರು. ಒಡನೆಯೇ ಅವರ ಬಾಯಿ ಇಷ್ಟಗಲಗೊಂಡು ಓ! ಬನ್ನಿ ಬನ್ನಿ ಎಂದು ಕ್ಷೀಣ ದನಿಯಲ್ಲೇ ಸ್ವಾಗತಿಸಿದರು. ನಾನು ಜೊತೆಗೆ ಒಯ್ದಿದ್ದ 'ಜನಶಕ್ತಿ' ಪತ್ರಿಕೆಯನ್ನು ಅವರ ಕೈಗಿತ್ತೆ. ಬಹಳ ಸಂತೋಷದಿಂದ ಬಿಡಿಸಿ ನೋಡಿ, ಚಂದಾದ ವಿವರ ಪಡೆದರು. 'ನೋಡು ಪತ್ರಿಕೆಗೆ ಐದು ವರುಷದ ಚಂದಾ ಕೊಡು' ಎಂದು ಅವರ ಪತ್ನಿಯವರಿಗೆ ಹೇಳಿದರು. ನಂತರ ಯೋಗಕ್ಷೇಮ ವಿಚಾರಿಸಿ ವಾಪಸ್ಸಾದೆವು.

ಇದಾದ ಕೆಲವು ದಿನಗಳಲ್ಲೇ ಅವರ ಆರೋಗ್ಯ ತೀರಾ ಹದಗೆಟ್ಟು ಸೇಂಟ್ ಫಿಲೋಮಿನಾ ಆಸ್ಪತ್ರೆಯಲ್ಲಿದ್ದಾಗ ಅಲ್ಲಿಗೆ ಭೇಟಿ ನೀಡಿದೆವು. ಅವರು ಪ್ರಜ್ಞಾಸ್ಥಿತಿಯಲ್ಲಿ ಇರಲಿಲ್ಲ. ಸ್ಥಿತಿ ಗಂಭೀರ. ಒಂದರ್ಥದಲ್ಲಿ ಸಾವಿನ ಹಾಸಿಗೆ ಮೇಲಿದ್ದರು. ಆದರೆ 'ಪಾರ್ಟಿಯವರು, ಕಾಮ್ರೇಡ್ಸ್ ಬಂದಿದ್ದಾರೆ' ಎಂದು ಅವರ ಪತ್ನಿ ಹೇಳಿದಾಗ ಚುರುಕುಗೊಂಡ ಅವರ ಮನಸ್ಸು ಕಣ್ಣು, ಬಾಯಿ ತೆರೆಯಲು ಯತ್ನಿಸಿದರೂ ಆಗಲೇ ಇಲ್ಲ. ಹಾಗೇ ಓ.... ಎಂದು ನರಳಿದರು.... ಜನಶಕ್ತಿ ಅವರ ಕೈಗೆ ಇಟ್ಟಾಗ ಬಾವೋದ್ರಿಕ್ತರಾಗಿ ಗದ್ಗದಿತರಾದರು.

ಇತ್ತೀಚೆಗೆ ಬೆಂಗಳೂರಿನಲ್ಲಿ ಅಗಲಿದ ಶ್ರೀ ರಾಮದಾಸ್ ಬಿಜೂರ್ ರವರಿಗೆ ಐಕ್ಯರಂಗ, ಜನಶಕ್ತಿ ಪತ್ರಿಕೆ ಎಂದರೆ ಪಂಚಪ್ರಾಣ. ಐಕ್ಯರಂಗಕ್ಕೆ ಅಜೀವ ಚಂದಾದಾರರಾಗಿದ್ದರೂ ಜನಶಕ್ತಿಗೆ ಚಂದಾ ಕೊಡಲೇಬೇಕು ಇಲ್ಲವಾದರೆ ಪತ್ರಿಕೆ ಬೆಳೆಯುವುದಾದರೂ ಹೇಗೆ? ಎಂದೆಲ್ಲಾ ಹೇಳುತ್ತಿದ್ದವರು. ಅತ್ಯಂತ ವೈವಿಧ್ಯಮಯ, ವಿಶಿಷ್ಟ ಹವ್ಯಾಸಗಳ, ಅಧ್ಯಯನಶೀಲರೂ ಆದ ಬಿಜೂರ ಕೊನೆಯುಸಿರೆಳೆದಾಗ ಒಬ್ಬ ನೆಚ್ಚಿನ ಮಿತ್ರ ಇಲ್ಲವಾದ ನೋವಿನ ಅನುಭವ ಪತ್ರಿಕೆಗೆ. ಕೆಲವು ದಿನಗಳಲ್ಲಿ ಏರ್ಪಡಿಸಿದ ಅಶ್ರುತರ್ಪಣ ಸಂದರ್ಭಕ್ಕೆ ಡಾ.ನಾಗರಾಜ ಹವಾಲ್ದಾರರಿಂದ ದಾಸರ ಪದಗಳ ಗಾಯನ. ಬಂಧುವೊಬ್ಬರಿಂದ ಬಿಜುರರ ಹವ್ಯಾಸಗಳ ಬದುಕಿನ ಪರಿಚಯ. ಎಲ್ಲ ಮುಗಿದಾಗ ಲಂಡನ್‌ನಲ್ಲಿದ್ದ ಅವರ ಹಿರಿಯ ಸಹೋದರನಿಗೆ ಜಿಎನ್, ಬಾಲಣ್ಣ, ನಾನು ಪರಿಚಯಿಸಿ ಕೊಂಡಾಗ ಅವರೆಂದರು ಮಾರ್ಕ್ಸ್‌ವಾದದ ಅಧ್ಯಯನದತ್ತ ನಾನು ಅವನನ್ನು ಸೆಳೆದೆ... "ನಿಮಗೆ ಲಾಲ್‌ಸಲಾಂ" ಎಂದು ಮುಷ್ಠಿ ಎತ್ತಿ ವಂದಿಸಿ ಬೀಳ್ಕೊಟ್ಟರು.



ಹಿರಿಯ ಕವಿ ದ.ರಾ.ಬೇಂದ್ರೆ ಹಾಗೂ ಗಂಗಾಬಾಯಿ ಹಾನಗಲ್‌ರೊಂದಿಗೆ ಸಂಗಾತಿ ಬಿಜೂರ

ಹೀಗೆ ಹಲವು ಹುದ್ದೆಗಳಲ್ಲಿ ಹಿರಿಯ ಅಧಿಕಾರಿಗಳೂ, ಗೆಳೆಯರೂ ಆಗಿದ್ದ ರಾಮದಾಸ್ ಬಿಜೂರ್‌ರವರು ಅಗಲಿದರೂ, ಪತ್ರಿಕೆಯೊಟ್ಟಿಗೆ ಕದಲದೇ ಉಳಿದರು. ದುಡಿವ ಜನರ ಪ್ರಾಣಮಿತ್ರನಿಗೆ ಎಷ್ಟೆಲ್ಲಾ ಮಿತ್ರರು.

- ಎಸ್.ವೈ.ಜಿ

ಸಂಪಾದಕೀಯ

ಸಮಾನತೆಯ ದನಿ ಅಡಗಿಸಲಾಗದು

ಇಲ್ಲಿನ ಧಾಳಿಗಳಿಗೆ ಕಣ್ಣೂರು ನೆಪ ಮಾತ್ರ. ಎಡಶಕ್ತಿಗಳ ವಿರುದ್ಧ ಫ್ಯಾಸಿಸ್ಟರ ದ್ವೇಷ, ಹತಾಶೆ ಹೆಡೆ ಎತ್ತಿದೆ! ಹಿಟ್ಲರನ ಸಂತತಿ ಕರ್ನಾಟಕದಲ್ಲಿ ಅಧಿಕಾರಕ್ಕೆ ಬಂದು ಬಿಟ್ಟರೆ.....?

ನವದೆಹಲಿ ಮತ್ತು ದೇಶದ ಹಲವಾರು ರಾಜ್ಯಗಳಲ್ಲಿ ಸಿಪಿಐ(ಎಂ) ಪಕ್ಷದ ಕಛೇರಿ ಹಾಗೂ ಮುಖಂಡರ ಮನೆ ಮೇಲಿನ ಮಧ್ಯರಾತ್ರಿ ಧಾಳಿಗಳು ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಫ್ಯಾಶಿಸ್ಟ್ ಸ್ವರೂಪದ ಕರಾಳ ಮುಖವನ್ನು ಮತ್ತೊಮ್ಮೆ ಅನಾವರಣಗೊಳಿಸಿದೆ. ರಾಜಕೀಯ ಭಿನ್ನಾಭಿಪ್ರಾಯಗಳಿಗೆ ಪ್ರಜಾಸತ್ತಾತ್ಮಕ ವಿಧಾನಗಳ ಮೂಲಕ ಪರಿಹಾರ ಕಂಡುಕೊಳ್ಳದೇ ತೋಳ್ಬಲ ಮತ್ತು ಹಿಂಸಾ ಮಾರ್ಗ ಅನುಸರಿಸುತ್ತಿರುವ ಸಂಘ ಪರಿವಾರದ ಹೇಡಿತನದ ಕೃತ್ಯಗಳು ಇವು.

ತಾನೊಂದು ಭಿನ್ನ ನೀತಿಯನ್ನು ಅನುಸರಿಸುವ ಪರಿಶುದ್ಧ ಪಕ್ಷವೆಂದು ಪದೇ ಪದೇ ಬಿಜೆಪಿ ಹೇಳಿಕೊಳ್ಳುತ್ತದೆ. ಆದರೆ ಅದರ ಕೃತ್ಯಗಳು ತುದಿ ನಾಲಿಗೆಯ ಮಾತುಗಳನ್ನು ಬಹಿರಂಗ ಹರಾಜಿಗಿಟ್ಟಿವೆ. ಕಣ್ಣೂರಿನ ವಿದ್ಯಮಾನಗಳೇ ತನ್ನ ಕುಕೃತ್ಯಗಳಿಗೆ ಕಾರಣವೆಂದಲ್ಲಾ ಹೇಳುವ ಸಂಘ ಪರಿವಾರ ತನ್ನ ಕೊಲೆ ಪಾತಕ ರಾಜಕೀಯ ಇತಿಹಾಸವನ್ನು ಮರೆ ಮಾಚುತ್ತಿದೆ. ಹಾಗೆಯೇ ನಾಗರೀಕ ಕಾನೂನು ಅನ್ವಯ ಕ್ರಮ ವಹಿಸದೇ ಕಣ್ಣೂರಿನಂತೆ ಅಖಿಲ ಭಾರತ ಮಟ್ಟದಲ್ಲಿ ಕಾನೂನು ಬಾಹಿರವಾದ, ಗೂಂಡಾಗಿರಿ ವಿಧಾನಗಳನ್ನು ವಿಸ್ತರಿಸಿದ್ದೇಕೆ? ದೆಹಲಿಯಲ್ಲಿ ಎಕೆಜಿ ಭವನದ ಮೇಲೆ ಧಾಳಿ ಎಸಗಿದ್ದೇಕೆ? ಈ ಕೃತ್ಯಗಳ ವಿರುದ್ದ ದೇಶವ್ಯಾಪಿ ಖಂಡನೆ ವ್ಯಕ್ತವಾಗುತ್ತಿರುವಾಗಲೇ 9 ರಂದು ಬೆಂಗಳೂರಿನಲ್ಲಿ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿಯವರ ಮನೆ ಮೇಲೆ ಧಾಳಿ ಮಾಡಿ ಆಸ್ತಿ ಹಾನಿ ಮಾಡಿ, ಪ್ರಾಣಾಂತಿಕ ಬೆದರಿಕೆ ಒಡ್ಡಿದ್ದೇಕೆ? ಕಾರ್ಯದರ್ಶಿ ಅಲ್ಲಿದ್ದರೆ ಅವರನ್ನು ಕೊಲ್ಲುವ ಸಂಭವವೇ ಇತ್ತು. ಅಂತಹ ಸಂಚು ರೂಪಿಸಲಾಗಿತ್ತು. ಇಲ್ಲಿ ನಂತರ ಹೈದ್ರಾಬಾದ್‌ನಲ್ಲಿ, ಕನ್ಯಾಕುಮಾರಿ, ಡೆಹ್ರಾಡೂನ್, ಮುಂತಾದೆಡೆ ಇಂತಹದ್ದೇ ಧಾಳಿಗಳನ್ನು ನಡೆಸಿರುವುದು, ಮತ್ತೆ ಇಂತಹ ಕೃತ್ಯಗಳನ್ನು ಖಂಡಿಸದೇ ಬಿಜೆಪಿ-ಆರ್‌ಎಸ್‌ಎಸ್ ನಾಯಕರು ಸಮರ್ಥಿಸುತ್ತಾ, ಮತ್ತು ಪ್ರಚೋದಿಸಿದ್ದು ಅದರ ದುಷ್ಟ ಅಜೆಂಡಾದ ಒಂದು ತುಣುಕು. ಇಂತಹ ಧಾಳಿಗಳು ವಿಸ್ತರಿಸಿದ್ದು ಆರ್‌ಎಸ್‌ಎಸ್ ನ ವಕ್ತಾರ ಮಾಧವನ್, ಬಿಜೆಪಿ ವೆಂಕಯ್ಯನಾಯ್ಡುರವರ ಪ್ರತಿಕಾರದ ಹೇಳಿಕೆಗಳ ನಂತರವೇ ಎಂಬುದು ಗಮನಿಸಬೇಕು. ಅಂದರೆ ಈ ಎಲ್ಲಾ ಘಟನೆಗಳು ಒಂದು ವ್ಯವಸ್ಥಿತವಾದ, ಕೇಂದ್ರ ನಾಯಕತ್ವವೂ ಪಾಲ್ಗೊಂಡ ಆಳವಾದ ಪಿತೂರಿಯ ಭಾಗವಾಗಿದೆ ಎಂಬುದರಲ್ಲಿ ಅನುಮಾನವೇ ಇಲ್ಲ. ಪ್ರಜಾಪ್ರಭುತ್ವವನ್ನೇ ಬುಡಮೇಲುಗೊಳಿಸುವ ಬಿಜೆಪಿಯ ಈ ಫ್ಯಾಶಿಸ್ಟ್ ಕೃತ್ಯಗಳನ್ನು ನೋಡಿದಾಗ ನಿಜಕ್ಕೂ ಇದು ಇತರಿಗಿಂತ ಭಿನ್ನವಾದ ಪಕ್ಷವೇ ಎಂದು ಭಾವಿಸಬಹುದು!

ಇಷ್ಟೆಲ್ಲಾ ನಡೆಸಿದ ಬಳಿಕ ಈ ಧಾಳಿಗಳಲ್ಲಿ ತನ್ನದೇನೂ ಪಾತ್ರವಲ್ಲವೆಂದು ಸಂಘ ಪರಿವಾರದ ನಾಯಕರು ಅಲ್ಲಗಳೆದು 'ರಾಷ್ಟ್ರೀಯ ಸುಳ್ಳಿನ ಸಂಘ'ದ ಕಟ್ಟಾಳುಗಳೆಂಬುದನ್ನು ಸಾಬೀತುಪಡಿಸಿದ್ದು ನಾಚಿಕೆಗೇಡು. ದೆಹಲಿ ಮುಂತಾದಡೆ ಬಿಜೆಪಿಯ ಮೇಯರ್ ಮುಖ್ಯಮಂತ್ರಿ ಅಭ್ಯರ್ಥಿ ಶಾಸಕ ಮತ್ತು ಕಾರ್ಪೋರೇಟರ್‌ಗಳು ತೊಡಗಿದ್ದು ಜೈಲು ಕಂಬಿ ಎಣಿಸುತ್ತಿರುವುದು ಮುಖೇಡಿತನ ಅನುಭವಿಸುವಂತಾಗಿದೆ ಮಾತ್ರವಲ್ಲ ಅದರ ಎರಡೆಳೆ ನಾಲಿಗೆಯು ಹೊರಗೆ ಬಿದ್ದಿದೆ.

ಬಹಳಷ್ಟು ಮಾತನಾಡಲಾಗುತ್ತಿರುವ ಕಣ್ಣೂರಿನ ಘರ್ಷಣೆಗಳಿಗೆ ಅತ್ಯಂತ ದೀರ್ಘವಾದ ದಶಕಗಳ ಇತಿಹಾಸವೇ ಇದೆ. ಶೋಷಿತ ಜನ ವರ್ಗಗಳನ್ನು ಸಂಘಟನೆ ನ್ಯಾಯ, ಸಮಾನತೆಯತ್ತ, ಸ್ವಾಭಿಮಾನಿ ಚಳುವಳಿಯನ್ನು ಎಡಶಕ್ತಿಗಳು ಕಟ್ಟುತ್ತಿರುವಾಗಲೇ ಭೂಮಾಲೀಕ, ಬಂಡವಾಳಗಾರರ ಕೈಗಾರಿಕೆಗಳ ಮಾಲೀಕರ 'ಬಂಟರಾಗಿ' ಗೂಂಡಾಗಿರಿಯನ್ನು, ಕೊಲೆ ಪಾತಕ ರಾಜಕಾರಣ ಆರಂಭಿಸಿದ್ದು ಇದೇ ಶಕ್ತಿಗಳೇ. ಇಂತಹ ಗೂಂಡಾಗಿರಿ ಹಾಗೂ ಕೋಮುವಾದಿ ಕುತಂತ್ರಗಳನ್ನು ಅಲ್ಲಿನ ಎಡ ಹಾಗೂ ಪ್ರಜಾಸತ್ತಾತ್ಮಕ ಶಕ್ತಿಗಳು ಪ್ರತಿರೋಧ ಒಡ್ಡಿ ಸೋಲಿಸುತ್ತಿದ್ದಾರೆ.

ಕೇರಳದಲ್ಲಿ (ಇತರೆಡೆಗಳಲ್ಲಿಯೂ) ಇಂತಹ ಕ್ರಿಮಿನಲ್‌ಗಳನ್ನು ಹಿಂದುತ್ವದ ಆಶ್ರಯದಲ್ಲಿ ರಕ್ಷಿಸಲಾಗುತ್ತಿದೆ. 'ಹಿಂದುತ್ವದ ಆಶ್ರಯದಡಿಯಲ್ಲಿನ ಸಂಘ ಪರಿವಾರದ ಕ್ರಿಮಿನಲ್, ಪ್ರತಿಗಾಮಿ ಕೃತ್ಯಗಳಿಗೆ ಪ್ರತಿರೋಧವನ್ನು ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳು ಒಡ್ಡುತ್ತಲೇ ಪ್ರಗತಿಗಭಿಮುಖವಾಗಿ ಕೇರಳದ ಸಮಾಜವನ್ನು ಮುನ್ನಡೆಸುತ್ತಿವೆ. ಆದರೆ ಸಂಘ ಪರಿವಾರದ ಇಂದಿನ ಕೃತ್ಯಗಳಿಗೆ ಕಾರಣ ಕೇವಲ ಕಣ್ಣೂರು ಘಟನೆಗಳು ಎಂಬುದು ನೆಪ ಮಾತ್ರ. ಸಿಪಿಐ(ಎಂ) ಮತ್ತು ಎಡಶಕ್ತಿಗಳು ದೇಶದ ರಾಜಕಾರಣದಲ್ಲಿ ಮಹತ್ವದ ಪಾತ್ರ ವಹಿಸುತ್ತಿವೆ. ಕೋಮುವಾದಕ್ಕೆ ತೀವ್ರವಾದ ಪ್ರತಿರೋಧವನ್ನು ಒಡ್ಡುತ್ತಿವೆ. ಸಂಸತ್ತಿನಲ್ಲಿ ಬಿಜೆಪಿ ಅಧಿಕೃತ ವಿರೋಧ ಪಕ್ಷವಾಗಿದ್ದರೂ ದೇಶದ ಜನತೆಯ ಹಿತಾಸಕ್ತಿಗಳಿಗೆ ಮಾರಕವಾದ ನೀತಿಗಳನ್ನು ವಿರೋಧಿಸದೇ, ಹಾದಿ ತಪ್ಪಿಸುವ ತಂತ್ರ ಅನುಸರಿಸುತ್ತಿರುವಾಗ ಎಡಪಕ್ಷಗಳೇ ನಿಜವಾದ ವಿರೋಧ ಪಕ್ಷದ ಪಾತ್ರ ವಹಿಸುತ್ತಿವೆ. ಆದರೆ ಬಿಜೆಪಿ-ಸಂಘಪರಿವಾರ ಅಮೇರಿಕಾದ ಹಾಗೂ ದೇಶದ ಆಳುವವರ ಬಾಲ ಬಡಿಯುತ್ತಾ ಬಲ ಪ್ರತಿಗಾಮಿ ಪಾತ್ರ ವಹಿಸುತ್ತಿದೆ. ಬಾಯಿ ಮಾತಿನಲ್ಲಿ ದೇಶಪ್ರೇಮವೆಂದರೂ ಕೃತಿಯಲ್ಲಿ ಅದಕ್ಕೆ ತದ್ವಿರುದ್ಧವಾಗಿ ವರ್ತಿಸುತ್ತದೆ. ಭಾರತವನ್ನು ಕೋಮು ಆಧಾರದಲ್ಲಿ ಒಡೆಯಲು ಸತತವಾಗಿ ಯತ್ನಿಸುತ್ತಿದೆ. ಇವುಗಳನ್ನೇ ಎಡಶಕ್ತಿಗಳು ಮುಂಚೂಣಿಯಲ್ಲಿ ನಿಂತು ಪ್ರತಿರೋಧಿಸುತ್ತಿರುವುದು. ಸೈದ್ಧಾಂತಿಕವಾಗಿ, ರಾಜಕೀಯವಾಗಿ ಎಡಶಕ್ತಿಗಳ ವಿರುದ್ಧವಾಗಿರುವ ಸಂಘ ಪರಿವಾರವು ಇವುಗಳ ಮೇಲೆ ಹಲ್ಲು ಮಸೆಯುತ್ತಿದೆ. ಎಡ ಪಕ್ಷಗಳ ಪಾತ್ರ, ಭಾರತ -ಅಮೇರಿಕಾಕ್ಕೆ ಅಣು ಒಪ್ಪಂದಕ್ಕೆ ತೀವ್ರ ಪ್ರತಿರೋಧ, ಮತ್ತು ಆರ್ಥಿಕ, ಸಾಮಾಜಿಕವಾದ ನೈಜ ಪರ್ಯಾಯದ ಕ್ರಮಗಳು, ತ್ರಿಪುರಾದಲ್ಲಿ ಮತ್ತೆ ಅತ್ಯಧಿಕ ಮತಗಳಿಂದ ಸಾಧಿಸಿದ ಅಭೂತಪೂರ್ವ ವಿಜಯ ಇತ್ಯಾದಿ ಸಂಗಾತಿಗಳು ಈ ಪ್ರತಿಗಾಮಿಗಳನ್ನು ಕೆರಳಿಸಿದೆ. ಮೇಲಾಗಿ ಪ.ಬಂಗಾಳ, ಕೇರಳ, ತ್ರಿಪುರಾಗಳಲ್ಲಿ ಅದೆಷ್ಟೇ ಯತ್ನಿಸಿದರೂ ನೆಲೆ ದೊರಕಿಸಿಕೊಳ್ಳಲಾಗದ ಅದರ ಸ್ಥಿತಿಯಿಂದಾಗಿ ಅದು ಕುದಿಯುತ್ತಿದೆ. ಕೇರಳದಲ್ಲಿ-ವಿಶೇಷವಾಗಿ ಕಣ್ಣೂರಿನಲ್ಲಿ ಆರ್‌ಎಸ್‌ಎಸ್‌ನ ಶಾಖೆಗಳಿಗೆ ಹಾಜರಾಗುವಲ್ಲಿ ಇಳಿಮುಖ ಮತ್ತು ಜನತೆ ಹೆಚ್ಚು ಹೆಚ್ಚಾಗಿ ಎಡಶಕ್ತಿಗಳನ್ನು ಬೆಂಬಲಿಸುತ್ತಾ, ಬಿಜೆಪಿ ದುರ್ಬಲವಾಗಿರುವುದು, ಅದರ ಹತಾಶೆ, ಅಸಹನೆಗೆ ಕಾರಣ. ಈ ಹಿನ್ನೆಲೆಯಲ್ಲಿ ತನ್ನ ಧಾಳಿಗಳನ್ನು ಯೋಜಿಸಿರುವುದು ಅರ್ಥವಾಗದ ವಿಷಯವೇನಲ್ಲ.


ಇಂತಹ ಕೋಮುವಾದಿ ಫ್ಯಾಶಿಸ್ಟ್ ಬಿಜೆಪಿ-ಸಂಘ ಪರಿವಾರ ಕರ್ನಾಟಕದ ಅಧಿಕಾರ ಹಿಡಿಯುವ ಕನಸು ಕಾಣುತ್ತಾ, ಆ ದಿಕ್ಕಿನಲ್ಲಿ ನೂರೆಂಟು ಅಕ್ರಮ ವಿಧಾನಗಳ ಪ್ರಯತ್ನ ನಡೆಸಿರುವುದು ಇನ್ನಷ್ಟು ದಿಗ್ಭ್ರಮೆ ಹುಟ್ಟಿಸುವ ಸಂಗತಿ. ಕರ್ನಾಟಕವನ್ನು ಗುಜರಾತನ್ನಾಗಿಸುವ ಅದರ ಧ್ಯೇಯ ಕೇವಲ ಘೋಷಣೆಯಾಗಿರದೇ ಅದರ ಪ್ರಯೋಗಗಳು ನಡೆದಿರುವುದು ಆತಂಕಕಾರಿ. ಇದೇ ಶಕ್ತಿಗಳು ರಾಮಸೇತುವಿನ ಬಗ್ಗೆ ತಮಿಳುನಾಡು ಮುಖ್ಯಮಂತ್ರಿ ಕರುಣಾನಿಧಿಯವರು ಆರ್‌ಎಸ್‌ಎಸ್‌ಗಿಂತ ಭಿನ್ನ ನಿಲುವು ಇರಿಸಿಕೊಂಡಿರುವ ಕಾರಣಕ್ಕೆ ಬೆಂಗಳೂರಿನಲ್ಲಿರುವ ಅವರ ಪುತ್ರಿಯ ಮನೆ ಮೇಲೆ ಧಾಳಿ ನಡೆಸಿದ್ದು ಇಬ್ಬರನ್ನು ಬಸ್ ಸಮೇತ ಜೀವಂತ ಸುಟ್ಟಿದ್ದು, ಸನ್ನಿವೇಶದ ಭೀಕರತೆಯನ್ನು ತೋರಿಸುತ್ತದೆ. ಕರಾವಳಿಯಲ್ಲಿ ಅಲ್ಪಸಂಖ್ಯಾತರ ಮೇಲಿನ ಧಾಳಿಗಳು, ತ್ರಿಶೂಲ ಹಂಚಿಕೆ, ಇತ್ಯಾದಿಗಳು ಅಪಾಯಕಾರಿಯಾಗಿವೆ. ರಾಜ್ಯದ ಜನತೆ ಇವುಗಳಿಂದ ಎಚ್ಚರಗೊಳ್ಳುವುದು ಅತ್ಯಗತ್ಯವಾಗಿದೆ.

ಅದು ತನ್ನ ವಿರೋಧಕ್ಕೆ ಆರಿಸಿಕೊಂಡಿರುವ ವಿಧಾನಗಳು

ಪುಟ 4 ಕ್ಕೆ

"ಈ ಘಟನೆಗಳಿಂದ ಬಿಜೆಪಿಗೆ ಪ್ರಜಾಸತ್ತಾತ್ಮಕ ವಿಧಾನಗಳಲ್ಲಿ ಬದ್ಧತೆ ಇದೆಯೇ ಎಂದು ಪ್ರಶ್ನಿಸುವಂತಾಗಿದೆ... ಕಾನೂನಿನ ಚೌಕಟ್ಟಿನಲ್ಲಿ ವಿವಾದಗಳನ್ನು ಬಗೆಹರಿಸಿಕೊಳ್ಳುವುದನ್ನೂ ಬಿಜೆಪಿ ಕಲಿಯಬೇಕು. ಕಾನೂನು ಕೈಗೆತ್ತಿಕೊಳ್ಳುವ ಅದರ ಪ್ರವೃತ್ತಿಯನ್ನು ಮೊಳಕೆಯಲ್ಲೇ ಚಿವುಟಿ ಹಾಕಬೇಕು ಮತ್ತು ದುರ್ನಡತೆಗಾಗಿ ಪರಿತಪಿಸುವಂತಾಗಬೇಕು".

– ಡೆಕ್ಕನ್ ಹೆರಾಲ್ಡ್ ಸಂಪಾದಕೀಯ, ಮಾರ್ಚ್ 12,2008



ರಾಜಕೀಯ ರಂಗ ತಾಲೀಮು

ರಾಜಕೀಯ ಪಕ್ಷಗಳು ರಾಜಕಾರಣಿಗಳು ವಿಪರೀತವಾಗಿ ಚುರುಕಾಗಿಬಿಟ್ಟಿದ್ದಾರೆ. ಹವಾನಿಯಂತ್ರಿತ ಅಥವಾ ಕಲ್ಪನಾ ಸಾಮ್ರಾಜ್ಯದಲ್ಲಿ ವಿಹರಿಸುತ್ತಿದ್ದ ಕೆಲವರು ಹಕ್ಕಿಗಳನ್ನು ಹುಡುಕಿಕೊಂಡು ಹೋಗಿ ಜನತಾದರ್ಶನ ಮಾಡಿಸುತ್ತಿದ್ದಾರೆ. ಹಳೆಯ ಬಟ್ಟೆ ಗಂಟಿನೊಳಗೆ ಮಡಿಚಿಟ್ಟ 'ಖಾದಿ' ಘೋಷಾಕಿಗೆ ಖದರು ಬಂದಿದೆ ಎಂದು ಜನ ಮಾತನಾಡಿಕೊಳ್ಳುವಷ್ಟು ಕ್ರಿಯಾಶೀಲರಾಗಿದ್ದಾರೆ!

ರಾಜಕಾರಣಿಗಳ ಇಂತಹ ಕ್ರಿಯಾಶೀಲತೆ, ಜನಮುಖಿತ್ವ ಒಳ್ಳೆಯದೇ. ಆದರೆ ವರುಷಕ್ಕೊಮ್ಮೆ ಊರ ಜಾತ್ರೆಯಲ್ಲಿ ಮುಖ ತೋರಿಸಿ ಮರೆಯಾಗುವುದರಿಂದ ಪ್ರಯೋಜನವಾದರೂ ಏನು? ಈಗಿನವರ ಕ್ರಿಯಾಶೀಲತೆಗೆ ಕಾರಣ ಕರ್ನಾಟಕದ ವಿಧಾನಸಭೆಗೆ ಇನ್ನೇನು ಮೇ ಒಳಗೆ ಚುನಾವಣೆಗಳು ಖಚಿತ ಎಂಬ ಸುದ್ದಿಯಿಂದ 'ಬಹುತೇಕ ಮಂದಿ ರಸ್ತೆಗಿಳಿದಿದ್ದಾರೆ. ಭಾರತದ ಚುನಾವಣಾ ಆಯೋಗದ ಮೂವರು ಆಯುಕ್ತರು ರಾಜ್ಯಕ್ಕೆ ಭೇಟಿ ನೀಡಿ ಚುನಾವಣೆ, ಅದರ ಸಿದ್ಧತೆ ಬಗ್ಗೆ ವಿವಿಧ ರಾಜಕೀಯ ಪಕ್ಷಗಳ ಅಭಿಪ್ರಾಯ ಆಲಿಸಿ ವಾಪಸಾಗಿದ್ದಾರೆ. ರಾಷ್ಟ್ರಪತಿ ಆಡಳಿತ ಕೊನೆಗೊಳ್ಳುವ ಒಳಗೆ ಆಗಸ್ಟ್ 28 ರೊಳಗೆ ಚುನಾಯಿತ ಸರ್ಕಾರ ಅಸ್ತಿತ್ವಕ್ಕೆ ಬರುವಂತಾಗಲು ಚುನಾವಣಾ ಪಟ್ಟಿ, ಮತಗಟ್ಟೆಗಳು ಮತ್ತು ನೂತನ ಪುನರ್‌ರಚಿತ ಕ್ಷೇತ್ರಗಳ ವಿಂಗಡಣೆ ಕಾರ್ಯ ಮುಗಿಸಿ ದೆಹಲಿಗೆ ರಾಜ್ಯ ಆಯೋಗದ ಅಧಿಕಾರಿಗಳು ಹೋಗಿದ್ದಾರೆ. ಹೀಗಾಗಿ ಚುನಾವಣೆಗಳು ಖಚಿತ ಎಂಬಂತಹ ವಾತಾವರಣವಿದೆ.

ಬೇಸರಗೊಂಡವರ ವಲಸೆ

ಆದ್ದರಿಂದಲೇ ವಿವಿಧ ಪಕ್ಷಗಳಲ್ಲಿ 'ಬೇಸರ' ಗೊಂಡಿರುವ ನಾಯಕರು ಸ್ಥಾನಭದ್ರತೆ ಬಯಸಿ ವಲಸೆಗಳು ನಡೆದಿವೆ. ಹೊಸಕೋಟೆಯ ಜೆಡಿ(ಎಸ್)ನ ಮಾಜಿ ಸಚಿವ ಬಚ್ಚೇಗೌಡರು ಬಿಜೆಪಿ ಸೇರಿದ್ದು ಹೊಸ ವಿದ್ಯಮಾನ. ಹಾಗೆಯೇ ಡೋಲಾಯಮಾನದಲ್ಲಿದ್ದ ಮಾಜಿ ಸಚಿವ ಎಂಪಿ.ಪ್ರಕಾಶ್ ಕೊನೆಗೂ ಕಾಂಗ್ರೆಸ್ ದೋಣಿಯಲ್ಲಿ ಎರಡೂ ಕಾಲೂರಿದ್ದಾರೆ. ಕೃಷ್ಣಾಗಮನದಿಂದ ಆಕ್ರೋಶಗೊಂಡ ಸಂಸದ ಅಂಬರೀಶ್ ಬಿಜೆಪಿಯತ್ತ ದೃಷ್ಟಿ ಬೀರಿದ್ದಾರೆ ಎಂಬ ಸುದ್ದಿಗಳೂ ಪ್ರಕಟವಾಗಿವೆ. ಇಂತಹ ಓಲಾಟಕ್ಕೆ ಯಾವುದೇ ಸೈದ್ಧಾಂತಿಕ, ರಾಜಕೀಯ ಕಾರಣಗಳು ಇಲ್ಲವೆಂಬುದು ಬೇರೆ ಹೇಳಬೇಕಿಲ್ಲ. ರಾಜ್ಯದ ಕಾಂಗ್ರೆಸ್ ಪಕ್ಷ ಚುನಾವಣೆ ಮುಂದೆ ಹೋಗಬಹುದೆಂದು ಆಕಳಿಸುತ್ತಿದ್ದದ್ದು ದಿಡೀರನೆ ಎದ್ದು ಹೊರಟಿದೆ. ಮಹಾರಾಷ್ಟ್ರದ ರಾಜ್ಯಪಾಲ ಕೃಷ್ಣರನ್ನು ರಾಜ್ಯಕ್ಕೆ ವಾಪಾಸು ಕರೆಸಿಕೊಂಡಿದೆ. ಇದೇ ಸಂಗತಿಯು ಕಾಂಗ್ರೆಸ್ ಒಳಗೆರಡು ಬಣಗಳ ತೀವ್ರ ಮನಸ್ತಾಪಕ್ಕೂ ಕಾರಣವಾಗಿದೆ. ಇದರ ಪರಿಣಾಮ ಏನಾದೀತೆಂದು ಊಹಿಸಿದ ನಂತರ ಬಾಯಿಗೆ ಬ್ರೇಕ್ ಹಾಕಿಕೊಂಡು ಮೈಸೂರಿನಲ್ಲಿ ಒಂದೇ ವೇದಿಕೆ ಹತ್ತಲು ನಾಯಕರು ನಿರ್ಧರಿಸಿದ್ದಾರೆ.

ಅತ್ತ ಜೆಡಿ(ಎಸ್) ಸಹ ಜನರ ನಡುವೆ ಜಾಥಾ ಹೊರಟಿದೆ. ಆರೋಗ್ಯ ಚೇತರಿಸಿಕೊಂಡ ಮಾಜಿ

ಪುಟ 14ಕ್ಕೆ

ಬೀಡಿ ಕಾರ್ಮಿಕರು ನೆರೆದರು ರಾಜಭವನ ಮುಂದೆ

ಬೀಡಿ ಕಾರ್ಮಿಕರಿಗೆ ಕಾನೂನು ಬದ್ಧವಾದ ಕನಿಷ್ಠ ಕೂಲಿ ಕೊಡಲಾಗುತ್ತಿಲ್ಲ ಹಾಗೂ ಬಾಕಿ ಉಳಿದಿರುವ ತುಟಿಭತ್ಯೆ 4500 ರೂ.ವನ್ನು ಕೊಡಬೇಕೆಂದು 2007 ಜನವರಿ 17 ರಂದು ತ್ರಿಪಕ್ಷೀಯ ಸಭೆಯಲ್ಲಿ ತೀರ್ಮಾನವಾಗಿತ್ತು. ಅದನ್ನು ಜೂನ್ ಒಳಗೆ ಕೊಡುತ್ತವೆಂದು ಮಾಲೀಕರು ಒಪ್ಪಿದ್ದರು. ಆದರೆ ಇದುವರೆಗೂ ಕೊಟ್ಟಿರುವುದಿಲ್ಲ. ತುಟ್ಟಿಭತ್ಯೆಯನ್ನು ಕೊಡಬೇಕಿದೆ..... ಹೀಗೆ ಬೀಡಿ ಕಟ್ಟಿ ಬದುಕು ಸಾಗಿಸುವ ಬೀಡಿ ಕಾರ್ಮಿಕರ ಸಂಕಷ್ಟಗಳು ಒಂದೆರೆಡಲ್ಲ.



2 ವರ್ಷದಿಂದ ಬೀಡಿ ಕಾರ್ಮಿಕರ ಮಕ್ಕಳಿಗೆ ವಿದ್ಯಾರ್ಥಿ ವೇತನವನ್ನು ನಿಲ್ಲಿಸಲಾಗಿದೆ. ಇದರಿಂದ ಬೀಡಿ ಕಾರ್ಮಿಕರ ಮಕ್ಕಳು ಶಿಕ್ಷಣದಿಂದ ವಂಚಿತರಾಗಿದ್ದಾರೆ. ನಿಲ್ಲಿಸಿರುವ ವಿದ್ಯಾರ್ಥಿ ವೇತನವನ್ನು ಕೂಡಲೇ ಬಿಡುಗಡೆ ಮಾಡಬೇಕಾದ ಅಗತ್ಯವಿದೆ. ತಿಂಗಳ ಪೂರ್ತಿ ಬೀಡಿ ಕಟ್ಟಿದರು 600 ರಿಂದ 800 ರೂ. ಮಾತ್ರ ಗಳಿಸುವ ಬೀಡಿ ಕಾರ್ಮಿಕರಿಗೆ ಸ್ವಂತ ಮನೆಯಿಲ್ಲದೆ, ಬಾಡಿಗೆ ಕಟ್ಟಲು ಆಗದೆ ತುಂಬಾ ಕಷ್ಟದಲ್ಲಿ ಬೀಡಿ ಕಾರ್ಮಿಕರು ಬದುಕು ಸಾಗಿಸುತ್ತಿದ್ದಾರೆ. ಸರ್ಕಾರ ಬೀಡಿ ಕಾರ್ಮಿಕರಿಗೆ ಕಾಲೋನಿಯನ್ನು ಕಟ್ಟಿಸಿಕೊಡಬೇಕೆಂದು, ಹಾಗೆ ಗುರುತಿನ ಚೀಟಿ, ಲಾಗ್ ಪುಸ್ತಕ ಕೊಟ್ಟು ಬೀಡಿ ಕಾರ್ಮಿಕರು ಸರ್ಕಾರದಿಂದ ಸಿಗುವ ಸೌಲಭ್ಯವನ್ನು ಪಡೆಯಲು ಅನುವು ಮಾಡಿಕೊಡಬೇಕೆಂದು ಮತ್ತು ಎಲ್ಲಾ ಬೀಡಿ ಕಾರ್ಮಿಕರಿಗೂ ಬಿಪಿಎಲ್ ರೇಷನ್ ಕಾರ್ಡ್ ಕೊಡಬೇಕೆಂದು ಒತ್ತಾಯಿಸಿ ಬಾಕಿ ತುಟ್ಟಿಭತ್ಯೆ, ಕಾರ್ಮಿಕರ ಮಕ್ಕಳಿಗೆ ವಿದ್ಯಾರ್ಥಿ ವೇತನ ಕೂಡಲೇ ನೀಡಬೇಕೆಂದು ಒತ್ತಾಯಿಸಿ ಮಾರ್ಚ್ 12 ರಂದು ಬೀಡಿ ಕಾರ್ಮಿಕರ ಬೃಹತ್ ಪ್ರತಿಭಟನಾ ರ್‍ಯಾಲಿ ಬೆಂಗಳೂರಿನಲ್ಲಿ ನಡೆಯಿತು.

ಬೆಂಗಳೂರಿನ ವಿವಿಧ ಬಡಾವಣೆಗಳಿಂದ ಹಾಗೂ ಬೆಂಗಳೂರು ಗ್ರಾಮಾಂತರ ಪ್ರದೇಶಗಳಾದ ಹೊಸಕೋಟೆ, ಆನೇಕಲ್, ಮಾಗಡಿ, ನೆಲಮಂಗಲ ಮುಂತಾದ ಕಡೆಗಳಿಂದ ಬಂದ ನೂರಾರು ಬೀಡಿ ಕಾರ್ಮಿಕರು ಅದರಲ್ಲೂ ಮಹಿಳೆಯರು ತಮ್ಮ ನ್ಯಾಯಬದ್ಧವಾದ ಬೇಡಿಕೆಗಳಿಗಾಗಿ ಆಗ್ರಹಿಸಿದರು.

ರಾಜಭವನದ ಬಳಿ ಸೇರಿದ ಬೀಡಿ ಕಾರ್ಮಿಕರು ತಮ್ಮ ರಾಜಭವನದ ಮುಂದೆಯೂ ಬೀಡಿ ಕಟ್ಟುವ ಮೂಲಕ ಪ್ರತಿಭಟಿಸಿದರು. ನಂತರ ಬೀಡಿ ಕಾರ್ಮಿಕ ಸಂಘಟನೆಯ ರಾಜ್ಯ ಕಾರ್ಯದರ್ಶಿ ಮುಜೀಬ್, ಉಮೇಶ್, ಸಂಘಟನೆಯ ಬೆಂಗಳೂರು ಜಿಲ್ಲಾ ಅಧ್ಯಕ್ಷರಾದ ಬಸಮ್ಮ, ಕಾರ್ಯದರ್ಶಿ ಜಲೀಲ್ ಖಾನ್ ಅವರಿದ್ದ ನಿಯೋಗವು ರಾಜ್ಯಪಾಲರ ಸಹಾಯಕ ಕಾರ್ಯದರ್ಶಿ ಸುಧಾ ಸುಬ್ರಹ್ಮಣ್ಯಂ ಅವರನ್ನು ಭೇಟಿ ಮಾಡಿ, ಬೇಡಿಕೆಗಳ ಕುರಿತು ಮನವಿ ಸಲ್ಲಿಸಿತು. ಸುಧಾರವರು ಈ ಸಂಬಂಧ ಸಂಬಂಧಿಸಿದ ಇಲಾಖೆಗಳನ್ನು ಸಂಪರ್ಕಿಸಿ ಸೂಕ್ತ ಕ್ರಮವಹಿಸುವುದಾಗಿ ಭರವಸೆ ನೀಡಿದ್ದಾರೆ. ಬೇಡಿಕೆ ಈಡೇರದಿದ್ದರೆ ಹೋರಾಟ ತೀವ್ರಗೊಳಿಸಲು ಕಾರ್ಮಿಕರು ನಿರ್ಧರಿಸಿದ್ದಾರೆ.

ಸಮಾನತೆಯ ದನಿ ಅಡಗಿಸಲಾಗದು.....

ಪುಟ 3 ರಿಂದ

ಸಂಸದೀಯ ಪ್ರಜಾಪ್ರಭುತ್ವದಲ್ಲಿ ನಂಬಿಕೆಯೇ ಇಲ್ಲದಿರುವುದಷ್ಟೆ ಅಲ್ಲ ಅದನ್ನು ನಾಶಗೊಳಿಸುವಂತಹದ್ದು.

ಇತ್ತೀಚೆಗೆ ಬಿಜೆಪಿಯ 'ಪ್ರತಿಭಟನಾ' ಸಭೆಯಲ್ಲಿ ಮಾತನಾಡಿದ ಮಾಜಿ ಶಾಸಕ ಸಿ.ಟಿ.ರವಿ ಕಮ್ಯುನಿಷ್ಟರನ್ನು ಮುಗಿಸಲು 'ತ್ರಿಶೂಲ' ಹಿಡಿಯಬೇಕೆಂದು ಬಹಿರಂಗವಾಗಿ ಕರೆ ನೀಡಿರುವುದು ಕ್ರಿಮಿನಲ್ ಪ್ರಚೋದನೆಯಾಗಿದೆ. ಆತನ ಮೇಲೆ ಕ್ರಿಮಿನಲ್ ಮೊಕದ್ದಮೆ ಹೂಡಿ ಕ್ರಮ ವಹಿಸಲು ಮುಂದಾಗಬೇಕು. ಪ್ರಜಾಪ್ರಭುತ್ವ ವಿರೋಧಿ ಫಾಶಿಸ್ಟ್ ಕೃತ್ಯಗಳಿಗೆ ಅವಕಾಶವಿಲ್ಲ ಎಂದು ಎಚ್ಚರಿಸಬೇಕು.

ಇಂತಹ ಬೆದರಿಕೆ, ಭಯೋತ್ಪಾದನೆಗಳ ವಿರುದ್ಧ ಇನ್ನೂ ಕ್ರಮ ವಹಿಸದೆ ಇರುವುದು 'ನಯ ಹಿಂದುತ್ವದ ಸೂಚಕವೇ? ಇನ್ನಾದರೂ ಕಾನೂನು ಜಾರಿ ಇಲಾಖೆ ಕ್ರಮ ವಹಿಸಬೇಕು. ಇಂತಹ ಕೋಮುವಾದಿ ವೈರಸ್‌ಗಳಿಗೆ ಕರ್ನಾಟಕ ಬಲಿಯಾಗಬೇಕೆ. ಶತಾಯಗತಾಯ ಅಧಿಕಾರ ಹಿಡಿಯಲು ಪ್ರಯತ್ನಿಸುತ್ತಿರುವ ಹದ್ದುಬಸ್ತಿನಲ್ಲಿಡುವುದು. ತಿರಸ್ಕರಿಸುವುದು ದೇಶದ ಹಿತಕ್ಕೆ ಅತೀ ಜರೂರಾದ ಕ್ರಮ.

ಇತಿಹಾಸದಲ್ಲಿ ಇಂತಹ ಫ್ಯಾಶಿಸ್ಟ್ ಶಕ್ತಿಗಳಿಗೆ ಕಾಲಕಾಲಕ್ಕೆ ಪಾಠ ಕಲಿಸಿ, ಮಣ್ಣು ಮುಕ್ಕಿಸುತ್ತಾ ಬರಲಾಗಿದೆ. ಸಮಾನತೆಗಾಗಿ ಹೋರಾಡುವ ಧ್ವನಿಗಳನ್ನು ಗೂಂಡಾಗಿರಿಯಿಂದ ಅಡಗಿಸಲು ಸಾಧ್ಯವಿಲ್ಲ.ಎಂಬುದನ್ನು ಹಿಟ್ಲರನ ಸಂತತಿ ಅರಿಯಬೇಕು. ○

ಮಾರ್ಚ್ 27 ರಂದು
ಜನಶಕ್ತಿ ವೆಬ್‌ಸೈಟ್ ಉದ್ಘಾಟನೆ – ವಿಚಾರಮಂಥನ

ಜನಶಕ್ತಿ ಇದೀಗ ಅಂತರ್ಜಾಲಕ್ಕೆ ಸೇರ್ಪಡೆಯಾಗುತ್ತಿದೆ. ಇದರ ಔಪಚಾರಿಕ ಉದ್ಘಾಟನೆ ಮಾರ್ಚ್ 27 ರಂದು ಬೆಂಗಳೂರಿನ ಸೆನೆಟ್ ಹಾಲ್‌ನಲ್ಲಿ ಸಂಜೆ 4 ಕ್ಕೆ ಪತ್ರಕರ್ತ ಪಿ.ಸಾಯಿನಾಥ್, ಹಿರಿಯ ಬಂಡಾಯ ಸಾಹಿತಿ ಬರಗೂರು ರಾಮಚಂದ್ರಪ್ಪ, ಕವಿ ಜಿ.ಎನ್.ಮೋಹನ್ ಮುಂತಾದವರು ಭಾಗವಹಿಸಲಿದ್ದಾರೆ. ಮಾಧ್ಯಮಗಳ ಹೊಸ ಆಯಾಮ, ಪ್ರಸಕ್ತ ಸಂದರ್ಭ ಮುಂತಾದ ವಿಷಯಗಳ ಮೇಲೆ ಸಂವಾದವೂ ನಡೆಯಲಿದೆ. ತಮಗೆಲ್ಲಾ ಸ್ವಾಗತ


– ಸಂ.

ಚಿದಂಬರ ಬಯಲು

ಸನ್ಮಾನ್ಯ ವಿತ್ತಮಂತ್ರಿ ಚಿದಂಬರಂಜೀ ನಮಸ್ಕಾರಗಳು,

ಆದಾಗಿ ಉ.ಕು.ಸಾಂಪ್ರತ: ಪತ್ರ ಬರೆದ ವಿಷಯವೇನೆಂದರೆ ತಮಗೆ ಅಭಿನಂದನೆಗಳನ್ನು ತಿಳಿಸಲು. "ರೈತರ ಋಣ ತೀರಿಸಲು ಸಾಲ ಮನ್ನಾ ಮಾಡಲು ನಿರ್ಧರಿಸಲಾಗಿದೆ. ದೇಶಕ್ಕೆ ಆಹಾರ ಧಾನ್ಯ ಬೆಳೆದು ಕೊಡುವ ಬಡ ರೈತರಿಗೆ ನಮ್ಮೆಲ್ಲರ ಮೇಲೆ ಇರುವ ಋಣಭಾರ ತೀರಿಸಲು ಈ ಸಾಲಮನ್ನಾ ನಿರ್ಧಾರಕ್ಕೆ ಬರಲಾಗಿದೆ. ದೇಶದ ಎಲ್ಲ ರೈತಬಾಂಧವರಿಗೆ ನಾವುಗಳೆಲ್ಲ ಒಂದಲ್ಲ ಒಂದು ಬಗೆಯಲ್ಲಿ ಸಾಲಗಾರರಾಗಿದ್ದೇವೆ. ರೈತರಿಲ್ಲದೇ ಯಾವುದೇ ದೇಶಕ್ಕೆ ಅಸ್ತಿತ್ವವೇ ಇರಲಾರದು. ಅವರು ನಮಗೆಲ್ಲ ಆಹಾರ ಧಾನ್ಯ ಪೂರೈಸಿ ಉಣಿಸುವ ಪುಣ್ಯದ ಕಾರ್ಯ ಮಾಡುತ್ತಿದ್ದಾರೆ. ಅವರ ಋಣ ತೀರಿಸುವುದು ನಮ್ಮೆಲ್ಲರ ಕರ್ತವ್ಯವಾಗಿದೆ" ಎಂದು ತಾವು ಹೇಳಿದ್ದಾಗಿ ಪತ್ರಿಕೆಗಳಲ್ಲಿ ವರದಿಯಾಗಿದೆ.

'ನಾನು ಹಾಗೆ ಹೇಳೇ ಇಲ್ಲ, ಪತ್ರಿಕೆಗಳು, ಮಾಧ್ಯಮದವರು ನನ್ನ ಹೇಳಿಕೆಯನ್ನು ತಿರುಚಿ ವರದಿ ಮಾಡಿದ್ದಾರೆ' ಎಂದು ಈ ಹೇಳಿಕೆಯನ್ನು 'ಅಲ್ಲಗೆಳೆಯುವುದೋ', ಇಲ್ಲ 'ತಳ್ಳಿ ಹಾಕುವುದೋ' ಮಾಡದೆ, ಮನಸಾರೆ ಈ ಮಾತನ್ನು ಹೇಳಿದ್ದರೆ ತಮಗೆ ಅಭಿನಂದನೆಗಳು. ಇಷ್ಟು ವರ್ಷಗಳ ನಂತರ ರೈತರ ಬಗ್ಗೆ ಸ್ವಲ್ಪವಾದರೂ 'ಜ್ಞಾನೋದಯ' ವಾಗಿದ್ದಕ್ಕೆ! ತಮಗೆ ರೈತರ ಬಗ್ಗೆ ಈ ಪರಿ ಜ್ಞಾನೋದಯಕ್ಕೆ ಕಾರಣ ವೇನೆಂಬುದನ್ನು ರಹಸ್ಯ ವಾಗೇನೂ ಉಳಿಸಿ ಕೊಂಡಿಲ್ಲ. ಚುನಾವಣಾ ಬಜೆಟ್ ಎಂದು ಸಂಪೂರ್ಣ ಬಯಲಾಗಿದ್ದೀರಿ!



ತಾವೂ ಹಾಗೂ ತಮ್ಮ ಗುರು ಹಾಲಿ ಪ್ರಧಾನ ಮಂತ್ರಿಗಳು, ಜಾಗತೀಕರಣ, ಆ ಕರಣ, ಈ ಕರಣ ಅಂತ ಹೇಳಿ, ಅಮೇರಿಕಾಕ್ಕೆ ಸಂಪೂರ್ಣ ಶರಣಾಗಿ, ಇಷ್ಟು ವರ್ಷ ರೈತರ ಬಾಳನ್ನು ಗೋಳನ್ನಾಗಿಸಿದ ಕೀರ್ತಿ ಕೂಡ ತಮ್ಮದೇ! ಇಷ್ಟು ಸಾಲದು ಎಂಬಂತೆ ಇತ್ತೀಚೆಗೆ ಹೊಸ ಕೊಡುಗೆ ಕೊಡುತ್ತಿದ್ದೀರಿ, 'ವಿಶೇಷ ಆರ್ಥಿಕ ವಲಯ' ಎಂಬ ಹೆಸರಿನಲ್ಲಿ, ರೈತರ ಭೂಮಿಯನ್ನೇ 'ಮನ್ನಾ' ಮಾಡಿ ಅವರನ್ನು ರೈತ ವೃತ್ತಿಯಿಂದಲೇ 'ಮುಕ್ತಿ' ಗೊಳಿಸುತ್ತಿದ್ದೀರಿ. ಎಷ್ಟು ಚೆನ್ನಾಗಿ ತೀರಿಸುತ್ತಿದ್ದೀರಿ ರೈತರ ಋಣವನ್ನು! ಅಭಿನಂದನೆಗಳು!

ಬಜೆಟ್‌ನಲ್ಲಿ ಸಾಲಮನ್ನಾ ಮಾಡಿರುವುದಾಗಿ ಘೋಷಿಸಿದಿರಿ. ಆದರೆ ಅದನ್ನು ಭರಿಸುವುದು ಹೇಗೆಂದು ತಿಳಿಸದೇ ಚಿದಂಬರ ರಹಸ್ಯ ಮಾಡಿದಿರಿ. ಬುದ್ಧಿವಂತರು ನೀವು! ಸಾಲ ಮನ್ನಾದಿಂದ ಬ್ಯಾಂಕುಗಳಿಗೆ ಏನೋ ಆಗಿ ಹೋಗುತ್ತೆ ಅಂತ ಕೆಲವರು ಥಕ ಥಕ ಕುಣಿದಾಡುತ್ತಿದ್ದರೆ, ಇನ್ನು ಕೆಲವರು ಈ ಮನ್ನಾಬಾಬ್ತನ್ನು 'ಗುಳುಂ' ಮಾಡುವುದು ಹೇಗೆ ಅಂತ ಹೊಂಚು ಹಾಕುತ್ತಿದ್ದಾರೆ. ಎಲ್ಲಾ ನೋಡಿಕೊಂಡು ತಾವು 'ಮುಗುಳ್' ನಗುತ್ತಿದ್ದೀರಿ. ನಿಜವಾದ ಬಡ ರೈತನಿಗೆ ಎಷ್ಟು ಉಪಯೋಗವಾಗುತ್ತೋ ಚಿದಂಬರ ರಹಸ್ಯ ಓಟು ಹಾಕಿದ ನಂತರ ಬಯಲಾಗುತ್ತೋ?

'ನಮ್ಮ ಹಾಗೆ ಸಾಲ ಮನ್ನಾ ಮಾಡ್ಲಿ ನೋಡೋಣ. ನಮ್ಮ ಹಾಗೆ ರೈತರಿಗೆ ಶೇ4 ಬಡ್ಡಿಗೆ ಸಾಲ ಕೊಡಲಿ ನೋಡೋಣ ಅಂತ ಸವಾಲು ಹಾಕಿಕೊಂಡು ತಿರುಗುತ್ತಿದ್ದ ರಾಜ್ಯದ ಬಿಜೆಪಿ ನಾಯಕರು. ಸುಮ್ಮನಿರಲಾರದೆ ಬೆಣೆ ತೆಗೆದು ಬಾಲ ಸಿಕ್ಕಿಸಿಕೊಂಡಿರುವ ಕಪಿಗಳ ಹಾಗಾಗಿದ್ದಾರೆ. 'ಸುಮ್ಮನೆ ಇರಕ್ಕಾಗಲಿಲ್ವ. ಇವರ್‍ಯಾಕೆ ಸವಾಲು ಹಾಕಬೇಕಾಗಿತ್ತು. ಇವರೇ ಚಿದಂಬರಂನಿಗೆ ಏನು ಮಾಡಬೇಕೂಂತ ಹೇಳಿಕೊಟ್ಟ ಹಾಗಾಯಿತು. ಸುಖಾಸುಮ್ಮಾನ ಅವರಿಗೆ ಹೆಸರು ಬಂತು'. ಅಂತ ಆ ಪಕ್ಷದ ಕಾರ್ಯಕರ್ತರೇ ಅವರ ನಾಯಕರಿಗೆ ಉಗಿಯುವಂತೆ ಮಾಡಿ, ನಮ್ಮ ರಾಜ್ಯದ ಬಿಜೆಪಿಯವರನ್ನು ಬಯಲು ಮಾಡಿದ್ದೀರಿ!

ತಾವು ಇಷ್ಟು ಬಯಲಾಗಿದ್ದೀರಿ. ಅವರನ್ನೂ ಬಯಲು ಮಾಡಿದ್ದೀರಿ ಸರಿ. ಆದರೆ, ರೈತರ ಸಾಲ ಮನ್ನಾ 60 ಸಾವಿರ ಕೋಟಿ, 60 ಸಾವಿರ ಕೋಟಿ ಅಂತ ಟಾಂ ಟಾಂ ಮಾಡುವ ತಾವು, ಇದುವರೆಗೂ ಬ್ಯಾಂಕುಗಳಿಗೆ ಉದ್ಯಮಪತಿಗಳು, ಬಂಡವಾಳಿಗರು ಹಾಕಿರುವ ನಾಮ ಎಷ್ಟು ಲಕ್ಷ ಕೋಟಿ ಎನ್ನುವ ಚಿದಂಬರ ರಹಸ್ಯವನ್ನು ಕಾಪಾಡಿದ್ದೀರಿ. ಈ ಕುಳಗಳ ಎಷ್ಟು ಸಾಲ ಮನ್ನಾ ಆಗಿದೆ. ಇನ್ನೂ ಎಷ್ಟು ಸಾಲ ಬ್ಯಾಂಕುಗಳ ನಕಲು ಆಸ್ತಿಯಾಗಿದೆ ಎಂಬ ರಹಸ್ಯವನ್ನು ತಾವು ಬಯಲು ಮಾಡುವುದಾದರೆ ಅದಕ್ಕಾಗಿ ಮುಂಗಡ ಅಭಿನಂದನೆಗಳು.

ಈಗ ತಮಗೆ ರೈತರ ಬಗೆಗೆ ಆಗಿರುವ ಸ್ವಲ್ಪ ಜ್ಞಾನೋದಯ ಹಾಗೇ ಉಳಿದು ಇನ್ನೂ ಹೆಚ್ಚಾಗಲಿ ಎಂದು ಹಾರೈಸುತ್ತಾ, ಇಂತಿ ನಿಮ್ಮ ಪ್ರೀತಿಯ ○

ಜನಶಕ್ತಿ ಕನ್ನಡ ವಾರಪತ್ರಿಕೆ

ಕರ್ನಾಟಕದ ಬಜೆಟ್ ಎಂಬ ಲೇಖಾನುದಾನ

ಜಿ.ಎನ್.ನಾಗರಾಜ್

ಕರ್ನಾಟಕದ ಬಜೆಟ್ ಲೋಕಸಭೆಯ ಮುಂದೆ ಮಾರ್ಚ್ 10ರಂದು ಮಂಡಿಸಲ್ಪಟ್ಟು ಮಾರ್ಚ್ 11 ರಂದು ಅದರ ಮೇಲೆ ಲೋಕಸಭೆಯಲ್ಲಿ ಚರ್ಚೆಯೂ ನಡೆದು ಅಂಗೀಕಾರವಾಗಿದೆ. ಬಜೆಟ್‌ಗೆ ಸಂಬಂಧಿಸಿದಂತೆ ಕರ್ನಾಟಕದಲ್ಲಿ ಕಳೆದ ಎರಡು ತಿಂಗಳಿನಿಂದಲೂ ಅನೇಕ ಊಹಾಪೋಹಗಳು ಎದ್ದಿದ್ದವು. ಕರ್ನಾಟಕ ರಾಜಕೀಯದ ಇಂದಿನ ಕಲುಷಿತ ವಾತಾವರಣದಲ್ಲಿ, ಮೂರು ಪಕ್ಷಗಳ ನಡುವಣ ಕೆಟ್ಟ ಮೇಲಾಟದಲ್ಲಿ ಪ್ರತಿಯೊಂದು ಸಣ್ಣ ದೊಡ್ಡ ವಿಷಯಗಳಲ್ಲಿಯೂ ವಿವಾದಗಳನ್ನು ಹುಟ್ಟುಹಾಕಲಾಗುತ್ತಿದೆ. ಪ್ರತಿಯೊಂದು ಆಪಾದನೆಗಳಿಗೆ, ನಿಂದನೆಗಳಿಗೆ ಕಾರಣವಾಗುತ್ತಿದೆ.



ಕರ್ನಾಟಕದಲ್ಲಿ ಚುನಾವಣೆಗಳು ಯಾವಾಗ ನಡೆಯುತ್ತವೆ ಎಂಬುದೇ ಇಂದು ಕರ್ನಾಟಕದಲ್ಲಿ ಪ್ರಮುಖ ವಿಷಯ. ಮೇ ಒಳಗೇ ನಡೆಯಬೇಕು. ಅದು ನಮಗೆ ಲಾಭಕರ ಎಂಬ ಬಿಜೆಪಿಯ ಆತುರ, ಅದನ್ನು ನವೆಂಬರ್‌ವರೆಗೂ ಮುಂದೂಡಬೇಕು ಎನ್ನುವ ಕಾಂಗ್ರೆಸ್‌ನ ಪ್ರಕಟಿತ ಹಾಗೂ ಜೆಡಿ(ಎಸ್)ನ ಅಪ್ರಕಟಿತ ಪ್ರಯತ್ನಗಳು ಇದು ಎಲ್ಲರಿಗೂ ತಿಳಿದದ್ದೇ. ಈ ವಿವಾದಕ್ಕೆ ಬಜೆಟ್ ಕೂಡ ತುತ್ತಾಯಿತು. ಚುನಾವಣೆಯನ್ನು ಮುಂದೂಡಿ ಮತ್ತೆ ಆರು ತಿಂಗಳಿಗೆ ರಾಷ್ಟ್ರಪತಿಗಳ ಆಡಳಿತ ವಿಸ್ತರಣೆ ಮಾಡಬೇಕೆನ್ನುವ ಬಯಕೆಯ ಸೂಚನೆಯಾಗಿ ಪೂರ್ಣ ಪ್ರಮಾಣದ ಬಜೆಟ್‌ನ್ನು ಮಂಡಿಸಲಿದ್ದಾರೆ. ಅದರಲ್ಲಿ ಅನೇಕ ಜನಮೆಚ್ಚುಗೆ ಗಳಿಸುವ ಕಾರ್ಯಕ್ರಮಗಳನ್ನು ತುರುಕಿ ಚುನಾವಣೆಯಲ್ಲಿ ಅದರ ಲಾಭ ಪಡೆಯಲು ಯೋಚಿಸುತ್ತಿದೆ ಎನ್ನುವ ಆಪಾದನೆಗಳು, ಊಹೆಗಳು ಬಿಜೆಪಿ ವಲಯದಿಂದ ಮತ್ತು ಬಿಜೆಪಿ ಮಿತ್ರ ಪತ್ರಕರ್ತರಿಂದ ಹುಟ್ಟಿಕೊಂಡಿದ್ದವು. ಆದರೆ ಈ ಊಹಾಪೋಹಗಳನ್ನೆಲ್ಲಾ ಸುಳ್ಳಾಗಿಸಿ ಕೇಂದ್ರ ಸರ್ಕಾರ ಹಾಗೂ ರಾಜ್ಯಪಾಲರು ಪೂರ್ಣ ಬಜೆಟ್‌ನ್ನು ಮಂಡಿಸುವ ಪ್ರಯತ್ನ ಮಾಡದೆ ಕೇವಲ ಲೇಖಾನುದಾನವನ್ನು ಮಂಡಿಸಿದೆ. ಇದು ರಾಜಕೀಯ ಮಟ್ಟದಲ್ಲಿ ಕೈಗೊಳ್ಳಲಾಗಿರುವ ನಿರ್ಧಾರ. ಪ್ರಜಾಪ್ರಭುತ್ವದ ಮೌಲ್ಯಗಳಿಗನುಗುಣವಾದ ನಿರ್ಧಾರ. ಎಲ್ಲರೂ ಸ್ವಾಗತಿಸಬೇಕಾದ ಅಂಶ.

ಅಪಹಾಸ್ಯಕ್ಕೀಡಾದ ಬಿಜೆಪಿ ನಾಯಕರು

ಆದರೆ ಪೂರ್ಣ ಪ್ರಮಾಣದ ಬಜೆಟ್‌ನ್ನೇ ಮಂಡಿಸುತ್ತಾರೆ ಎಂದು ನಿರೀಕ್ಷಿಸಿದ್ದ ರಾಜಕಾರಣಿಗಳಿಗೂ, ಮಾಧ್ಯಮ, ಪತ್ರಿಕೆಗಳಿಗೂ ಇದು ಅನಿರೀಕ್ಷಿತ. ಹೀಗಾಗಿ ಅವರು ಗಲಿಬಿಲಿಗೊಳಗಾದರು. ಅಪಹಾಸ್ಯಕ್ಕೀಡಾಗುವ ಹೇಳಿಕೆಗಳನ್ನು, ಲೋಕಸಭೆಯ ಒಳಗೆ ಭಾಷಣಗಳನ್ನು ಮಾಡಿದರು ಎಂದೂ ಪ್ರಜಾಪ್ರಭುತ್ವ ಮತ್ತು ಅದರ ಮೌಲ್ಯಗಳಿಗೆ ಬೆಲೆ ಕೊಟ್ಟವರೇ ಅಲ್ಲವಾದುದರಿಂದ, ಅದಕ್ಕೆ ವಿರುದ್ಧವಾಗಿ ತಮ್ಮ ವೈಯಕ್ತಿಕ ಪಕ್ಷ ಮತ್ತು ಕೋಮುವಾದದ ಬೆಳವಣಿಗೆಗಾಗಿ ಪ್ರಜಾಪ್ರಭುತ್ವವನ್ನು ನಾಶ ಮಾಡುವುದೇ ತಮ್ಮ ನಿತ್ಯ ಕಸುಬನ್ನಾಗಿ ಮಾಡಿಕೊಂಡಿರುವ ಬಿಜೆಪಿಯ ನಾಯಕರು ಮತ್ತು ಅವರ ಮಿತ್ರ ಪರ್ತಕರ್ತರುಗಳಿಗೆ ಬಜೆಟ್ ಅನ್ನು ಮಂಡಿಸದೆ ಲೇಖಾನುವಾದವನ್ನು ಮಂಡಿಸಿದ್ದರ ಪ್ರಜಾಸತ್ತಾತ್ಮಕ ಮಹತ್ವ ಅರಿವಾಗಲೇ ಇಲ್ಲ. ಪೂರ್ಣ ಪ್ರಮಾಣದ ಬಜೆಟ್ ನ್ನೇ ಮಂಡಿಸಿದ್ದಾರೆ ಎನ್ನುವಂತೆ ಬಜೆಟ್‌ನಲ್ಲಿ ಅದಿಲ್ಲ, ಇದು ಇರಬೇಕಾಗಿತ್ತು ಎಂಬಿತ್ಯಾದಿ ಹೇಳಿಕೆಗಳನ್ನು ನೀಡಿದರು. ಯಡಿಯೂರಪ್ಪ ಎಂಬ 20 ತಿಂಗಳ ಅರ್ಥಮಂತ್ರಿ, ಬಿಜೆಪಿ ಅಧ್ಯಕ್ಷ ಸದಾನಂದಗೌಡ ಮತ್ತು ಇತರ ನಾಯಕರು ಹಾಗೂ ಲೋಕಸಭೆಯಲ್ಲಿ ಅನಂತ್‌ಕುಮಾರ್‌ರವರು.

ಚಿದಂಬರಂ ತಿರುಗೇಟು

ಇಡೀ ಬಿಜೆಪಿಯ ಇಂತಹ ತಿಕ್ಕಲು ವರ್ತನೆಗಳಿಗೆ ಸರಿಯಾಗಿ ತಿರುಗೇಟು ನೀಡಿದವರು ಕೇಂದ್ರದ ಅರ್ಥಮಂತ್ರಿ ಚಿದಂಬರಂರವರು. ಅವರು ನೇರವಾಗಿ ಅನಂತಕುಮಾರ್‌ರವರನ್ನೇ ಉದ್ದೇಶಿಸಿ, 'ಬಜೆಟ್ ಅಂದರೇನು? ಲೇಖಾನುವಾದ ಎಂದರೇನು ಎಂಬುದನ್ನು ಮೊದಲು ಸರಿಯಾಗಿ ತಿಳಿದುಕೊಳ್ಳಿ. ಬೇಕಾದರೆ ನಿಮ್ಮ ಮಿತ್ರ ಯಡಿಯೂರಪ್ಪನವರಿಂದ ಈ ಬಗ್ಗೆ ಪಾಠ ಹೇಳಿಸಿಕೊಳ್ಳಿ, (ಯಡಿಯೂರಪ್ಪ ಮತ್ತು ಅನಂತಕುಮಾರ್‌ರವರ ನಡುವಣ ಮೈತ್ರಿ ಎಷ್ಟು ಗಾಢವಾಗಿದೆ ಎಂಬುದು ಜನಜನಿತ) ಎಂದು ಹೇಳಬೇಕಾಯಿತು. ಆದರೆ ಇಂತಹ ಪ್ರಾಥಮಿಕ ಪಾಠಗಳಿಂದ ಬಿಜೆಪಿ ನಾಯಕರ ದಪ್ಪ ಚರ್ಮಕ್ಕೆ ಏನೂ ಆಗುವುದಿಲ್ಲವೆಂಬುದು ಗೊತ್ತಿರುವ ವಿಷಯವೇ? ಆದರೆ ಪತ್ರಕರ್ತರೆಂದರೆ ಸರ್ವಜ್ಞನ ಅಪರಾವತಾರವೆಂಬಂತೆ ವರ್ತಿಸುವರಲ್ಲಿಯೂ ಅನೇಕರಿಗೆ ಲೇಖಾನುದಾನವೆಂದರೇನು ಎಂಬ ಬಗ್ಗೆ ಪ್ರಾಥಮಿಕ ಮಾಹಿತಿ ಇಲ್ಲ ಅಥವಾ ಬಿಜೆಪಿಯ ಬಗೆಗಿನ ಅವರ ಮೋಹ ಇಂತಹ ಅಗತ್ಯ ತಿಳುವಳಿಕೆಗಳ ಬಗ್ಗೆ ಅವರನ್ನು ಕುರುಡು ಆಡಿದೆ ಎಂಬ ತೀರ್ಮಾನ ಮಾಡಬೇಕಾಗಿದೆ. ಏಕೆಂದರೆ ಅನೇಕ ಪತ್ರಿಕೆ ಮಾಧ್ಯಮಗಳಲ್ಲಿ ಇದೇ ಬಜೆಟ್‌ಎಂಬಂತೆ ಅದನ್ನು ವೈಭವೀಕರಿಸಿ ಬಗೆಬಗೆಯಾಗಿ ವಿಶ್ಲೇಷಿಸಿ ವಿವರಿಸಲಾಗಿದೆ. ಇದು ಮತ್ತೊಂದು ದುರಂತ.

ಕರ್ನಾಟಕದ ಪ್ರಸ್ತುತ ಸಂದರ್ಭದಲ್ಲಿ ಶಾಸಕಾಂಗ ಉಚ್ಚ ಸಂಸ್ಥೆಯಾದ ಲೋಕಸಭೆಯ ಅಂಗೀಕಾರ ಪಡೆಯುತ್ತೇವೆ ಎಂದು ಬಜೆಟ್‌ನ್ನು ಮಂಡಿಸಿ ಅಂಗೀಕಾರ ಪಡೆಯಬಹುದಾದರೂ ಕೂಡ ಅಲ್ಲಿ ಕರ್ನಾಟಕದಿಂದ ಆಯ್ಕೆಯಾದ ಸಂಸದರು ಕರ್ನಾಟಕದ ಜನತೆಯ ಅಭಿಪ್ರಾಯವನ್ನು ಪ್ರತಿನಿಧಿಸುತ್ತಾರೆ ಎನ್ನುವ ವಾದ ಹೂಡಲು ಅವಕಾಶವಿದೆಯಾದರೂ ಸರಿಯಾದ ಕ್ರಮವಲ್ಲ. ರಾಜ್ಯದ ಜನತೆಯ ಹಕ್ಕು, ವಿಧಾನಸಭೆ ಮತ್ತು ಚುನಾಯಿತ ಸರ್ಕಾರದ ರಾಜಕೀಯದ ಇಚ್ಛೆಯ ಪ್ರತಿಫಲನವಾಗುವುದಿಲ್ಲ, ರಾಜ್ಯದ ಪರಿಸ್ಥಿತಿಯ ಬಗ್ಗೆ ಅರಿವು, ಅಧ್ಯಯನದ ಆಧಾರದ ಮೇಲೆ ರೂಪಿತವಾಗುವ ಸಾಧ್ಯತೆಗಳು ಕಡಿಮೆಯಾಗುತ್ತವೆ.

ಹೀಗಾಗಿ ಲೇಖಾನುದಾನದಲ್ಲಿ ಇಂತಹ ಯೋಜನೆಗಳು ಏಕಿವೆ? ಅವು ಸರಿಯಲ್ಲ, ಇಂತಹ ಯೋಜನೆಗಳು ಇರಬೇಕಾಗಿತ್ತು. ಇದು ಜನವಿರೋಧಿ, ಜನಪರ ಎಂದು ವಾದಿಸುವುದು ವ್ಯರ್ಥ, ಅರ್ಥಹೀನ. ಆದಷ್ಟು ಬೇಗ ಚುನಾವಣೆಗಳು ನಡೆಯಲಿ, ರಾಜ್ಯದ ಜನತೆಯ ಇಚ್ಛೆಯನ್ನು ಪ್ರತಿಫಲಿಸುವ ಸರ್ಕಾರ ರೂಪುಗೊಳ್ಳಲಿ. ಅಂತಹ ಸರ್ಕಾರ ತನ್ನ ರಾಜಕೀಯ ಸಿದ್ಧಾಂತಗಳಿಗೆ ಅನುಗುಣವಾಗಿ, ಆ ರಾಜಕೀಯ ಇಚ್ಛೆಯನ್ನು ಪ್ರತಿಫಲಿಸುವ ಬಜೆಟ್ ಮಂಡಿಸಲಿ ಎಂದಷ್ಟೇ ಆಶಿಸಬಹುದು.

ಪತ್ರಿಕೆ ಮಾಧ್ಯಮಗಳಲ್ಲಿ ಇದೇ ಬಜೆಟ್‌ಎಂಬಂತೆ ಅದನ್ನು ವೈಭವೀಕರಿಸಿ ಬಗೆಬಗೆಯಾಗಿ ವಿಶ್ಲೇಷಿಸಿ ವಿವರಿಸಲಾಗಿದೆ. ಇದು ಮತ್ತೊಂದು ದುರಂತ. ಲೇಖಾನುದಾನದಲ್ಲಿ ಇಂತಹ ಯೋಜನೆಗಳು ಏಕಿವೆ? ಅವು ಸರಿಯಲ್ಲ, ಇಂತಹ ಯೋಜನೆಗಳು ಇರಬೇಕಾಗಿತ್ತು, ಇದು ಜನವಿರೋಧಿ, ಜನಪರ ಎಂದು ವಾದಿಸುವುದು ವ್ಯರ್ಥ, ಅರ್ಥಹೀನ.

ಲೇಖಾನುದಾನ ಎಂದರೇನು?

ಲೇಖಾನುದಾನವೆಂದರೆ ಕೇವಲ ಸರ್ಕಾರದ ದೈನಂದಿನ ವೆಚ್ಚಗಳಿಗೆ ಅಗತ್ಯವಾದ ಹಣವನ್ನು ಬಿಡುಗಡೆ ಮಾಡಲು, ಅದೂ ಕೂಡ ಮೂರು ತಿಂಗಳು, ಆರು ತಿಂಗಳು ಹೀಗೆ ನಿರ್ದಿಷ್ಟ ಅವಧಿಗಾಗಿ ಮಾತ್ರ, ವಿಧಾನಸಭೆ, ಅಥವಾ ಲೋಕಸಭೆಯ ಅನುಮತಿ ಪಡೆಯುವುದು ಎಂದು ಮಾತ್ರ. ಅವುಗಳಲ್ಲಿ ಹಿಂದಿನ ಬಜೆಟ್‌ಗಳಲ್ಲಿ ಘೋಷಿತವಾಗಿ, ವಿಧಾನ ಸಭೆಯ ಲೋಕಸಭೆಯ ಮಂಜೂರಾತಿಯನ್ನು ಪಡೆದಿರುವ ಮತ್ತು ಈಗಾಗಲೇ ಜಾರಿಯಲ್ಲಿರುವ ಯೋಜನೆ, ಕಾರ್ಯಕ್ರಮಗಳಿಗೆ ಅಗತ್ಯವಾದ ಹಣವನ್ನು ಬಿಡುಗಡೆ ಮಾಡಲು ಅನುಮತಿ ಪಡೆದುಕೊಳ್ಳಲಾಗುತ್ತದೆ.

ಜನರಿಂದ ಆಯ್ಕೆಯಾದ ವಿಧಾನಸಭೆ/ಲೋಕಸಭೆಯಲ್ಲಿ ಒಟ್ಟಾರೆ ಬಜೆಟ್ ಮತ್ತು ಅದರ ವಿವಿಧ ಇಲಾಖೆಗಳ ಹಣ ನೀಡಿಕೆಗೆ ಅಂಗೀಕಾರ ಪಡೆದುಕೊಳ್ಳದೆ ಸಾರ್ವಜನಿಕ ಹಣದ ವೆಚ್ಚ ಮಾಡುವಂತಿಲ್ಲ ಎಂಬುದು ಈ ಕ್ರಮದ ಪ್ರಜಾಸತ್ತಾತ್ಮಕ ಮರ್ಮ. ಚುನಾಯಿತ ಸರ್ಕಾರಗಳಿರುವಾಗಲೂ ಕೆಲವು ವೇಳೆ ಪೂರ್ಣ ಬಜೆಟ್ ತಯಾರಿಕೆಗೆ ಅಥವಾ ಅದರ ಚರ್ಚೆಗೆ ಸಮಯವಿಲ್ಲದಿದ್ದರೆ ಲೇಖಾನು ದಾನವನ್ನು ಪಡೆಯುವ ಪದ್ಧತಿ ಇದೆ. ಕೇಂದ್ರ ಸರ್ಕಾರಗಳು ಇಂತಹ ಕ್ರಮಕ್ಕೆ ಸಾಮಾನ್ಯವಾಗಿ ಕೈಹಾಕುವುದಿಲ್ಲ. ಆದರೆ ರಾಜ್ಯ ಸರ್ಕಾರಗಳು ಅನೇಕ ಬಾರಿ ಈ ಕ್ರಮವನ್ನು ಬಳಸಿಕೊಳ್ಳುತ್ತವೆ.

ಇಂತಹ ಲೇಖಾನುದಾನದಲ್ಲಿ ಈಗಾಗಲೇ ಶಾಸಕಾಂಗದ ಅಂಗೀಕಾರ ಪಡೆದ ಯಾವ ಯೋಜನೆ, ಕಾರ್ಯಕ್ರಮಗಳನ್ನು ನಿಲ್ಲಿಸುವಂತೆಯೂ ಇಲ್ಲ, ಮೊಟಕು ಮಾಡುವುದಾಗಲೀ, ಕಡಿತ ಮಾಡುವುದಾಗಲಿ ಮಾಡುವಂತಿಲ್ಲ. ಅದೇ ರೀತಿ ಶಾಸಕಾಂಗದ ಅನುಮತಿ ಪಡೆಯದ ಹೊಸ ಯೋಜನೆಗಳನ್ನು ಘೋಷಿಸುವಂತಿಲ್ಲ. ಹೊಸ ತೆರಿಗೆಗಳನ್ನು ಹಾಕುವಂತಿಲ್ಲ.

ಬಜೆಟ್ ಎಂದರೇನು?

ಆರ್ಥಿಕ, ಸಾಮಾಜಿಕ ಬೆಳವಣಿಗೆ, ಜನತೆಯ ಜೀವನ ಪರಿಸ್ಥಿತಿಯನ್ನು ಸುಧಾರಿಸಲು ರಾಜ್ಯ ಸರ್ಕಾರದ ವೆಚ್ಚ ಹಾಗೂ ಕಾರ್ಯಕ್ರಮಗಳಿಗೆ ಬೇಕಾದ ವೆಚ್ಚವನ್ನು ಭರಿಸಲು ಆದಾಯ ಮೂಲಗಳ ಸಂಗ್ರಹಣೆ, ತೆರಿಗೆ ಮೊದಲಾದ ಮಾರ್ಗಗಳ ಬಳಕೆ, ಯಾವ ವಸ್ತುಗಳ ಮೇಲೆ ಎಷ್ಟು? ಏಕೆ? ಇವುಗಳನ್ನು ನಿರ್ಧರಿಸುವುದು. ಹೀಗೆ ಸಂಗ್ರಹಿಸಿದ ಹಣವನ್ನು ಜನತೆಯ ಹಿತಕ್ಕಾಗಿ ವೆಚ್ಚ ಮಾಡಲು ಕಾರ್ಯಕ್ರಮ ಯೋಜನೆಗಳನ್ನು ರೂಪಿಸುವುದು, ರಾಜ್ಯದ ಆಡಳಿತ ಯಂತ್ರಕ್ಕೆ ಬೇಕಾದ ಹಣವನ್ನು ಹಂಚಿಕೆ ಮಾಡುವುದು.

ಒಟ್ಟಿನಲ್ಲಿ ಬಜೆಟ್ ಎಂಬುದು ಕೇವಲ ಆರ್ಥಿಕ ದಸ್ತಾವೇಜು ಮಾತ್ರವೇ ಆಗಿರದೆ ಅದೊಂದು ರಾಜಕೀಯ ಆರ್ಥಿಕ ದಸ್ತಾವೇಜು. ಜನರಲ್ಲಿ ಬಹುಮತ ಪಡೆದ ರಾಜಕೀಯ ಪಕ್ಷದ ಸಿದ್ಧಾಂತ, ಇಚ್ಛೆಯನ್ನು ಇದು ಒಳಗೊಳ್ಳುತ್ತದೆ. ಹೀಗೆ ಬಜೆಟ್ ಮೂಲಕ ಜನತೆ ತಮ್ಮನ್ನಾಳುವ ರಾಜಕೀಯ ಪಕ್ಷದ ಸ್ವರೂಪ, ಅವರ ಗುರಿಗಳ ಬಗ್ಗೆ ಕೂಡ ತಿಳಿದುಕೊಳ್ಳಲು ಸಾಧ್ಯವಾಗುತ್ತದೆ. ಶಾಸಕಾಂಗ ಬಜೆಟ್‌ನ ಬಗ್ಗೆ ವಿವರವಾಗಿ ಪರಿಶೀಲಿಸಿ, ಚರ್ಚಿಸಿ, ಅಂಗೀಕಾರ ನೀಡಲು ಅವಕಾಶ ನೀಡುತ್ತದೆ.

ಆಶಯ

ಓ ಮುಂಜಾವಿನ ಹೊಂಬಿಸಿಲೇ
ನಮ್ಮೆಡೆಗೆ ಬಾ
ತಾಪವೇರುವ ಮುನ್ನ
ತಣ್ಣನೆಯ ಜಗವನೆಚ್ಚರಿಸ ಬಾ
ಗಿರಿಕಾನನದ ಒಳ ಹೊಕ್ಕು
ಬೆಳಕಾಗಿ ಬಾ
ಹೊತ್ತೇರುವ ಮುನ್ನ
ಗೇಣರ್ಧ ಅರಿವೆ ತತ್ವಾರದ
ಝೋಪಡಿಗಳಿಗೆ
ತುತ್ತು ಕೂಳಾಗಿ ಬಾ
ಇಳಿ ಹೊತ್ತಿನಲಿ
ಮನೆ ಮನವ ಮುಟ್ಟಿ
ಕೆಂಪಾಗಿ ಬಾ...
ಕೆಂಪಾಗಿ ಬಾ...

ಯಮುನಾ ಗಾಂವ್ಕರ್
ಕಾರವಾರ

ತೋಟ ಕಾರ್ಮಿಕರ ಕನಿಷ್ಟ ವೇತನದ ಪರಿಷ್ಕರಣೆಗೆ ಆಗ್ರಹ

ಕರ್ನಾಟಕದಲ್ಲಿ ಸುಮಾರು 5 ಲಕ್ಷಕ್ಕೂ ಅಧಿಕವಿರುವ ತೋಟ ಕಾರ್ಮಿಕರ ಸ್ಥಿತಿ ಹೇಳತೀರದು. 1999ರ ಫೆಬ್ರವರಿ ತೋಟ ಕಾರ್ಮಿಕರ ಕನಿಷ್ಟ ಕೂಲಿ ದರವನ್ನು ಪರಿಷ್ಕರಣೆ ಮಾಡಿ 80.45 ದಿನಕ್ಕೆ ರೂ. ಗಳೆಂದು ನಿಗದಿಪಡಿಸಲಾಗಿತ್ತು. ಮತ್ತೆ 2004ರ ಫೆಬ್ರವರಿಯಲ್ಲಿ ಮತ್ತೊಂದು ಬಾರಿ ತೋಟ ಕಾರ್ಮಿಕರ ಕನಿಷ್ಟ ಕೂಲಿಯನ್ನು ಪರಿಷ್ಕರಣೆ ಮಾಡಿ ಕರಡನ್ನು ಮಾತ್ರ ಪ್ರಕಟಿಸಲಾಯಿತು. ಅಂತಿಮ ನಿರ್ಧಾರ ಮಾಡಲಿಲ್ಲ. ಈಗ 2008 ಆದರೂ ಅದರ ಅಂತಿಮ ಕೂಲಿ ನಿಗದಿ ಆಗಲಿಲ್ಲ. ಜನ ಪ್ರತಿನಿಧಿಗಳ ಸಂಬಳ, ಭತ್ಯೆ ಎಷ್ಟು ಭಾರಿ ಪರಿಷ್ಕರಣೆಯಾಯಿತು. ಸರ್ಕಾರಿ ನೌಕರರ ವೇತನ ಎಷ್ಟು ಬಾರಿ ಪರಿಷ್ಕರಣೆಯಾಯಿತು. ತೋಟ ಕಾರ್ಮಿಕರು ಕೇಳುತ್ತಿರುವುದು ಇನ್ನೂ ಕನಿಷ್ಟ ಕೂಲಿಯ ಪರಿಷ್ಕರಣೆ. ಅದೂ ಕಾನೂನುಬದ್ಧವಾದುದು.

ಕನಿಷ್ಟ ಕೂಲಿ ಕಾಯ್ದೆಯು 'ಕನಿಷ್ಟ ಕೂಲಿಯನ್ನು ಕನಿಷ್ಟ ಮೂರು ವರ್ಷಗಳಿಗೊಮ್ಮೆ ಪರಿಷ್ಕರಣೆ ಅಥವಾ ಗ್ರಾಹಕ ಬೆಲೆ ಸೂಚ್ಯಾಂಕವು ಪ್ರತಿ 50 ಅಂಶ ಏರಿಕೆ ಆದರೆ ಕನಿಷ್ಟ ಕೂಲಿಯನ್ನು ಪರಿಷ್ಕರಣೆ ಮಾಡಿ ಪ್ರಕಟಿಸಬೇಕೆಂಬ ಕಾಯ್ದೆಯ ನಿಯಮಗಳನ್ನೇ ಸರ್ಕಾರ ಪಾಲಿಸುತ್ತಿಲ್ಲ. ಪಾಲಿಸುವುದಿಲ್ಲ ಏಕೆಂದರೆ ಈ ಸರ್ಕಾರ ಜನರಿಗೆ ಜವಾಬ್ದಾರಿಯಾಗಿಲ್ಲ.

ಬೆಲೆಗಳು ಏರುತ್ತಿವೆ

ಎಲ್ಲಾ ಅಗತ್ಯ ವಸ್ತುಗಳ ಬೆಲೆ ದಿನದಿಂದ ದಿನಕ್ಕೆ ಗಗನಕ್ಕೇರುತ್ತಿವೆ. ಜನರ ಕೊಳ್ಳುವ ಶಕ್ತಿ ಕ್ಷೀಣಿಸುತ್ತಿವೆ. 1999ರಲ್ಲಿ ಕನಿಷ್ಟ ಕೂಲಿಯನ್ನು ಪ್ರಕಟಿಸುವಾಗ ಗ್ರಾಹಕ ಬೆಲೆ ಸೂಚ್ಯಾಂಕ(ಸಿಪಿಐ) 1980. 5 ಅಂಶ ಇದ್ದು, 2006 ಡಿಸೆಂಬರ್ ಅಂತ್ಯಕ್ಕೆ 2767 ಅಂಶಗಳಾಗಿದ್ದು, 2007ರ ಡಿಸೆಂಬರ್ ಅಂತ್ಯಕ್ಕೆ ಇನ್ನೂ ಲೆಕ್ಕ ಹಾಕಿಲ್ಲ. ಅಂದರೆ ಈ ಎಂಟು ವರ್ಷಗಳ ಅವಧಿಯಲ್ಲಿ 1100 ಅಂಶಗಳಿಗೂ ಮೀರಿ ಗ್ರಾಹಕರ ಬೆಲೆ ಸೂಚ್ಯಾಂಕದ ಅಂಶ ಹೆಚ್ಚಾಗಿದೆ. ಇದುವರೆಗೂ 1999ರ ಕನಿಷ್ಟ ಕೂಲಿಯಲ್ಲಿ ವೇತನ ಪಡೆಯುತ್ತಿದ್ದಾರೆ. ಹೀಗಾಗಿ ಅವರ ಕೊಳ್ಳುವ ಶಕ್ತಿ ಕ್ಷೀಣಿಸಿದೆ.

> ಜನ ಚಳುವಳಿಗಳ ಒತ್ತಾಯಕ್ಕೆ ಮಣಿದು ಅಪರೂಪಕ್ಕೆಂಬಂತೆ ಕೆಲವೊಂದು ಕಾನೂನುಗಳನ್ನು ಕಾಯಿದೆಗಳನ್ನು ಜಾರಿಗೆ ತರುವ ಸರ್ಕಾರಗಳು ಅವುಗಳನ್ನು ಜಾರಿಗೊಳಿಸಲು ಮತ್ತೆ 'ಜನ ಚಳುವಳಿಗೆ ಕಾಯುವ' ನಿರ್ಲಜ್ಜ ಹೊಣೆಗೇಡಿತನ ಪ್ರದರ್ಶಿಸುತ್ತವೆ.

2002ರಲ್ಲಿ ಕನಿಷ್ಟ ಕೂಲಿ ಪರಿಷ್ಕರಣೆಯಾಗಬೇಕಿತ್ತು. ಆದರೆ ಪರಿಷ್ಕರಣೆಗೆ ಕೈಹಾಕಿದ್ದು 2004ರಲ್ಲಿ, ಇನ್ನೂ ಅಂತಿಮ ನಿಗದಿಯಾಗಿಲ್ಲ. ವಾಸ್ತವವಾಗಿ 2008ರಲ್ಲಿ 3ನೇ ಬಾರಿ ವೇತನ ಪರಿಷ್ಕರಣೆಯಾಗಬೇಕಿತ್ತು. ಜನ ಪ್ರತಿನಿಧಿಗಳೇ ರಚಿಸಿದ ಕಾನೂನಿನ ಅಂಶಗಳು ಸರ್ಕಾರದ ಗಮನದಲ್ಲಿ ಇರುತ್ತವೆಯೇ ಎಂಬುದೇ ಅನುಮಾನ. ಏಕೆಂದರೆ ಜನಪ್ರತಿನಿಧಿಗಳು ಹಾಗೂ ಸರ್ಕಾರ ಎಂಬ ಪರಿಕಲ್ಪನೆ ಒಂದಕ್ಕೊಂದು ಕರ್ನಾಟಕದಲ್ಲಿ ಸಂಬಂಧವಿಲ್ಲದಂತೆ ಆಡಳಿತ ನಡೆಸುತ್ತಿವೆ.

ಮಾರ್ಚ್ 4, 2008ರಂದು ತೋಟ ಕಾರ್ಮಿಕರು ಕರ್ನಾಟಕ ರಾಜ್ಯ ತೋಟ ಕಾರ್ಮಿಕರ ಒಕ್ಕೂಟದ ನೇತೃತ್ವದಲ್ಲಿ (ಸಿಐಟಿಯು, ಎಐಪಿಡಬ್ಲು ಎಫ್) ಎಲ್ಲಾ ಜಿಲ್ಲಾಧಿಕಾರಿಗಳ ಕಛೇರಿ ಎದುರು ಕನಿಷ್ಟ ವೇತನ ಪರಿಷ್ಕರಣೆಗಾಗಿ ಆಗ್ರಹಪಡಿಸಿದರು.

ತೋಟದಲ್ಲಿ ಕೆಲಸ ಮಾಡುವ ಕಾರ್ಮಿಕರು ಸಿಐಟಿಯು, ಎಐಪಿಡಬ್ಲುಎಫ್ ಅಡಿಯಲ್ಲಿ ಸಂಘಟಿತರಾಗಿ ಚರಿತ್ರಾರ್ಹ ಹೋರಾಟ ಮಾಡಿ ಏನೋ ಒಂಚೂರು ಸೌಲಭ್ಯ ಪಡೆದಿದ್ದಾರೆ. ಕನಿಷ್ಟ ವೇತನ ಪರಿಷ್ಕರಣೆಗಾಗಿ ರಾಜ್ಯ ಸರ್ಕಾರವನ್ನು ಆಗ್ರಹಿಸಲು ಬಂದಿದ್ದ ತೋಟ ಕಾರ್ಮಿಕರನ್ನು 'ಜನಶಕ್ತಿ' ಮಾತನಾಡಿಸಿತು. ಆಗ ತಿಳಿದುಬಂದಿದ್ದು.

ಎಪಿಎಲ್ ಎಂಬ ತ್ರಿಶಂಕು ಸ್ಥಿತಿ

1999ರಲ್ಲಿ ಕನಿಷ್ಟ ವೇತನ ನಿಗದಿಯಾಗಿದ್ದು ತಿಂಗಳಿಗೆ 2413.50 ರೂ. ಹೀಗಾಗಿ ಇವರಿಗೆ ಹಳದಿ ಕಾರ್ಡನ್ನು ನೀಡುವುದಿಲ್ಲ. ಏಕೆಂದರೆ ಬಿಪಿಎಲ್ ಪಡಿತರ ಕಾರ್ಡನ್ನು ನೀಡಲು ತಿಂಗಳಿಗೆ 1000.00 ರೂಗಳಿಗಿಂತ ಹೆಚ್ಚು ವೇತನ ಪಡೆಯುತ್ತಿರಬಾರದು. ಇಷ್ಟೇ ಅಲ್ಲ. ಇವರನ್ನು ಎಪಿಎಲ್ ಎಂದು ತೀರ್ಮಾನಿಸಿರುವುದರಿಂದ ಗ್ರಾಮ ಪಂಚಾಯತಿಯಿಂದ ನೀಡುವ ಹಲವು ಸೌಲಭ್ಯಗಳನ್ನು ನೀಡಲು ನಿರಾಕರಿಸುತ್ತಿದ್ದಾರೆ. ಹೀಗಾಗಿ ಹಳದಿ ಕಾರ್ಡು ಇಲ್ಲದಿರುವುದರಿಂದ ರೇಷನ್ ಅನ್ನು ಅಂಗಡಿಯಲ್ಲಿ ಕೊಳ್ಳಬೇಕು. ಬೆಲೆ ಗಗನಚುಂಬಿಯಾಗಿವೆ. ಗ್ರಾಮ ಪಂಚಾಯತಿಯ ವಸತಿ ಯೋಜನೆಗಳನ್ನು ನೀಡಲು ನಿರಾಕರಿಸಲಾಗುತ್ತಿದೆ. ಏಕೆಂದರೆ ಬಡತನ ರೇಖೆಯ ಕೆಳಗಿರುವವರಿಗೆ ಆದ್ಯತೆ ನೀಡುವುದಾಗಿ ಅದಿಕಾರಿಗಳು ನುಣುಚಿಕೊಳ್ಳುತ್ತಾರೆ. ಹೀಗಾಗಿ ಎಲ್ಲ ರೀತಿಯ ಸೌಲಭ್ಯಗಳಿಂದ ತೋಟ ಕಾರ್ಮಿಕರು ವಂಚನೆಗೊಳಗಾಗುತ್ತಿದ್ದಾರೆ.

ಖಾಯಂ ಕಾರ್ಮಿಕರ ಬದಲು ಸಾಂದರ್ಭಿಕವಾಗಿ, ಹಂಗಾಮಿಯಾಗಿ, ಗುತ್ತಿಗೆಯಾಗಿ ಹಾಗೂ ಚಂಗೂಲಿಗೆ ಕಾರ್ಮಿಕರನ್ನು ನೇಮಿಸಿಕೊಳ್ಳುತ್ತಿರುವುದು ಹಾಗೂ ಅವರು ಅಸಂಘಟಿತರಾಗಿ ರುವುದರಿಂದ ಅಲ್ಲಿ ಕನಿಷ್ಟ ವೇತನ ನೀಡುವುದಿಲ್ಲ. ಆದರೆ ಅವರ ಉದ್ಯೋಗ ತೋಟ ಕಾರ್ಮಿಕ ಹಾಗಾಗಿ ಬಿಪಿಎಲ್ ಕಾರ್ಡಿಲ್ಲ. ಬೇರೆ ಬೇರೆ ಸೌಲಭ್ಯ ಇಲ್ಲ. ಯಶಸ್ವಿನಿ ಇಲ್ಲ. ಏಕೆಂದರೆ ಇವರು ಸಹಕಾರಿ ಸಂಘದ ಸದಸ್ಯರಲ್ಲ. ರೈತರಿಗಾಗಿರುವ ವಿಮೆ ಅನ್ವಯವಾಗದು. ಏಕೆಂದರೆ ಇವರು ರೈತರಲ್ಲ. ಈ ಕಡೆ ಯಾವ ಸೌಲಭ್ಯವಿಲ್ಲದೆ ದುಡಿಯುವುದು ಆ ಕಡೆ ಸರಿಯಾದ ರೀತಿ ಉದ್ಯೋಗದಲ್ಲಿ ಇಲ್ಲ. ಕನಿಷ್ಟ ವೇತನದ ಪರಿಷ್ಕರಣೆಯಾಗಿಲ್ಲ ಎನ್ನುತ್ತಾರೆ.

ಕರ್ನಾಟಕದ ತೋಟ ಕಾರ್ಮಿಕರ ರಾಜ್ಯ ಒಕ್ಕೂಟದ ಪ್ರಧಾನ ಕಾರ್ಯದರ್ಶಿಗಳಾದ ವಿ.ಸುಕುಮಾರ್ "ತೋಟ ಕಾರ್ಮಿಕರ ಕುರಿತು ಹಲವು ಬಾರಿ ಸರ್ಕಾರದ ಸಲಹಾ ಸಮಿತಿಗಳಲ್ಲಿ ಲಿಖಿತ ಅಭಿಪ್ರಾಯ ನೀಡಿದರೂ ಕೂಡ ಬೇರೆಯವರ ಲಾಭಿಗೆ ಮಣಿದು ಕಾನೂನುಬದ್ಧವಾಗಿ ಕೊಡಬೇಕಾದ ಸೌಲಭ್ಯಗಳನ್ನು ನೀಡಲು ಸರ್ಕಾರ ಹಿಂದೇಟು ಹಾಕುತ್ತಿದೆ. ಅಧಿಕಾರಿಗಳೂ ಕೂಡ ಇವರನ್ನು ಪ್ರತ್ಯೇಕವಾಗಿ ಬೇರೆಯದೇ ರೀತಿಯಲ್ಲಿ ನೋಡುತ್ತಾರೆ. ಪ್ರತಿ 50 ಅಂಶ ಸಿಪಿಐ ಹೆಚ್ಚಾದಾಗ ಕೂಲಿ ಪರಿಷ್ಕರಣೆಯಾಗುವುದು ಕಾನೂನುಬದ್ಧ ಸೌಲಭ್ಯಗಳನ್ನು ಒದಗಿಸಲು ಎಐಪಿಡಬ್ಲ್ಯೂಎಫ್ ಹೋರಾಟ ಕೈಗೆತ್ತಿಕೊಂಡಿದೆ. ಈ ಹಿಂದೆಯೂ ಇದರಲ್ಲಿ ಯಶಸ್ವಿಯಾಗಿದೆ" ಎನ್ನುತ್ತಾರೆ. ತೋಟ ಕಾರ್ಮಿಕರು ಕೂಡ ಸಿಐಟಿಯು, ಎಐಪಿಡಬ್ಲ್ಯೂಎಫ್ ಮೇಲೆ ಇಟ್ಟಿರುವ ಅಚಲ ನಂಬಿಕೆಯಿಂದ ಸೌಲಭ್ಯ ಪಡೆಯುವ ಭರವಸೆ ಇಟ್ಟುಕೊಂಡಿದ್ದಾರೆ.

■ ಲಿಂಗರಾಜು ಬಿ.ಎಸ್.

ಕೊಡಗು: ಕನಿಷ್ಟ ಕೂಲಿಗಾಗಿ, ರೇಷನ್ ಕಾರ್ಡಿಗಾಗಿ ತೋಟ ಕಾರ್ಮಿಕರ ಮೆರವಣಿಗೆ - ಧರಣಿ



ತೋಟ ಕಾರ್ಮಿಕರಿಗೆ ಕನಿಷ್ಟ ಕೂಲಿ ಘೋಷಿಸಬೇಕೆಂದು ಉಚ್ಚ ನ್ಯಾಯಾಲಯ ಈಗಾಗಲೇ ಆದೇಶಿಸಿದ್ದರೂ ದೊಡ್ಡ ದೊಡ್ಡ ತೋಟ ಮಾಲಕರ ಪ್ರಭಾವಕ್ಕೊಳಗಾಗಿ ಸರ್ಕಾರ ಇದನ್ನು ಘೋಷಿಸಲು ಹಿಂಜರಿಯುತ್ತಿರುವುದನ್ನು ಪ್ರತಿಭಟಿಸಿ ಕರ್ನಾಟಕದಾದ್ಯಂತ ನಡೆದ ಧರಣಿ ಕಾರ್ಯಕ್ರಮದ ಭಾಗವಾಗಿ ಮೇ ನಾಲ್ಕರಂದು ಸಿಐಟಿಯುವಿಗೆ ಕೊಡಗು ಜಿಲ್ಲೆಯಲ್ಲಿ ನೋಂದಾಯಿತವಾಗಿರುವ ಕೊಡಗು ಡಿಸ್ಟ್ರಿಕ್ಟ್ ಜನರಲ್ ವರ್ಕರ್ಸ್ ಯೂನಿಯನ್‌ನ ಸದಸ್ಯರಾದ ತೋಟ ಕಾರ್ಮಿಕರು ಮಡಿಕೇರಿಯಲ್ಲಿ ಬೃಹತ್ ಮೆರವಣಿಗೆ ನಡೆಸಿ ಜಿಲ್ಲಾಧಿಕಾರಿಗಳ ಕಛೇರಿಯ ಮುಂಭಾಗದಲ್ಲಿ ಧರಣಿ ನಡೆಸಿದರು.

ಜಿಲ್ಲಾಧಿಕಾರಿಗಳ ಪರವಾಗಿ ಎ.ಸಿ.ಯವರು ಮನವಿ ಸ್ವೀಕರಿಸಿ ರೇಷನ್ ಕಾರ್ಡಿನ ವ್ಯವಸ್ಥೆ ಕೂಡಲೇ ಮಾಡುವುದಾಗಿ ಭರವಸೆ ಕೊಟ್ಟರು.

- ಬಡತನದ ರೇಖೆಯನ್ನು ನಿರ್ಣಯಿಸುವಲ್ಲಿ ಅವೈಜ್ಞಾನಿಕ ಸೂತ್ರವನ್ನು ಅನುಸರಿಸಿದ ಪರಿಣಾಮವಾಗಿ ತೋಟ ಕಾರ್ಮಿಕರಿಗೆ ಬಿ.ಪಿ.ಎಲ್. ರೇಷನ್ ಕಾರ್ಡ್ ಇಲ್ಲದಾಗಿದೆ. ಆದ್ದರಿಂದ ಬಿ.ಪಿ.ಎಲ್. ಕಾರ್ಡ್ ತೋಟ ಕಾರ್ಮಿಕರಿಗೂ ಕೊಡಬೇಕು.
- ನಿರಂತರ ಬೆಲೆ ಏರುತ್ತಿರುವುದರಿಂದ ತೋಟ ಕಾರ್ಮಿಕರನ್ನೊಳಗೊಂಡು ದುಡಿಯುವ ಜನರು ಸಂಕಷ್ಟಕ್ಕೆ ಒಳಗಾಗಿದ್ದಾರೆ.ಈ ಬೆಲೆ ಏರಿಕೆಗೆ ಸರ್ಕಾರದ ನೀತಿಗಳೇ ಮುಖ್ಯವಾಗಿ ಕಾರಣವಾಗಿದೆ. ಆದ್ದರಿಂದ ನಿತ್ಯೋಪಯೋಗಿ ಸಾಮಾಗ್ರಿಗಳ ಬೆಲೆ ಏರಿಕೆ ತಡೆಗಟ್ಟಲು ಸೂಕ್ತ ಕ್ರಮ ತೆಗೆದುಕೊಳ್ಳಬೇಕು.
- ತೋಟಗಳಲ್ಲಿ ಚೆಂಗೂಲಿ ಪದ್ಧತಿಯನ್ನು ಕೊನೆಗೊಳಿಸಬೇಕು.
- ವರ್ಷಗಳಿಂದ ಕೆಲಸ ಮಾಡುತ್ತಿದ್ದರೂ ತಾತ್ಕಾಲಿಕ ಕೆಲಸಗಾರರೆಂದೆ ಪರಿಗಣಿಸಿ ಇಟ್ಟಿರುವವರನ್ನು ಖಾಯಂಗೊಳಿಸಬೇಕು.
- ಚಹಾ ಮತ್ತು ಕಾಫಿ ತೋಟಗಳ ಕೆಲಸಗಾರರಿಗೆ ಬೇರೆ ಬೇರೆಯಾಗಿ ಸಂಬಳ ನಿರ್ಣಯಿಸಬೇಕು ಎನ್ನುವವುಗಳು ಉಳಿದ ಬೇಡಿಕೆಗಳಲ್ಲಿ ಪ್ರಮುಖವಾಗಿದ್ದವು.

ಮಡಿಕೇರಿಯ ಗಾಂಧಿ ಮಂಟಪದೆದುರಿನಿಂದ ಬೃಹತ್ ಮೆರವಣಿಗೆಯಲ್ಲಿ ಹೋರಾಟ ಕಾರ್ಮಿಕರು ಪಟ್ಟಣದ ಮುಖ್ಯ ಬೀದಿಗಳಲ್ಲಿ ಸಂಚರಿಸಿ ಕೋಟೆಯಲ್ಲಿರುವ ಜಿಲ್ಲಾಧಿಕಾರಿಗಳ ಕಛೇರಿಯ ಎದುರು ಧರಣಿ ನಡೆಸಿದರು.

ಎರಡು ಸಾವಿರದ ಐನೂರಕ್ಕಿಂತಲೂ ಹೆಚ್ಚು ಕಾರ್ಮಿಕರು ಭಾಗವಹಿಸಿದ್ದ ಈ ಕಾರ್ಯಕ್ರಮದಲ್ಲಿ ಬುರ್ಖಾಧಾರಿಗಳಾದ ಮಹಿಳೆಯರನ್ನೊಳಗೊಂಡು ಮಹಿಳೆಯರ ಸಂಖ್ಯೆಯೇ ಹೆಚ್ಚಾಗಿದ್ದುದು ಗಮನಾರ್ಹವಾಗಿದ್ದಿತು.

ಸಂಘಟನೆಯ ಕಾರ್ಯದರ್ಶಿ ಕಾಂ.ಮಹದೇವ, ಉಪಕಾರ್ಯದರ್ಶಿ ಕಾ.ರಮೇಶ, ಖಜಾಂಜಿ ಕಾಂ. ಚೆಲ್ಲದೊರೈ ಮೊದಲಾದವರು ಕಾರ್ಯಕ್ರಮದ ಮುಖಂಡತ್ವ ವಹಿಸಿದ್ದರು.

ಧರಣಿ ನಿರತ ಕಾರ್ಮಿಕರನ್ನುದ್ದೇಶಿಸಿ ಕಾರ್ಯದರ್ಶಿ ಮಹಾದೇವ, ಉಪಕಾರ್ಯದರ್ಶಿ ರಮೇಶ, ಅಧ್ಯಕ್ಷ ದುರ್ಗಾಪ್ರಸಾದ್, ಸಿಪಿಐ(ಎಂ) ಜಿಲ್ಲಾ ಸಂಘಟನಾ ಸಮಿತಿ ಸದಸ್ಯರಲ್ಲೊಬ್ಬರಾದ ಕಾಂ.ವಸಂತಕುಮಾರ್ ಹೊಸಮನೆ ಮಾತನಾಡಿದರು. ಪದಾಧಿಕಾರಿಗಳಲ್ಲೊಬ್ಬರಾದ ಕಾಂ:ಮಹೇಶ್ ಸ್ವಾಗತ ಮಾಡಿದರು.

■ ಡಾ. ದುರ್ಗಾಪ್ರಸಾದ್

ಭಯೋತ್ಪಾದನೆಯ ವಿರುದ್ಧ ಫತ್ವಾ

ಅಮೆರಿಕಾದ 'ಭಯೋತ್ಪಾದನೆಯ ವಿರುದ್ಧ ಸಮರ', ಅದಕ್ಕೆ ಸ್ಯಾಮುವೆಲ್ ಹಟ್ಟಿಂಗ್ಟನ್ ಮುಂತಾದ ಪಾಶ್ಚಿಮಾತ್ಯ ವಿದ್ವಾಂಸರ 'ತಾತ್ವಿಕ ಆಧಾರ' ಮತ್ತು ನಮ್ಮ ದೇಶದ ಕೋಮುವಾದಿಗಳ ಅಪಪ್ರಚಾರ ಏನೇ ಇರಲಿ, ಭಯೋತ್ಪಾದಕರಿಗೆ ಧರ್ಮವೆಂಬುದಿಲ್ಲ ಎಂಬುದು ಒಂದು ಸರಳ ಸತ್ಯ. ದೇವಬಂದ್ ನ ದಾರುಲ್ ಉಲೂಂ ನೇತೃತ್ವದಲ್ಲಿ ನಡೆದ ಸಮ್ಮೇಳನ ಭಯೋತ್ಪಾದನೆ ಇಸ್ಲಾಂ-ವಿರೋಧಿ ಎಂದು ಘೋಷಿಸಿರುವುದು ಇದನ್ನು ಮತ್ತಷ್ಟು ಸ್ಪಷ್ಟಗೊಳಿಸಿದೆ.

ಭಯೋತ್ಪಾದನೆ ಇಸ್ಲಾಂ-ವಿರೋಧಿ ಕೃತ್ಯ ಎಂದು ದಾರುಲ್ ಉಲೂಂ ಸಾರಿದೆ, ಆದ್ದರಿಂದ ಭಯೋತ್ಪಾದಕರನ್ನು ಅದು ಬಲವಾಗಿ ಖಂಡಿಸಿದೆ. ಇದು ದೇಶದ ರಾಜಕೀಯದ ಮೇಲೆ ಆಳವಾದ ಪ್ರಭಾವ ಬೀರಬಲ್ಲ ಒಂದು ಮಹತ್ವದ ಘೋಷಣೆ. ಏಕೆಂದರೆ ದಾರುಲ್ ಉಲೂಂ ವಿಶ್ವದ ಅತ್ಯಂತ ಗೌರವಾನ್ವಿತ ಇಸ್ಲಾಮೀ ಧಾರ್ಮಿಕ ಅಧ್ಯಯನ ಕೇಂದ್ರ. ಕಳೆದ ವಾರ ಇದು ಉತ್ತರ ಪ್ರದೇಶದ ಸಹರಣಪುರದ ದೇವಬಂದ್‌ನಲ್ಲಿ ಏರ್ಪಡಿಸಿದ್ದ ಅಖಿಲ ಭಾರತ 'ಭಯೋತ್ಪಾದನಾ-ವಿರೋಧಿ ಸಮ್ಮೇಳನದಲ್ಲಿ ಈ ಘೋಷಣೆ ಮಾಡಿದೆ. ದೇಶದ ಆರು ಸಾವಿರಕ್ಕೂ ಹೆಚ್ಚು ಮದರಸಾಗಳನ್ನು ಪ್ರತಿನಿಧಿಸಿದ 4000ಕ್ಕೂ ಹೆಚ್ಚು ಉಲೇಮಾಗಳು (ಇಸ್ಲಾಮೀ ಧಾರ್ಮಿಕ ವಿದ್ವಾಂಸರು) ಈ ಸಮ್ಮೇಳನದಲ್ಲಿ ಭಾಗವಹಿಸಿದ್ದರು.

ದಾರುಲ್ ಉಲೂಂ ಆರಂಭವಾದದ್ದು 1857ರ ರಾಷ್ಟ್ರೀಯ ಸಂಗ್ರಾಮದ ವೇಳೆಯಲ್ಲಿ. ದೇವಬಂದ್ ನ ಜಾಮಾ ಮಸೀದಿಯ ಅರೇಬಿಕ್ ಪಾಠಶಾಲೆಯಾಗಿ ಆರಂಭಗೊಂಡ ಅದು 1866ರಲ್ಲಿ ಉನ್ನತ ಅಧ್ಯಯನದ ಒಂದು ಸಂಸ್ಥೆಯಾಗಿ ಮಾರ್ಪಟ್ಟಿತು. ಇಲ್ಲಿನ ವಿದ್ವಾಂಸರು ದೇವಬಂದಿಗಳು ಎಂದೇ ಹೆಸರುವಾಸಿಯಾದರು. ಇವರು ಮಹಾತ್ಮಾ ಗಾಂಧಿ ಮತ್ತು ಭಾರತೀಯ ಸ್ವಾತಂತ್ರ್ಯ ಹೋರಾಟದ ಇತರ ನೇತಾರರೊಂದಿಗೆ ಸೇರಿಕೊಂಡು ಮಹತ್ವದ ಪಾತ್ರವಹಿಸಿದರು. ಹಿಂದೂಗಳು ಮತ್ತು ಮುಸಲ್ಮಾನರು ಎರಡು ಪ್ರತ್ಯೇಕ ರಾಷ್ಟ್ರ ಗಳು ಎಂಬ ಸಿದ್ಧಾಂತವನ್ನು ವಿರೋಧಿಸಿದ ಇವರು ಭಾರತೀಯ ರಾಷ್ಟ್ರವಾದವನ್ನು ಪ್ರತಿಪಾದಿಸಿದರು. 'ಭಾರತದಲ್ಲಿ ವಾಸಿಸುತ್ತಿರುವ ನಮ್ಮೆಲ್ಲರಿಗೂ ಸಾಮಾನ್ಯವಾದ ಒಂದು ಸಂಗತಿಯೆಂದರೆ ನಮ್ಮ ಭಾರತೀಯತ್ವ......ನಮ್ಮ ಧಾರ್ಮಿಕ ಮತ್ತು ಸಾಂಸ್ಕೃತಿಕ ಭಿನ್ನತೆಗಳೇನೇ ಇದ್ದರೂ..' ಎಂದಿದ್ದರು ಮೌಲಾನಾ ಮದಾನಿ.

ದೇವಬಂದ್ ನ ಸಮ್ಮೇಳನ ಒಂದು 'ಫತ್ವಾ'(ಧಾರ್ಮಿಕ ಆದೇಶ) ಹೊರಡಿಸಿ ಭಯೋತ್ಪಾದನೆ ಇಸ್ಲಾಮಿನ ಬೋಧನೆಗಳಿಗೆ ಸಂಪೂರ್ಣವಾಗಿ ವಿರುದ್ಧವಾದದ್ದು, ಏಕೆಂದರೆ ಇಸ್ಲಾಂ ಪ್ರೀತಿ ಮತ್ತು ಶಾಂತಿಯ ಪಂಥ ಎಂದಿದೆ. 'ಭಯೋತ್ಪಾದಕರು ಮತ್ತು ಭಯೋತ್ಪಾದನೆಯೊಂದಿಗೆ ನಮಗೆ ಯಾವುದೇ ರೀತಿಯ ಸಂಪರ್ಕ ಅಥವ ಸಂಬಂಧ ಇಲ್ಲ' ಎಂದು ಅದು ಸಾರಿದೆ.

ನಿಜವಾದ 'ಜಿಹಾದ್'

ಈ ಘೋಷಣೆಯ ನಂತರವಾದರೂ ಇಸ್ಲಾಮೀ ಬೋಧನೆಗಳನ್ನು ತಮ್ಮ ಮೂಲಭೂತವಾದೀ ನಿಲುವುಗಳನ್ನು, ದುರುದ್ದೇಶಗಳನ್ನು ಸಮರ್ಥಿಸಿಕೊಳ್ಳುವ ರೀತಿಯಲ್ಲಿ ವ್ಯಾಖ್ಯಾನ ಮಾಡುವ ದಾರಿತಪ್ಪಿದ ಜನಗಳಲ್ಲಿನ ಗೊಂದಲ ದೂರವಾಗಬೇಕು. ಯಾವ ಪವಿತ್ರ ಕುರಾನಿನ ಹೆಸರಲ್ಲಿ ಭಯೋತ್ಪಾದಕರು ತಮ್ಮ ಅಕ್ಷಮ್ಯ, ಅಸಮರ್ಥನೀಯ ಕೃತ್ಯಗಳನ್ನು ಸಮರ್ಥಿಸಿಕೊಳ್ಳುತ್ತಿದ್ದಾರೋ ಅದೇ ಪವಿತ್ರ ಕುರಾನ್ ಆಧಾರದಲ್ಲಿ ದೇವಬಂದ್‌ನ ಉಲೇಮಾಗಳು ಅವರ ಭಯೋತ್ಪಾದನೆಯನ್ನು ತಿರಸ್ಕರಿಸಿದ್ದಾರೆ. ದಾರುಲ್ ಉಲೂಂ ಒಂದು ಮಹಾನೇಮಿಷ್ಟ ಇಸ್ಲಾಮೀ ಪಂಥವಾಗಿದ್ದು ಅಫಘಾನಿಸ್ತಾನದ ತಾಲಿಬನ್‌ಗಳಿಗೆ ಸ್ಫೂರ್ತಿಯಾಗಿತ್ತು ಎಂದು ಹೇಳಲಾಗುತ್ತಿತ್ತು. ಆದರೆ ದೇವಬಂದ್ ನ ಉಲೇಮಾಗಳು ಇದನ್ನು ಆರಂಭದಿಂದಲೂ ನಿರಾಕರಿಸುತ್ತಾ ಬಂದಿದ್ದರು. ಈಗ ಅವರು ಮಾಡಿರುವ ಭಯೋತ್ಪಾದನೆಯ ವಿರುದ್ಧದ ಈ 'ಜಿಹಾದ್'(ಧರ್ಮಯುದ್ಧ)ನ ಘೋಷಣೆ ಅವರ ನಿಲುವನ್ನು ಸ್ಪಷ್ಟಗೊಳಿಸಿದೆ.

ಅತ್ತ ಅಮೆರಿಕನ್ ಸಾಮ್ರಾಜ್ಯಶಾಹಿ 'ಭಯೋತ್ಪಾದನೆಯ ವಿರುದ್ಧ ಜಾಗತಿಕ ಸಮರ' ಆರಂಭಿಸಿರುವ ಸಂದರ್ಭದಲ್ಲಿ ಇದನ್ನು ಗಮನಿಸಬೇಕು. ಈ 'ಸಮರ'ದ ಹಿಂದಿರುವುದು 'ನಾಗರಿಕತೆಗಳ ಸಂಘರ್ಷ' ಎಂಬ ಸ್ಯಾಮುವೆಲ್ ಹಟ್ಟಿಂಗ್ಟನ್ ಅಥವ ನಂತರದಲ್ಲಿ ಬಂದಿರುವ ಮಾರ್ಟಿನ್ ಆಮಿಸ್ ನ 'ಭೀಕರತಾವಾದದ ಯುಗ' ಮುಂತಾದ ಪಾಶ್ಚಿಮಾತ್ಯ ಸಿದ್ಧಾಂತಗಳು. ಇವು ಭಯೋತ್ಪಾದನೆಯನ್ನು ನಿರ್ದಿಷ್ಟ ಧರ್ಮದೊಂದಿಗೆ, ಜನಾಂಗಗಳೊಂದಿಗೆ ಬೆಸೆಯುವ ಕಣ್ಣೋಟಗಳು. ಆದರೆ ಭಯೋತ್ಪಾದನೆಗೆ ಧರ್ಮವೆಂಬುದಿಲ್ಲ ಎಂಬುದು ಒಂದು ಸರಳ ಸತ್ಯ. ದೇವಬಂದ್ ನ ಘೋಷಣೆ ಇದನ್ನು ಮತ್ತೊಮ್ಮೆ ತೋರಿಸಿ ಕೊಟ್ಟಿದೆ. ದಾರಿ ತಪ್ಪಿಸಲ್ಪಟ್ಟ ಅಥವಾ ಹಣದಾಸೆಗೆ ಬಿದ್ದ ಒಂದು ಸಣ್ಣ ಗುಂಪು ತನ್ನ ಉದ್ದೇಶ ಸಾಧನೆಗೆ ಧರ್ಮದ ಹೆಸರನ್ನು ಬಳಸುತ್ತಿದೆ ಎಂಬುದು ವಾಸ್ತವ.

ಭಾರತದ ಅನುಭವ

ಭಾರತದ ಸಂದರ್ಭದಲ್ಲಿ ಮುಸ್ಲಿಂ ಪುರೋಹಿತ ವರ್ಗ ಭಯೋತ್ಪಾದಕ ಹಿಂಸಾಚಾರದ ಬಗ್ಗೆ ಮೌನವಾಗಿದೆಯೇಕೆ ಎನ್ನುತ್ತಾ ಕೋಮುವಾದಿ ಶಕ್ತಿಗಳು ರಾಜಕೀಯ ಲಾಭ ಪಡೆಯುವ ಪ್ರಯತ್ನ ನಡೆಸಿದ್ದಾರೆ. ಮೊದಲನೆಯದಾಗಿ ಈ ಆಪಾದನೆಯಲ್ಲಿಯೆ ಹುರುಳಿಲ್ಲ. ಭಯೋತ್ಪಾದಕ ಹಿಂಸಾಚಾರವನ್ನು ಮುಸ್ಲಿಂ ಸಂಘಟನೆಗಳಾಗಲೀ, ಇಸ್ಲಾಮೀ ಸಂಸ್ಥೆಗಳಾಗಲೀ ಇತರ ಎಲ್ಲರಂತೆ ಖಂಡಿಸಿವೆ. ಈಗ ದಾರುಲ್ ಉಲೂಂ ಎಲ್ಲಾ ರೀತಿಗಳ ಭಯೋತ್ಪಾದಕ ಹಿಂಸಾಚಾರವನ್ನು ರಾಷ್ಟ್ರ-ವಿರೋಧಿ ಮತ್ತು ಇಸ್ಲಾಂ-ವಿರೋಧಿ ಎಂದು ಸ್ಪಷ್ಟವಾಗಿ ಘೋಷಿಸಿ, ಮುಸ್ಲಿಮರೂ ಇತರ ಎಲ್ಲಾ ಧರ್ಮಾನುಯಾಯಿಗಳಂತೆ ಹಿಂಸಾ ಚಾರವನ್ನು ತಿರಸ್ಕರಿಸುತ್ತಾರೆ ಮತ್ತು ಶಾಂತಿಯನ್ನು ಬಯಸುತ್ತಾರೆ ಎಂಬುದು ಸ್ಪಷ್ಟವಾಗಿದೆ.

ಉಗ್ರಗಾಮಿ ಮತ್ತು ಭಯೋತ್ಪಾದಕ ಚಟುವಟಿಕೆಗಳ ಬಗ್ಗೆ ಭಾರತಕ್ಕೆ ತನ್ನದೇ ಆದ ಅನುಭವವಿದೆ. ವಿವಿಧ ಧರ್ಮಗಳು, ಜಾತಿಗಳು ಅಥವಾ ಪ್ರದೇಶಗಳ ಹೆಸರಿನಲ್ಲಿ ವಿವಿಧ ಉಗ್ರಗಾಮಿ ಗುಂಪುಗಳು ಹಿಂಸಾತ್ಮಕ ಭಯೋತ್ಪಾದಕ ಚಟುವಟಿಕೆಗಳಲ್ಲಿ ತೊಡಗಿರುವುದನ್ನು, ಈಗಲೂ ತೊಡಗಿರುವುದನ್ನು ನಾವು ಕಾಣುತ್ತಿದ್ದೇವೆ. ಅವರನ್ನೆಲ್ಲಾ ನಮ್ಮ ರಾಜಕೀಯ ವ್ಯವಸ್ಥೆಯಿಂದ ದೂರೀಕರಿಸಬೇಕಾಗಿದೆ. ಇದಕ್ಕೆ ಜಾತಿ-ಮತ-ಪ್ರದೇಶಗಳ ಗಡಿಗಳನ್ನು ಮೀರಿದ ಐಕ್ಯ ಪ್ರಯತ್ನಗಳು ಅಗತ್ಯ. ಆದರೆ ಕೋಮುವಾದಿಗಳಿಗೆ ಇದು ಪಥ್ಯವಾಗುವುದಿಲ್ಲ. ಏಕೆಂದರೆ ಜನಗಳ ಧಾರ್ಮಿಕ ಭಾವನೆಗಳನ್ನು ದುರುಪಯೋಗ ಪಡಿಸಿಕೊಂಡು ತಮ್ಮ ಬೇಳೆ ಬೇಯಿಸಿಕೊಳ್ಳಲು ಅವಕ್ಕೆ ಇದರಿಂದ ಅಡ್ಡಿಯಾಗುತ್ತದೆ.

2008-09ರ ಕೇಂದ್ರ ಬಜೆಟ್‌ನಲ್ಲಿ ಧಾರ್ಮಿಕ ಅಲ್ಪಸಂಖ್ಯಾತರ ಕಲ್ಯಾಣಕ್ಕೆಂದು ತುಸು ಹಣ ನೀಡಿಕೆಯನ್ನು ಪ್ರಕಟಿಸಿದ್ದಕ್ಕಾಗಿ ಅದು 'ಕೋಮುವಾದಿ' ಎಂದು ಅಡ್ವಾಣಿಯವರು ಬಣ್ಣಿಸಿದ್ದನ್ನು ನೋಡಿ! ಸಾಚಾರ್ ಸಮಿತಿಯ ಶಿಫಾರಸುಗಳಿಗೆ ಬಿಜೆಪಿ/ಆರೆಸ್ಸೆಸ್ ವಿರೋಧದ ಹಿಂದೆಯೂ ಇರುವುದು ಇದೇ ಮನೋಭೂಮಿಕೆ. ಭಾರತೀಯ ಮುಸ್ಲಿಮರು ರಾಷ್ಟ್ರ-ವಿರೋಧಿಗಳು ಎಂಬ ಕಲ್ಪನೆ. ನಮ್ಮ ದೇಶವನ್ನು ಮತ್ತು ಸಮಾಜವನ್ನು ಬಾಧಿಸುತ್ತಿರುವುದು ಇಂತಹ ಕೋಮುದ್ವೇಷ-ತಮ್ಮ ರಾಜಕೀಯ ದುರುದ್ದೇಶಗಳ ಈಡೇರಿಕೆಗಾಗಿ ಬಹುಸಂಖ್ಯಾತ ವೋಟ್ ಬ್ಯಾಂಕನ್ನು ಸೃಷ್ಟಿಸಲಿಕ್ಕಾಗಿ ಹರಡಿಸುತ್ತಿರುವ ಕೋಮುದ್ವೇಷ. ಇದು ನಾವು ನಮ್ಮ ಜನಗಳನ್ನು ಕಿತ್ತು ತಿನ್ನುತ್ತಿರುವ ಇನ್ನೂ ಮುಖ್ಯವಾದ ಸಮಸ್ಯೆಗಳಿಗೆ ಗಮನ ನೀಡಲಾಗದಂತೆ ಮಾಡಿದೆ.

ಇಂತಹ ಸಂದರ್ಭದಲ್ಲಿ ದೇವಬಂದ್ ಘೋಷಣೆ ನಮ್ಮ ದೇಶದಲ್ಲಿ ಜಾತ್ಯಾತೀತ ಪ್ರಜಾಪ್ರಭುತ್ವದ ಶಕ್ತಿಗಳನ್ನು ಮತ್ತು ನಮ್ಮ ಬಹುಧರ್ಮೀಯ, ಬಹುಭಾಷಿಕ, ಬಹುಸಂಸ್ಕೃತಿಗಳ ಬಹುರೂಪೀ ಸಮಾಜದ ಐಕ್ಯತೆಯನ್ನು ಬಲಗೊಳಿಸಬೇಕು.

ಈಶಾನ್ಯ ಕಣಿವೆಯಲ್ಲಿ 'ಚಕ್ ದೆ' ಲಾಲ್ ಜಂಡಾ

ತ್ರಿಪುರ ವಿಧಾನಸಭೆಗೆ ಫೆಬ್ರವರಿ 23ರಂದು ನಡೆದ ಚುನಾವಣೆಯಲ್ಲಿ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷ ನೇತೃತ್ವದ ಎಡರಂಗ ಭರ್ಜರಿ ಜಯ ಸಾಸಿದೆ. ಮೂರನೆ ನಾಲ್ಕರಷ್ಟು ಬಹುಮತ ನೀಡುವುದರೊಂದಿಗೆ ಸತತ ನಾಲ್ಕನೆ ಬಾರಿ ತ್ರಿಪುರ ಜನತೆ ಎಡರಂಗವನ್ನು ಆಯ್ಕೆ ಮಾಡಿದ್ದಾರೆ. ಕಾಂಗ್ರೆಸ್ ಪಕ್ಷ ಸೇರಿದಂತೆ, ಪ್ರತ್ಯೇಕವಾದಿಗಳು, ಎಡತೀವ್ರವಾದಿ ಗುಂಪುಗಳನ್ನು ತ್ರಿಪುರ ಮತದಾರರು ದೂಳೀಪಟ ಮಾಡಿದ್ದಾರೆ.

60 ಸ್ಥಾನಗಳ ವಿಧಾನಸಭೆಗೆ ನಡೆದ ಚುನಾವಣೆಯಲ್ಲಿ ಎಡರಂಗ 49 ಸ್ಥಾನಗಳನ್ನು ಗೆದ್ದಿದೆ. ಸಿಪಿಎಂ ಪಕ್ಷವೇ 46 ಸ್ಥಾನಗಳಲ್ಲಿ ಜಯಗಳಿಸಿದ್ದು ಆರ್‌ಎಸ್‌ಪಿ 2 ಮತ್ತು ಸಿಪಿಐ 1ಸ್ಥಾನ ಗಳಿಸಿದೆ. ಸೀಟು ಹಂಚಿಕೆಗೆ ಸಂಬಂಸಿದಂತೆ ತಲೆದೋರಿದ ಭಿನ್ನಾಭಿಪ್ರಾಯಗಳಿಂದ ಎಡರಂಗ ತೊರೆದು 12 ಸ್ಥಾನಗಳಲ್ಲಿ ಸ್ಪರ್ಸಿದ್ದ ಫಾರ್ವರ್ಡ್ ಬ್ಲಾಕ್ ಶೂನ್ಯ ಸಂಪಾದನೆ ಮಾಡಿದೆ.

ಕಾಂಗ್ರೆಸ್ ಮತ್ತು ಇಂಡಿಜೀನಸ್ ನ್ಯಾಷನಲ್ ಪಾರ್ಟಿ ಆಫ್ ತ್ರಿಪುರ (ಐಎನ್‌ಪಿಟಿ) ಎಂದಿನಂತೆ ಎಡರಂಗದ ಆಡಳಿತದ ವಿರುದ್ಧ ಇನ್ನಿಲ್ಲದ ಆರೋಪಗಳಲ್ಲಿ ತೊಡಗಿದ್ದರು. ಸಿಪಿಎಂ ಪಕ್ಷ ಅಧಿಕಾರದಲ್ಲಿ ಉಳಿಯಲು ವ್ಯವಸ್ಥಿತ ರಿಗ್ಗಿಂಗ್‌ನಲ್ಲಿ ತೊಡಗುತ್ತಾ ಬಂದಿದೆ ಎಂತಲೂ ದೂರಿದ್ದರು.

ಎಡರಂಗದ ವಿರುದ್ಧ ಸೋನಿಯಾ ಗಾಂಧಿ ಆದಿಯಾಗಿ ಕೇಂದ್ರ ವಿದೇಶಾಂಗ ಸಚಿವ ಪ್ರಣವ್ ಮುಖರ್ಜಿ, ವಾರ್ತಾ ಸಚಿವ ಪ್ರಿಯರಂಜನ್ ದಾಸ್ ಮುನ್ಷಿ, ಕೈಗಾರಿಕಾ ಸಚಿವ ಸಂತೋಷ್ ಮೋಹನ್ ದೇವ್ ಚುನಾವಣಾ ಪ್ರಚಾರದಲ್ಲಿ ತೊಡಗಿದ್ದರು. ಆದರೆ ಅವರೆಲ್ಲ ಸಿಪಿಎಂ ಪಕ್ಷದ ಸಂಘಟನಾ ಶಕ್ತಿಯನ್ನು ಮರೆತಿದ್ದರು ಎಂದು ಕಾಣುತ್ತದೆ. ಈ ಎಲ್ಲ ಪಕ್ಷಗಳಿಗೆ ಅಲ್ಲಿನ ಜನತೆ ತಕ್ಕ ಉತ್ತರ ನೀಡಿದ್ದಾರೆ. ಕಾಂಗ್ರೆಸ್ ಹತ್ತು ಸ್ಥಾನ ಗಳಿಸುವಲ್ಲಿ ಯಶಸ್ವಿಯಾಗಿದ್ದರೆ, ಐಎನ್‌ಪಿಟಿ ಒಂದು ಸ್ಥಾನ ಮಾತ್ರ ಗೆದ್ದಿದೆ. ಕಳೆದ ವಿಧಾನಸಭೆಯಲ್ಲಿ ಐಎನ್‌ಪಿಟಿ ಆರು ಸದಸ್ಯರನ್ನು ಹೊಂದಿತ್ತು.

20.36 ಲಕ್ಷ ಮತದಾರರಿರುವ ತ್ರಿಪುರಾದಲ್ಲಿ ಶೇಕಡ 92.33ರಷ್ಟು ದಾಖಲೆ ಪ್ರಮಾಣದ ಮತ ಚಲಾವಣೆಯಾಗಿತ್ತು. ಸಂಪೂರ್ಣವಾಗಿ ಭಾವಚಿತ್ರ ಸಹಿತ ಮತದಾನ ಗುರುತಿನ ಚೀಟಿ ಮತ್ತು ವಿದ್ಯುನ್ಮಾನ ಯಂತ್ರಗಳನ್ನು ಬಳಕೆ ಮಾಡಲಾಗಿತ್ತು.

ಎಡರಂಗ ಸರ್ಕಾರ ತನ್ನ ಅಧಿಕಾರಾವಧಿಯಲ್ಲಿ ಅಲ್ಲಿನ ಜನತೆಯ ಜೀವನ ಮಟ್ಟ ಗಣನೀಯ ಪ್ರಮಾಣದಲ್ಲಿ ಹೆಚ್ಚಿಸಲು ಕೈಗೊಂಡ ಕಾರ್ಯಕ್ರಮಗಳು, ಸುಸ್ಥಿರ ಮತ್ತು ಅಭಿವೃದ್ಧಿ ಕಾರ್ಯಸೂಚಿಯೊಂದಿಗೆ ನಡೆಸಿದ ಆಡಳಿತ ಬುಡಕಟ್ಟು ಮತ್ತು ಆದಿವಾಸಿಗಳಲ್ಲಿ ನಂಬಿಕೆ,

ಪುಟ 12 ಕ್ಕೆ



ಜನತೆಯ ಹಲವು ಬಗೆಯ ತಿರಸ್ಕಾರಗಳಿಂದ ಹತಾಶರಾದ ಕೋಮುವಾದಿ ಸಂಘ ಪರಿವಾರ - ಬಿಜೆಪಿಯವರು ಸುಳ್ಳು ನೆಪಗಳನ್ನು ಹಿಡಿದು ರಾಜಕೀಯ ವಿರೋಧಿಗಳ ಮೇಲೆ ಎರಗಿದ್ದಾರೆ. ಸಿಪಿಐ(ಎಂ) ಕೇಂದ್ರ ಸಮಿತಿ ಕಛೇರಿ, ರಾಜ್ಯ ಕಾರ್ಯದರ್ಶಿ ವಿ.ಜೆ.ಕೆ.ನಾಯರ್ ಮನೆ ಮೇಲೆ ಧಾಳಿ.... ಹೀಗೆ ಸಾಗಿದೆ ಅವರ ಬರ್ಬರ ಧಾಳಿ



ದೇಶಾದ್ಯಂತ ಹಲವು ಸಿಪಿಐ(ಎಂ) ಕಛೇರಿಗಳ ಮೇಲೆ ಧಾಳಿ

ಬಿಜೆಪಿಯ ಗೂಂಡಾಗಿರಿಗೆ ಮಾದರಿ ಇದು !

ಆರ್.ರಾಮಕೃಷ್ಣ

ಮೊನ್ನೆ ಮೊನ್ನೆ ತಾನೆ ಈಶಾನ್ಯ ರಾಜ್ಯದ ವಿಧಾನಸಭಾ ಚುನಾವಣೆಗಳ ಫಲಿತಾಂಶಗಳು ಬಂದವು. ತ್ರಿಪುರ ಎಂಬ ಪುಟ್ಟ ರಾಜ್ಯದಲ್ಲಿ ಒಂದು, ವಿಶೇಷ. ಅಲ್ಲಿ ಎಡರಂಗ ಸತತ ನಾಲ್ಕನೆ ಬಾರಿಗೆ ವಿಜಯ ದಾಖಲಿಸಿತು. ಈ ಬಾರಿ ಕಳೆದ ಬಾರಿಗಿಂತ ಹೆಚ್ಚು ಮತ ಮತ್ತು ಸ್ಥಾನಗಳನ್ನು ಪಡೆದು ಎಡರಂಗ ಜಯಬೇರಿ ಬಾರಿಸಿತು.

ಏನಿದು! ಪಶ್ಚಿಮ ಬಂಗಾಳ, ತ್ರಿಪುರಗಳಲ್ಲಿ ಮಾತ್ರ ಅದೂ ಸಿಪಿಐ(ಎಂ)- ಎಡರಂಗಗಳು ಆಳ್ವಿಕೆ ನಡೆಸಿದ ರಾಜ್ಯಗಳಲ್ಲಿ ಮಾತ್ರ ಹೀಗೆ ಆಳುವ ಪಕ್ಷಕ್ಕೆ ಸತತ ಜಯ. ಬೇರೆ ಪಕ್ಷಗಳಿಗೆ ಇಂತಹ ಹೆಗ್ಗಳಿಕೆ ಇಲ್ಲ. ಎಡರಂಗದ ಜನ ಪರ ನೀತಿ, ಜನಪರ ಹೋರಾಟ ಮತ್ತೊಮ್ಮೆ ರಾಷ್ಟ್ರದ ಜನರ ಗಮನ ಸೆಳೆಯುತ್ತಿದೆ.

ಎ.ಕೆ.ಗೋಪಾಲನ್ ಭವನದಲ್ಲಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕೇಂದ್ರ ಸಮಿತಿ ಸಭೆ. ಅಲ್ಲಿ ಚರ್ಚಿಸಲಾಗುವುದಾದರೂ ಏನು? ದೇಶದ ಜನತೆ, ದುಡಿಯುವ ಜನತೆ ಅನುಭವಿಸುತ್ತಿರುವ ಸಂಕಟಗಳೇನು? ಅದಕ್ಕಾಗಿ ಕೇಂದ್ರ ಯುಪಿಎ ಸರ್ಕಾರದ ಮೇಲೆ ಯಾವ ಒತ್ತಡ ಹೇರಬೇಕು. ಯಾವ ಹೋರಾಟ ಮಾಡಬೇಕು.

ಭಾರತವನ್ನು ತನ್ನ ಸುಲಿಗೆಯ ಬಲೆಗೆ ಸೆಳೆದುಕೊಳ್ಳಲು ಅಮೇರಿಕಾ ಹೂಡಿರುವ ತಂತ್ರವೇನು? ಅಣು ಒಪ್ಪಂದ ವಿಚಾರದಲ್ಲಿ ಅದು ನಡೆಸುತ್ತಿರುವ ಮಸಲತ್ತೇನು? ಈ ಕೇಂದ್ರ ಸರ್ಕಾರದ ಚಂಚಲತೆ ಏನು?

ಕಲ್ಲಿನ ಧಾಳಿ

ಹೀಗೆಲ್ಲಾ ಚರ್ಚೆ ನಡೆಸಿ ಅದಕ್ಕೆ ತಕ್ಕ ಕಾರ್ಯತಂತ್ರ ರೂಪಿಸುವ ಸಭೆ ಅದು. ಅಂದು ಭಾನುವಾರ ಸಭೆ ನಡೆಯುತ್ತಿದೆ. ಗೋಲ್ ಮಾರ್ಕೆಟ್ ಪ್ರದೇಶದ ಎಕೆಜಿ ಭವನಕ್ಕೆ ಸಮೀಪದಲ್ಲೇ ಹಿಂದೂ ಮಹಾಸಭಾದ ಕಾರ್ಯಾಲಯ ಹತ್ತಿರ ಹತ್ತಿರ 200 ಜನರು ಅಲ್ಲಿ ಗುಂಪು ಗೂಡಿದ್ದಾರೆ. ಎಲ್ಲವೂ ಪೂರ್ವಯೋಜಿತ. ಅಲ್ಲಿದ್ದ ಕೆಲವರು ಪೋಲೀಸರೊಂದಿಗೆ ವಾದ ಮಾಡುತ್ತಾರೆ. ಎಕೆಜಿ ಭವನಕ್ಕೆ ಮೆರವಣಿಗೆ ಹೋಗಬೇಕೆನ್ನುತ್ತಾರೆ. ಈ ಮಾತುಕತೆ ನಡೆಯುತ್ತಿರುವಾಗಲೇ ಅಲ್ಲಿಂದ ಹಲವು ಗುಂಪುಗಳು ತಮ್ಮ ವಾಹನಗಳಲ್ಲಿ ಜಾಗ ಖಾಲಿ ಮಾಡುತ್ತವೆ. ಮತ್ತೆ ಅವರು ಪ್ರತ್ಯಕ್ಷವಾಗಿದ್ದು ಎಕೆಜಿ ಭವನದ ಮುಂದೆ, ಅವರ ವಾಹನಗಳಲ್ಲಿ, ಚೀಲಗಳಲ್ಲಿ ಕಲ್ಲುಗಳ ರಾಶಿ!

ಅಲ್ಲಿ ಬಂದವರೇ, ಎಕೆಜಿ ಭವನದ ಮೇಲೆ ಕಲ್ಲುಗಳ ಧಾಳಿ ಆರಂಭಿಸುತ್ತಾರೆ. ಎಕೆಜಿ ಭವನದ ಕಿಟಕಿ ಗಾಜುಗಳನ್ನು ಪುಡಿ ಮಾಡುತ್ತಾರೆ. ಪಕ್ಷದ ಮುಖಂಡರು ಬಳಸುವ ಕಾರುಗಳ ಮೇಲೆ ದಾಳಿ. ಸಿಪಿಐ(ಎಂ) ಪಕ್ಷದ ಕಾರ್ಯಕರ್ತರು, ಮುಖಂಡರು ಮೇಲೆ ಮಾರಕ ದಾಳಿ ನಡೆಸುತ್ತಾರೆ. ಕಛೇರಿ ಒಳಕ್ಕೆ ಸಹ ನುಗ್ಗಲು ಯತ್ನಿಸುತ್ತಾರೆ. ಸಿಪಿಐ(ಎಂ)ನ ಕಾಯಕರ್ತರ ಪ್ರತಿರೋಧದಿಂದ ಇದು ಸಾಧ್ಯವಾಗುವುದಿಲ್ಲ. ಅವರು ದಾರಿಗೆ ಅಡ್ಡ ನಿಂತು ಒಳ ನುಗ್ಗುವವರನ್ನು ತಡೆಯುತ್ತಾರೆ.

ಪಕ್ಷದ ಕೇಂದ್ರ ಸಮಿತಿ ಸದಸ್ಯರಾದ ಹರಿಸಿಂಗ್ ಕಾಂಗ್, ವಿ.ಶ್ರೀನಿವಾಸರಾವ್, ಜೋಗೇಂದ್ರ ಶರ್ಮ, ಕುಮಾರ್ ಶಿರಾಲ್‌ಕರ್, ಪುಷ್ಪೇಂದ್ರರ್ ಗ್ರೇವಾಲ್, ಅವರಿಗೆ, ಇದಲ್ಲದೆ ಐವರು ಕಾರ್ಯಕರ್ತರಿಗೆ ಕಲ್ಲುಗಳ ಏಟುಗಳು ಬೀಳುತ್ತವೆ.

ಎಂತಹ ಸಂಸ್ಕೃತಿ?

ಈ ದಾಳಿಗಳ ನೇತೃತ್ವ ವಹಿಸಿದವರು ಪ್ರಚೋದಿಸಿದವರು ಯಾರೂ ಗೊತ್ತೆ? ಸಾಮಾನ್ಯರೇನೂ ಅಲ್ಲ. ಆಕೆ ದೆಹಲಿಯ ಮೇಯರ್ ಆರತಿ ಮೆಹ್ರಾ. ಮತ್ತೊಬ್ಬ ಪುಣ್ಯಾತ್ಮ ದೆಹಲಿಯ ವಿಧಾನಸಭೆಯ ವಿರೋಧ ಪಕ್ಷದ ನಾಯಕ, ಭಾವಿ ಮುಖ್ಯಮಂತ್ರಿ ಅಭ್ಯರ್ಥಿ ಜಗದೀಶ್ ಮುಖಿ. ಮತ್ತೆ ಅವರೆಲ್ಲಾ ಬಿಜೆಪಿ ಪಕ್ಷದವರು ಅಂತಾ ಬೇರೆ ಬಿಡಿಸಿ ಹೇಳಬೇಕಾಗಿಲ್ಲವಲ್ಲ. ಈ ನೀಚ ದಾಳಿಯ ಸಂಬಂಧ ಬಂಧಿಸಲಾಗಿರುವ 14 ಜನರಲ್ಲಿ ಇಬ್ಬರು ಬಿಜೆಪಿ ಮಾಜಿ ಶಾಸಕರು ಹಾಗೂ ಆರು ಜನ ದೆಹಲಿಯ ಕಾರ್ಪೋರೇಷನ್‌ನ ಹಾಲಿ ಕೌನ್ಸಿಲರ್‌ಗಳು!

ಆಹಾ... ಏನು ಸಂಸ್ಕೃತಿ. ರಾಷ್ಟ್ರೀಯ ರಾಜಕೀಯ ಪಕ್ಷದ ಕೇಂದ್ರ ಕಛೇರಿಯ ಮೇಲೆ ಕಲ್ಲಿನ ದಾಳಿ. ಇದೇನು ಶಿಲಾರ್ಚನೆಯೇ? ಧರ್ಮ, ಸಂಸ್ಕೃತಿ, ನೈತಿಕತೆ, ದೇಶ ಪ್ರೇಮ ಎಲ್ಲವನ್ನೂ ಗುತ್ತಿಗೆಗೆ ತೆಗೆದುಕೊಂಡಿರುವ ಪಕ್ಷದ ಮುಖಂಡರು ತಮ್ಮ ಸಂಸ್ಕೃತಿಗೆ ತಕ್ಕಂತೆಯೇ ವರ್ತಿಸಿದ್ದಾರೆ. ಏನಾಶ್ಚರ್ಯ ಅದರಲ್ಲಿ.



ವಿ.ಜೆ.ಕೆ. ಮನೆ ಮೇಲೆ ಆರ್‌ಎಸ್‌ಎಸ್ ಗೂಂಡಾಗಳ ದಾಳಿ

ಅಂದು ಮಾರ್ಚ್ 9 ರಾತ್ರಿ 10.30ರ ಸುಮಾರಿಗೆ 6 ಜನ ಮುಸುಕು ದಾರಿ ಆರ್‌ಎಸ್‌ಎಸ್ ಗೂಂಡಾಗಳು ಮನೆಯೊಳಗೆ ಹಠಾತ್ ಧಾಳಿ ನಡೆಸಿ ಕೈಗೆ ಸಿಕ್ಕಿದ ಎಲ್ಲ ವಸ್ತುಗಳನ್ನು ಧ್ವಂಸ ಮಾಡಿದರು. ಇದು ಕಥೆಯಲ್ಲ, ನೈಜ ಘಟನೆ. ಇದು ನಡೆದಿರುವುದು ಬೇರೆಲ್ಲೂ ಅಲ್ಲ ಸಿಪಿಐ(ಎಂ)ನ ಕರ್ನಾಟಕ ರಾಜ್ಯ ಕಾರ್ಯದರ್ಶಿ ವಿಜೆಕೆ ನಾಯರ್‌ರವರ ಮನೆಯಲ್ಲಿ. ಅಂದು ವಿಜೆಕೆ ನಾಯರ್‌ರವರು ಊರಿನಲ್ಲಿರಲಿಲ್ಲ. ಬೆಂಗಳೂರಿನ ಗಂಗಮ್ಮ ವೃತ್ತದಲ್ಲಿರುವ ಅವರ ಮನೆಯಲ್ಲಿ ಪತ್ನಿ ರಾಜಮ್ಮ ಒಬ್ಬರೇ ಇದ್ದರು. ರಾತ್ರಿ 8 ಗಂಟೆಗೆ ಒಬ್ಬ ವ್ಯಕ್ತಿ ವಿಜೆಕೆಯವರನ್ನು ಕೇಳಿಕೊಂಡು ಬಂದ. ಆಗ ರಾಜಮ್ಮನವರು ಅವರು ಮನೆಯಲ್ಲಿಲ್ಲ ನಾಳೆ ಬರುತ್ತಾರೆ ಎಂದರು. ಮನೆಯ ಒಳಗೆ ಪ್ರವೇಶಿಸಲು ಪ್ರಯತ್ನಿಸಿದ ಅವನನ್ನು ತಡೆದು ರಾಜಮ್ಮ ವಾಪಸ್ ಕಳುಹಿಸಿದರು. ಅವನು ಕಂಠಪೂರ್ತಿ ಕುಡಿದಿದ್ದ. ಅವನು ಕೆಲಸ ಕೇಳಿಕೊಂಡು ಅಲ್ಲಿಗೆ ಬಂದಿದ್ದನು. ಆದ್ದರಿಂದ ರಾಜಮ್ಮನವರು ಹೆಚ್ಚು ತಲೆ ಕೆಡಿಸಿಕೊಳ್ಳಲಿಲ್ಲ. ಏಕೆಂದರೆ ವಿಜೆಕೆಯವರು ಸಿಐಟಿಯುವಿನ ರಾಜ್ಯಪ್ರಧಾನ ಕಾರ್ಯದರ್ಶಿ ಯಾಗಿರುವುದರಿಂದ ತುಂಬ ಜನ ಅವರನ್ನು ಕೇಳಿಕೊಂಡು ಬರುತ್ತಿದ್ದರು. ರಾಜಮ್ಮ ಊಟ ಮಾಡಿ ಮಲಗುವ ಸಮಯ ರಾತ್ರಿ 10.30ರಲ್ಲಿ ಮನೆಯ ಕಾಲಿಂಗ್ ಬೆಲ್ ಶಬ್ದವಾಯಿತು. ವಿಜೆಕೆ ಯವರು ಬಂದಿರಬಹುದೆಂದು ತಿಳಿದ ರಾಜಮ್ಮನವರು ಬಂದು ಬಾಗಿಲನ್ನು ತೆರೆದರು. ತಕ್ಷಣ ಒಳನುಗ್ಗಿದ 6 ಜನ ಮುಸುಕುದಾರಿಗಳು ವಿಜೆಕೆ ಎಲ್ಲಿ ಎಂದು ಕೇಳಿದರು. ಅವರು ಊರಲ್ಲಿಲ್ಲ ಎನ್ನುವಷ್ಟರಲ್ಲಿ ಒಬ್ಬನ ಚಾಕು ರಾಜಮ್ಮನ ಕುತ್ತಿಗೆಯ ಮೇಲಿತ್ತು. ಎಲ್ಲ ಕೈಯಲ್ಲಿ ಚಾಕು, ಮಚ್ಚು, ರಾಡುಗಳಂತ ಮಾರಕಾಸ್ತ್ರಗಳಿದ್ದವು. 'ನೀವು ಕಮ್ಯುನಿಸ್ಟರೇ? ನಿನ್ನ ತಲೆಯನ್ನು ಹಾರಿಸಿಬಿಡುತ್ತೇವೆ. ಸಾಯಿಸುತ್ತೇನೆ' ಎಂದು ಬೆದರಿಕೆ ಹಾಕಿದ. ಗಾಬರಿಗೊಂಡ ರಾಜಮ್ಮನನ್ನು ಕುರ್ಚಿಯ ಮೇಲೆ ಕೂರಲು ಹೇಳಿದ ದುಷ್ಕರ್ಮಿಗಳು ಮನೆಯ ಎಲ್ಲ ಕೋಣೆಗಳಿಗೂ ಹೋಗಿ ವಿಜೆಕೆ ನಾಯರ್‌ರವರನ್ನು ಹುಡುಕಿದರು. ಆದರೆ ವಿಜೆಕೆ ಮನೆಯಲ್ಲಿರಲಿಲ್ಲ. ಅವರು ಕೇರಳದ ಕಾಸರಗೋಡಿನ ಕಾರ್ಯಕ್ರಮವೊಂದರಲ್ಲಿದ್ದರು.


ರಾಜಮ್ಮ


ವಿಜೆಕೆ ನಾಯರ್

ವಿಜೆಕೆ ಇಲ್ಲದ್ದನ್ನು ಖಚಿತಪಡಿಸಿಕೊಂಡ ಗೂಂಡಾಗಳು ತಮ್ಮ ಕೈಯಲ್ಲಿದ್ದ ಮಾರಕಾಸ್ತ್ರಗಳಿಂದ ಟಿ.ವಿ, ಫ್ರಿಡ್ಜ್, ಶೋಕೇಸ್, ಕಿಟಕಿಯ ಗಾಜುಗಳು ಜೊತೆಗೆ ಮನೆಯಲ್ಲಿದ್ದ ಎಲ್ಲಾ ಸಾಮಾನುಗಳನ್ನು ಪುಡಿಮಾಡಿ, 'ನೀವು ಕೇರಳದಲ್ಲಿ ಕಮ್ಯೂನಿಸಂನ್ನು ಬೋಧನೆ ಮಾಡ್ತೀರಾ' ಎಂದು ಹೇಳಿ ಹೊರಟರು. ಹೊರಹೋಗಿದ್ದವರಲ್ಲಿ ಒಬ್ಬ ವಾಪಸ್ ಒಳಗೆ ಬಂದು ಮನೆಯಲ್ಲಿದ್ದ ವಿಜೆಕೆಯವರ ಲ್ಯಾಪ್‌ಟಾಪ್ ಮತ್ತು ಕೆಲವು ಸಿಡಿಗಳನ್ನು ತೆಗೆದುಕೊಂಡು ಹೋಗಿದ್ದಾನೆ. ಗೂಂಡಾಗಳು ಕುಡಿದಿದ್ದು ಅವರಲ್ಲಿ ಮೂವರು ಮುಖಕ್ಕೆ ಬಟ್ಟೆಯನ್ನು ಕಟ್ಟಿಕೊಂಡಿದ್ದು ಒಬ್ಬ ಮಾತ್ರ ಹೊರಗೆ ಬಾಗಿಲಲ್ಲಿ ನಿಂತು ಎಲ್ಲವನ್ನೂ ವೀಕ್ಷಿಸಿ ಇವರುಗಳಿಗೆ ಮಾರ್ಗದರ್ಶನ ನೀಡುತ್ತಿದ್ದ. ರಾತ್ರಿ 8 ಗಂಟೆಗೆ ಬಂದಿದ್ದವನೇ ಇವರನ್ನೆಲ್ಲ ಕರೆದುಕೊಂಡು ಬಂದಿದ್ದ ಅವನನ್ನು ರಾಜಮ್ಮನವರು ಸುಲಭವಾಗಿ ಪತ್ತೆಹಚ್ಚುತ್ತಾರೆ. ತಕ್ಷಣ ಅಕ್ಕಪಕ್ಕದ ಮನೆಯವರಿಗೆ ಸುದ್ದಿ ತಿಳಿದು ಎಲ್ಲರೂ ಬಂದರು. ಕೂಡಲೇ ಪಕ್ಷದ ರಾಜ್ಯಸಮಿತಿ ಕಛೇರಿಗೆ ಕರೆ ಮಾಡಿದರು. ಪಕ್ಷದ ಮುಖಂಡರು ತಲುಪಿದರು. ಜೊತೆಗೆ ಪೊಲೀಸ್ ತಂಡ ಭೇಟಿ ನೀಡಿ ಪರಿಶೀಲಿಸಿ ಬೆರಳಚ್ಚು ಮತ್ತು ದುಷ್ಕರ್ಮಿಗಳು ಬಿಟ್ಟುಹೋಗಿದ್ದ ಮಾರಕಾಸ್ತ್ರಗಳನ್ನು ವಶಪಡಿಸಿಕೊಂಡು ಗಂಗಮ್ಮ ಗುಡಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿಕೊಂಡು ತನಿಖೆ ಮುಂದುವರೆಸಿದ್ದಾರೆ. ಮನೆಯಿಂದ ಪೊಲೀಸ್ ನಾಯಿಗಳು ಪಕ್ಕದ ಪ್ರದೇಶಕ್ಕೆ ತೆರಳಿವೆ. ಅಲ್ಲೊಂದು ಆರ್‌ಎಸ್‌ಎಸ್ ಕಛೇರಿಯೂ ಉಂಟು!



■ ಹೆಚ್.ಆರ್.ನವೀನ್‌ಕುಮಾರ್

ಪಾದುಕಾಯಾತ್ರೆ, ಇಟ್ಟಿಗೆ ಯಾತ್ರೆ, ರಥಯಾತ್ರೆಗಳನ್ನು ನಡೆಸಿ ಅಸಂಖ್ಯಾತ ಮುಗ್ಧ ಜನರ ರಕ್ತದ ಕೋಡಿ ಹರಿಸಿ ಅಧಿಕಾರ ಸ್ಥಾನದ ಮೇಲೇರಿದವರು. ಒಂದು ಐತಿಹಾಸಿಕ ಕಟ್ಟಡವನ್ನು ಒಂದು ಧರ್ಮದ ಧಾರ್ಮಿಕ ಶ್ರದ್ಧಾ ಕೇಂದ್ರವನ್ನು ನಿರ್ಲಜ್ಜವಾಗಿ ಹಾರೆ ಪಿಕಾಸಿಗಳಿಂದ ಧ್ವಂಸ ಮಾಡಿದವರು, ಇನ್ನೇನು ತಾನೇ ಮಾಡಬಲ್ಲರು.

ಅವರ ಆಕ್ರೋಶವಾದರೂ ಅರ್ಥವಾಗುವಂತಹದ್ದೆ. 1996ರಲ್ಲಿ ಕೈಗೆ ಬಂದ ಅಧಿಕಾರ ಬಾಯಿಗೆ ಬರದಂತೆ 'ಕಿತ್ತು' ಕೊಳ್ಳಲಾಯಿತು. 1998ರಿಂದ 2004 ರವರೆಗೆ ಅಧಿಕಾರ ನಡೆಸಿ, ದೇಶದಲ್ಲೆಲ್ಲಾ 'ಹಿತಕರ ಹವಾ ಸೃಷ್ಟಿಸಿ' ಭಾರತವನ್ನು ಪ್ರಕಾಶಿಸುವಂತೆ ಮಾಡಿ ಮರಳಿ ಅಧಿಕಾರಕ್ಕೆ ಬರಬೇಕೆನ್ನುವಾಗ ಜಾರಿಬಿದ್ದರು.

ಶೂನ್ಯ ಸಂಪಾದನೆ

ಇನ್ನು ದೇಶದ ಉದ್ದಗಲ 'ಹಿಂದೂ ರಾಷ್ಟ್ರ' ನಿರ್ಮಾಣದ ಯೋಜನೆಗೆ ಮಾರ್ಕ್ಸ್‌ವಾದಿಗಳಿಂದ ಅಡ್ಡಿಯೋ ಅಡ್ಡಿ. ಇವರನ್ನು ಸುಮ್ಮನೆ ಬಿಟ್ಟರೆ ಹೇಗೇ? ಅದು ಅಲ್ಲದೇ ಮತ್ತೆ ಲೋಕಸಭಾ ಚುನಾವಣೆಗಳು ಹತ್ತಿರವಾಗುತ್ತಿವೆ.

ಇನ್ನು ಮಾರ್ಕ್ಸ್‌ವಾದಿಗಳು ಅಧಿಕಾರ ನಡೆಸುವ ರಾಜ್ಯಗಳಲ್ಲೇ ಹಲವು ದಶಕಗಳ ಕಾಲ ತಿಪ್ಪರಲಾಗ ಹಾಕಿದರೂ ಕೇರಳ, ತ್ರಿಪುರಾಗಳಲ್ಲಿ ಒಂದು ವಿಧಾನಸಭಾ ಸ್ಥಾನವನ್ನಾದರೂ ಗೆಲ್ಲಲು ಸಾಧ್ಯವಾಗಲಿಲ್ಲ. ಪಶ್ಚಿಮ ಬಂಗಾಳದಲ್ಲಿ ಮಮತಾ ದೀದಿಯವರ 'ಮಮತೆ'ಯಿಂದಾಗಿ ಕೆಲವೊಮ್ಮೆ ಒಂದೆರಡು ಸ್ಥಾನಗಳಿಸಿಕೊಂಡರೂ ಬರಿ ಮೈ ಪರಚಿಕೊಂಡಿದ್ದು ಬಿಟ್ಟರೆ ಬೇರೇನೂ ಕಿಸಿಯಲಾಗಲಿಲ್ಲ. ಮತ್ತೆ ಕೊನೆಗೆ ಶೂನ್ಯ ಸಂಪಾದನೆ.

ಹತಾಶೆ

ಏನೋ ಮೂರು ರಾಜ್ಯದಲ್ಲಿ ಅಧಿಕಾರ ನಡೆಸಿಕೊಂಡಾದರೂ ಸುಮ್ಮನಿರುತ್ತಾರಾ ಇವರು ಅಂದರೆ ಅದೂ ಇಲ್ಲ. ಒಂದೇ ವರಾತ. ಅಗತ್ಯ ವಸ್ತುಗಳ ಬೆಲೆ ಏರ್ತಾ ಇದೆ. ಕೃಷಿ ಉತ್ಪನ್ನಗಳ ಮುಂಗಡ ವ್ಯಾಪಾರ ರದ್ದು ಮಾಡಿ, ಚಿಲ್ಲರೆ ವ್ಯಾಪಾರದಲ್ಲಿ ವಿದೇಶಿ ಬಂಡವಾಳ ಬೇಡ, ಎಸ್‌ಇಜೆಡ್ ನೀತಿ ಬದಲಾಯಿಸಿ-ರಿಯಲ್ ಎಸ್ಟೇಟ್ ಲಾಬಿಗೆ ಅದರಲ್ಲಿ ಅವಕಾಶ ಬೇಡ, ಸಾರ್ವಜನಿಕ ಕೈಗಾರಿಕೆ ಉದ್ದಿಮೆಗಳನ್ನು ಬಂಡವಾಳಿಗರಿಗೆ ಅಗ್ಗಕ್ಕೆ ಮಾರಬೇಡಿ....... ಓಹೋ ಏನು ಒಂದೇ ಎರಡೇ ಇವರ ವರಾತ. ಅಸ್ಪೃಶ್ಯತೆಯಿಂದ ಆರಂಭಿಸಿ ರೇಷನ್ ಸಮಸ್ಯೆವರೆಗೆ ಇವರದ್ದೇ ಬಡಬಡ! ಇದರ ಮಧ್ಯೆ 'ರಾಮಸೇತು' ಬಗ್ಗೆ ಎಷ್ಟೇ ಬೊಬ್ಬೆ ಹೊಡೆದರೂ ಯಾಕೋ ಜನ ರಥಯಾತ್ರೆಗೆ ಸೇರಿದ ಹಾಗೆ ಸೇರ್ತಾ ಇಲ್ಲ!

ರಾಮಮಂದಿರ, ರಾಮಸೇತು, ಮತಾಂತರ, 'ಗೋಹತ್ಯೆ'ಯಂತಹ ಪಾರಮಾರ್ಥಿಕ, ಆಧ್ಯಾತ್ಮಿಕ, ಧಾರ್ಮಿಕ ವಿಚಾರಗಳ ಬಗೆಗೆ ಜನ ಗಮನಕೊಡೋದು ಕಡಿಮೆಯಾಗಿರೋದಕ್ಕೆ ರೇಪನ್ನು, ಕೃಷಿ ಬಿಕ್ಕಟ್ಟು, ಉದ್ಯೋಗ ಸೃಷ್ಟಿ, ಕಾರ್ಖಾನೆ ಸ್ಥಾಪನೆ.....ಅದೂ ಇದು ಅಂತ ಬರೇ ಲೌಕಿಕ ವಿಚಾರಗಳನ್ನೇ ಜನರ ತಲೆಗೆ ತುಂಬುತ್ತಾ ಇರೋ ಕಮ್ಯುನಿಸ್ಟರೇ ಪ್ರಧಾನವಾದ ಕಾರಣವಾಗಿರೋವಾಗ ಪಾಪ ಹಿಂದೂ ರಾಷ್ಟ್ರ ಸ್ಥಾಪನೆಗಾಗಿ ಟೊಂಕ ಕಟ್ಟಿ ನಿಂತಿರೋ ಇಂತಹ ವೀರ ಯೋಧರು ಇನ್ನೇನು ತಾನೇ ಮಾಡಲು ಸಾಧ್ಯ.

ದೆಹಲಿಯ ಕಛೇರಿಯ ಮೇಲೆ ಕಲ್ಲು ತೂರಾಟ ಮಾಡಿ ಮುಖಂಡರುಗಳ ತಲೆ ಬುರುಡೆ ಒಡೆದರೆ, ಬೇರೆ ಬೇರೆ ಕಡೆ ಬೇರೆ ವಿಧಾನಗಳು, ಬೇರೆ ಕಾರ್ಯತಂತ್ರಗಳು. ಆದರೆ ಗುರಿ ಮತ್ತು ಗುರು ಒಂದೇ. ಗುರಿ ಹಿಂದೂರಾಷ್ಟ್ರ. ಗುರು ಗೊಲ್ವಾಲ್ಕರ್.

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಬೆಳೆದು ಬಿಟ್ಟರೆ ಬಲಿಷ್ಟವಾದರೆ 'ಹಿಂದೂ ರಾಷ್ಟ್ರ' ನಿರ್ಮಾಣಕ್ಕೆ ಅದರಿಂದ ಬಾರಿ ದೊಡ್ಡ ಆಪತ್ತು. ಅದರಲ್ಲೂ ಹಿಂದೂ ರಾಷ್ಟ್ರ ನಿರ್ಮಾಣ ಕಾರ್ಯಕ್ಕೆ ತಮ್ಮ ಅಪಾರ ಧನ ಸಂಪನ್ಮೂಲಗಳನ್ನು ಧಾರೆ ಎರೆಯುವ ಬಂಡವಾಳಿಗರು! ಮಾಲೀಕರ ಹಿತಾಸಕ್ತಿಗೂ ಅದು ತುಂಬಾ ಮಾರಕವೇ ಅಲ್ಲವೇ? ಹೀಗೆ ಹರಿದಿದೆ ಚಿಡ್ಡಿಗಳ ಚಿಂತನೆ. ಈಗ ಬೇಕಾದರೆ ನಾವು ಕೇರಳ ಕಣ್ಣೂರು ಜಿಲ್ಲೆಯನ್ನೇ ಇದಕ್ಕೆ ಒಂದು ಉದಾಹರಣೆ ಅಂತ ನೋಡಬಹುದು.

ಇಡೀ ಕೇರಳ ರಾಜ್ಯದಲ್ಲೇ ಕಮ್ಯುನಿಸ್ಟ್ ಚಳುವಳಿ ಪ್ರಬಲವಾಗಿರುವ ಜಿಲ್ಲೆಗಳಲ್ಲಿ ಕಣ್ಣೂರು ಸಹ ಒಂದು. ಕಮ್ಯುನಿಸ್ಟ್ ಚಳುವಳಿ ಬಲವಾಗೋದು ಅಂದ್ರೆ, ಅಸಂಘಟಿತ ಕಾರ್ಮಿಕರು, ಕಾರ್ಮಿಕರು, ಕೃಷಿ ಕೂಲಿಕಾರರು ಎಲ್ಲ ರೀತಿಯ ದುಡಿಮೆಗಾರರು ಒಂದಾಗೋದು ಅಂತ ಅರ್ಥ ಅಲ್ಲವೇ. ಇವೆಲ್ಲಾ ಆದಾಗ ಪಾಪ ಮಾಲೀಕ ವರ್ಗ, ಬಂಡವಾಳಿಗರಿಗೆ ನಷ್ಟವಾಗದೇ ಇರುತ್ತದೆಯೇ ಎಂಬ ಅಪಾರ ಕಾಳಜಿ ಚೆಡ್ಡಿ ಪಡೆಗಳಿಗೆ!



ಬೆಂಗಳೂರಿನಲ್ಲಿ ಸಿಪಿಐ(ಎಂ) ಕಾರ್ಯಕರ್ತರ-ಕಾರ್ಮಿಕರ ಬೃಹತ್ ಪ್ರತಿಭಟನೆ

ಪಿತೂರಿ ಜಾರಿ!

ಮತ್ತೆ ದುಡಿಮೆಗಾರರು ಅಂದ್ರೆ, ಅದರಲ್ಲಿ ಹಿಂದೂ ಮುಸ್ಲಿಂ, ಕ್ರೈಸ್ತ ಹೀಗೆ ಎಲ್ಲ ಧರ್ಮಕ್ಕೆ ಸೇರಿದವರೂ ಇರ್ತಾರಲ್ಲ. ಅವರೆಲ್ಲರೂ ಒಂದಾಗಿ ಬಿಟ್ಟರೆ ಹಿಂದೂ ರಾಷ್ಟ್ರ ನಿರ್ಮಾಣವಾಗೋದಾದರೂ ಹೇಗೇ? ಗೋಹತ್ಯೆ ಅಂತಾನೋ, ಯಾವುದಾದರೂ ಮಸೀದಿ, ಮಂದಿರದ ವಿವಾದ ಅಂತಾನೋ, ಯುವಕ ಯುವತಿಯರ ಪ್ರೀತಿ ಪ್ರೇಮದ ವಿಷಯವೇನೋ ಇಟ್ಕೊಂಡು ಆಗೀಗ ಎಲ್ಲಾದರೂ, ಕೆಲವಾದರೂ ಹೆಣ ಬಿದ್ದರೆ, ಒಂದಷ್ಟು ಅಂಗಡಿ ಮನೆ ಸುಟ್ಟರೆ, ಹಿಂದೂ ರಾಷ್ಟ್ರ ನಿರ್ಮಾಣ ಚಳುವಳಿ ತನ್ನ ಕಾವು ಕಳೆದುಕೊಳ್ಳದೇ ತನ್ನ ಬಿಸಿಯನ್ನು ಉಳಿಸಿಕೊಳ್ಳುತ್ತೆ. ಇಲ್ಲದೇ ಹೋದರೆ ಚಳುವಳಿ ಹಾಗೆ ತಣ್ಣಗಾಗಿ ಬಿಡುತ್ತೆ. ಅದೂ ಅಲ್ಲದೇ ಕೇರಳ ವಿಧಾನಸಭೆಯೊಳಕ್ಕೆ ಹೇಗಾದರೂ ಮಾಡಿ ಒಂದೇ ಒಂದು ಬಾರಿಯಾದರೂ ಒಬ್ಬ ಹಿಂದುತ್ವವಾದಿ 'ರಾಷ್ಟ್ರ ಭಕ್ತ' ನನ್ನು ಕಳಿಸೋಣ ಅಂದರೆ ಈ ಕಮ್ಯುನಿಸ್ಟ್ ಚಳುವಳಿಯಿಂದಾಗಿ ಅದೂನೂ ಆಗಿಲ್ಲ ಅಂದರೆ ಹಿಂದುತ್ವವಾದಿಗಳು ಕೈಕಟ್ಟಿಕೊಂಡು ಕೂರೋದಕ್ಕೆ ಆಗುತ್ತದೆಯೇ? ಆಗುವುದಿಲ್ಲ. ಆಗ ಈ ಎಲ್ಲದಕ್ಕೆ ಅಡ್ಡವಾಗಿರೋ ಮಾರ್ಕ್ಸ್‌ವಾದಿ ಪಕ್ಷದ ಮುಖಂಡರು, ಕಾರ್ಯಕರ್ತರನ್ನೇ ಮುಗಿಸಿ ಬಿಡಬೇಕು. ಆಗ ಹಿಂದುತ್ವದ ರಥ ಮುಂದೆ ಸಾಗೋದಕ್ಕೆ ಸ್ವಲ್ಪ ದಾರಿ ಸಿಗಬಹುದು. ಹಾಗಾಗಿ, ಹಿಂದುತ್ವದ ಆರ್‌ಎಸ್‌ಎಸ್ ಚಳುವಳಿ ಅದನ್ನು ವ್ಯವಸ್ಥಿತವಾಗಿ ಯೋಜಿಸಿ ಜಾರಿ ಮಾಡ್ತಾ ಇದೆ.

2006ರಲ್ಲಿ ವಿ.ಎಸ್. ಅಚ್ಯುತಾನಂದನ್ ನೇತೃತ್ವದ ಎಡ ಪ್ರಜಾಸತ್ತಾತ್ಮಕ ರಂಗ (ಎಲ್‌ಡಿಎಫ್) ಅಧಿಕಾರಕ್ಕೆ ಬಂದ ಮೇಲೆ ಇದುವರೆಗೆ 12ಜನ ಸಿಪಿಐ(ಎಂ) ಕಾರ್ಯಕರ್ತರನ್ನು ಕಗ್ಗೊಲೆ ಮಾಡಿ ಕೊಂದು ಹಾಕಿರುವುದು ಹಿಂದುತ್ವವಾದಿ ಶಕ್ತಿಗಳಿಗೊಂದು 'ಸಾಧನೆ'. ಅದರಲ್ಲಿ ಕಣ್ಣೂರು ಜಿಲ್ಲೆಯೊಂದರಲ್ಲೇ ಆರೆಸ್ಸೆಸ್ 'ದೇಶ ಭಕ್ತ'ರ ಕತ್ತಿ, ಮಚ್ಚು ತಲವಾರುಗಳಿಗೆ ಬಲಿಯಾದ ಸಿಪಿಐ(ಎಂ) ಕಾರ್ಯಕರ್ತರ ಸಂಖ್ಯೆ ಏಳು.

ಅಪಪ್ರಚಾರ

ಇನ್ನು ಸಿಪಿಐ(ಎಂ) ಕಛೇರಿಗಳ ಮೇಲೆ ಧಾಳಿ, ಸಿಪಿಐ(ಎಂ) ಕಾರ್ಯಕರ್ತರ ಮೇಲೆ ಹಲ್ಲೆಗಳು ಹಲವಾರು. ಇಂತಹ 12 ದಾಳಿಗಳು, ಕೇರಳದಲ್ಲಿ ಇತ್ತೀಚಿನ ಅವಧಿಯಲ್ಲಿ ನಡೆದಿದೆ. ಇಷ್ಟೆಲ್ಲಾ ಆಗಿ ವಸ್ತುಸ್ಥಿತಿಗೆ ವಿರುದ್ಧವಾಗಿ ಪ್ರಚಾರ ಆರೋಪಗಳನ್ನು

ಪುಟ 13ಕ್ಕೆ

ಕೇರಳ ರಾಜ್ಯದಲ್ಲಿ ಸಂಘ ಪರಿವಾರದ ದಾಳಿಯಿಂದ ಹತರಾದ ಸಿಪಿಐ(ಎಂ) ಕಾರ್ಯಕರ್ತರ ವಿವರ

ದಿನಾಂಕ ವರ್ಷ	ಸ್ಥಳ ವಿವರ	ಹೆಸರು
13.6.2006	ಇರಿಟಿ, ಕಣ್ಣೂರು ಜಿಲ್ಲೆ	ಕೆ.ಕೆ.ಯಾಕೂಬ್
25.9.2006	ತ್ರಿಶೂರ್ ಜಿಲ್ಲೆ	ರಾಜು
16.12.2006	ತ್ರಿಶೂರ್ ಜಿಲ್ಲೆ	ಮಾಹೇನ್
19.7.2007	ಕೊಲ್ಲಂ ಜಿಲ್ಲೆ	ಅಜಯಪ್ರಸಾದ
29.10.2007	ಪಾಲಕ್ಕಾಡ್ ಜಿಲ್ಲೆ	ಗೋಪಾಲಕೃಷ್ಣನ್
29.10.2007	ಪಾಲಕ್ಕಾಡ್ ಜಿಲ್ಲೆ	ರವೀಂದ್ರನ್
5.11.2007	ನಮಕುಮಾಕು ಕತ್ತಿರೂರ್ ತಲಸೇರಿ ಕಣ್ಣೂರು ಜಿಲ್ಲೆ	ಸುಧೀರ್‌ಕುಮಾರ್
6.11.2007	ಕಾವುಂ ಬಾಗಮ್ ಹತ್ತಿರ ತಲಸೇರಿ ಕಣ್ಣೂರು ಜಿಲ್ಲೆ	ಪರಕಂಡ್ಯಾ ಪವಿತ್ರನ್
12.1.2008	ಮಿನ್‌ಕುಣ್ಣು, ಅಜಿರ್ ಕೊಡೆ, ಕಣ್ಣೂರು ಜಿಲ್ಲೆ	ಎಂ.ದಾನೇಶ್
27.1.2008	ನಾರಾತು ಪೀಡಿಕಾ, ತಲಸೇರಿ, ಕಣ್ಣೂರು ಜಿಲ್ಲೆ	ಕೆ.ಪಿ.ಜಿಜೇಶ್
5.3.2008	ಇಲೀ ಕುಣ್ಣು ತಲಸೇರಿ, ಕಣ್ಣೂರು ಜಿಲ್ಲೆ	ರಣಜಿತ್
7.3.2008	ಪಟ್ಟೂರು, ಕಣ್ಣೂರು ಜಿಲ್ಲೆ	ಕೆ.ಅನೇಶ್

ಸಂಸತ್‌ನಲ್ಲಿ ಮೂಲೆಗುಂಪಾದ ಧಾಳಿಕೋರರು


ಸಿಪಿಐ(ಎಂ) ಕೇಂದ್ರ ಕಛೇರಿಯ ಮೇಲೆ, ಸಿಪಿಐ(ಎಂ) ಕರ್ನಾಟಕ ರಾಜ್ಯ ಕಾರ್ಯದರ್ಶಿ ಕಾಂ: ವಿಜೆಕೆ ನಾಯರ್‌ರವರ ಮನೆ ಮೇಲೆ ದಾಳಿ ಮಾಡಿದ ಬಿಜೆಪಿಗಳು ದೇಶದ ಪಾರ್ಲಿಮೆಂಟ್‌ನಲ್ಲಿ ವಿವಿಧ ರಾಜಕೀಯ ಪಕ್ಷಗಳಿಂದ ತೀವ್ರ ಖಂಡನೆಗೆ ಗುರಿಯಾಗಿ ಮೂಲೆ ಗುಂಪಾಗಬೇಕಾಯಿತು. ಈ ದಾಳಿಯನ್ನು ಕಣ್ಣಾರೆ ಕಂಡ ಸಿಪಿಐ(ಎಂ) ಪಾಲಿಟ್ ಬ್ಯೂರೋ ಸದಸ್ಯರಾದ ಸೀತಾರಾಂ ಯೆಚೂರಿ ಪಾರ್ಲಿಮೆಂಟ್‌ನಲ್ಲಿ ವಿಷಯವನ್ನು ಪ್ರಸ್ತಾಪಿಸಿದರೆ ಅವರ ಮಾತಿಗೆ ಕಂಡು ಬಂದ ಬೆಂಬಲದಿಂದ ಬಿಜೆಪಿ ಕಂಗಾಲಾಯಿತು.

ಮಹಾತ್ಮ ಗಾಂಧಿಯನ್ನು ಕೊಂದ ಕೋಮುವಾದಿ ಶಕ್ತಿಗಳು ಸೃಷ್ಟಿಸುತ್ತಿರುವ ಭೀಕರ ಪರಿಸ್ಥಿತಿ, ಪ್ರಜಾಪ್ರಭುತ್ವದ ಮೇಲಿನ ದಾಳಿಯನ್ನು ಯೆಚೂರಿ ಪರಿಣಾಮಕಾರಿಯಾಗಿ ಬಿಡಿಸಿಟ್ಟರು. ಸ್ವಾತಂತ್ರ್ಯಪೂರ್ವದಲ್ಲಿ ಭಾರತದ ರಾಜಕೀಯ ರಂಗದಲ್ಲಿ ರೂಪುಗೊಂಡ ಮೂರು ಪ್ರಮುಖ ಧಾರೆಗಳಲ್ಲಿ ಕಾಂಗ್ರೆಸ್ ಹೆಚ್ಚಿನಂಶ 'ಜಾತ್ಯಾತೀತತೆ'ಗೆ ಸೀಮಿತವಾದರೆ, ಎಡಪಕ್ಷಗಳು ಜಾತ್ಯಾತೀತತೆಯ ಜೊತೆಗೆ ದೇಶದಲ್ಲಿ ಆರ್ಥಿಕ ಸಾಮಾಜಿಕ ಸಮಾನತೆಯ ಗುರಿಯನ್ನು ಇರಿಸಿಕೊಂಡವು. ಮೂರನೆಯ ಧಾರೆ ಎಂದರೆ ಹಿಂದೂ ಮಹಾ ಸಭಾ, ಆರೆಸ್ಸೆಸ್, ಮುಸ್ಲಿಂ ಲೀಗ್‌ಗಳಂತಹ ಶಕ್ತಿಗಳು ಅಪ್ಪಿಕೊಂಡ 'ಧಾರ್ಮಿಕ ಭಾವೋದ್ರೇಕ' ದಾರಿಯು ಮತೀಯ ಆಧಾರದಲ್ಲಿ ಭಾರತವು ಒಡೆಯಲು ಕಾರಣವಾಯಿತು. ಈ ಧೋರಣೆ ಪ್ರಜಾಪ್ರಭುತ್ವಕ್ಕೆ ಮಾರಕ ಎಂದರಲ್ಲದೆ ಈ ಧೋರಣೆಯಿಂದಾಗಿಯೇ ಇಂದು ಹಿಂಸಾ ರಾಜಕೀಯ ಬೆಳೆದಿದೆ ಎಂದೂ ಯೆಚೂರಿ ಸ್ಪಷ್ಟಪಡಿಸಿದರು.

ಇದಕ್ಕೆ ಪ್ರತಿಯಾಗಿ ಕೇರಳದಲ್ಲಿ 'ಕಾನೂನು ಮತ್ತು ಸುವ್ಯವಸ್ಥೆ'ಯ ಪರಿಸ್ಥಿತಿಯನ್ನು ಪ್ರಸ್ತಾಪಿಸುವ ಮೂಲಕ ದಾಳಿಯನ್ನು ಪರೋಕ್ಷವಾಗಿ ಸಮರ್ಥಿಸಿಕೊಳ್ಳುವ ಬಿಜೆಪಿ ಮುಖಂಡ ವೆಂಕಯ್ಯನಾಯ್ಡು ಅವರ ಪ್ರಯತ್ನಕ್ಕೆ ತೀವ್ರ ವಿರೋಧ ವ್ಯಕ್ತವಾಯಿತು.

ಕಾಂಗ್ರೆಸ್‌ನ ನಾರಾಯಣಸ್ವಾಮಿ ಆರೆಸ್ಸಸ್‌ನ್ನು ನಿಷೇಧಿಸಲು ಒತ್ತಾಯಿಸಿದರೆ, ಉದಯ್ ಸಿಂಗ್ 'ಕ್ರಿಯೆ-ಪ್ರತಿಕ್ರಿಯೆ' ಹೆಸರಿನಲ್ಲಿ ಗುಜರಾತ್‌ನಲ್ಲಿ ನಡೆದ ಘೋರ ಹತ್ಯಾಕಾಂಡಗಳನ್ನು ನೆನಪಿಸಿದ್ದಾರೆ. ಆರ್‌ಜೆಡಿ ಪಕ್ಷದ ರಾಮ್‌ದೇವ್ ಭಂಡಾರಿ, ಸಿಪಿಐನ ಡಿ.ರಾಜಾ, ಡಿಎಂಕೆಯ ಕಂಜಿಮೋದಿ, ಆರ್‌ಎಸ್‌ಪಿಯ ಅಬಾನಿ ರಾಯ್, ಎನ್‌ಸಿಪಿಯ ತಾರಿಕ್ ಅನ್ವರ್ ಎಲ್ಲರೂ ಆರೆಸ್ಸೆಸ್, ಬಿಜೆಪಿಗಳ ದಾಳಿ ಕೋರತನವನ್ನು ಖಂಡಿಸಿದರು.

ಇದೆಲ್ಲದಕ್ಕೆ ಪೂರಕವಾಗಿ ಗೃಹಮಂತ್ರಿ ಶಿವರಾಜ ಪಾಟೀಲರು ಪಾರ್ಲಿಮೆಂಟ್‌ಗೆ ಕೊಟ್ಟ ಮಾಹಿತಿ ಬಿಜೆಪಿ ಮತ್ತಷ್ಟು ಒಂಟಿಯಾಗುವಂತೆ ಮಾಡಿತು. ವ್ಯವಸ್ಥಿತ ಯೋಜನೆ, ಧಾಳಿಯ ಸಂಪೂರ್ಣ ವಿವರಗಳನ್ನು ಪಾಟೀಲ್ ಪಾರ್ಲಿಮೆಂಟ್‌ನ ಮುಂದೆ ಇಟ್ಟರು. ಪಾರ್ಲಿಮೆಂಟ್ ಅಧಿಕೃತ ಖಂಡನಾ ನಿರ್ಣಯ ಅಂಗೀಕರಿಸದಿದ್ದರೂ ಚರ್ಚೆಯ ಸ್ವರೂಪ ಮಾತ್ರ ಒಂದು ಖಂಡನಾ ನಿರ್ಣಯದಂತೆಯೇ ಇದ್ದದ್ದು ಸ್ಪಷ್ಟವಾಗಿತ್ತು.



ಅವಳ ತಾಯಿ ವಿಧವೆ. ಚಿಕ್ಕ ಹರೆಯದಲ್ಲಿಯೇ ಗಂಡನನ್ನು ಕಳೆದುಕೊಂಡ ವಿಧವೆ. ಭರ್ತಿ ಯೌವ್ವನದ ಹಸಿ ಹಸಿ ಬಯಕೆಗಳು ಯಾವನೋ ಗೆಳೆಯನೊಬ್ಬನ ಸೋಬತಿಗೆ ಅವಳನ್ನು ಎಳೆದು ತಂದಿದ್ದವು. ಸಾಮಾಜಿಕ ಸಂಬಂಧಗಳ ಸ್ಥಾಪಿತ ವ್ಯವಸ್ಥೆಯಡಿಯಲ್ಲಿ ಹಾದರವೆಂದು ಕರೆಸಿಕೊಳ್ಳುವ ಈ ಸೋಬತಿ ಮಗಳಾದ ರೇಣುಕಾಳ ಕಿರಿಕಿರಿಗೆ ಕಾರಣವಾಯ್ತು. ಬಡಿದಾಟಗಳು ಸುರುವಾದವು. ತಾಯಿಯಿಂದಲೇ ಕೇಸು ಮಾಡಿಸಿ ತನ್ನ ಪುಡಾರಿ ಪ್ರಭಾವವನ್ನು ಬಳಸಿ ಇಬ್ಬರೂ ಹುಡುಗರನ್ನು ಜೈಲಿಗೆ ಅಟ್ಟಿದನು ಅವನು.

ಯಾಕ ಚಿಂತಿ ಮಾಡತಿದಿ ಎಲೆ ಮನವೇ...

"ಯಾಕ ಚಿಂತಿ ಮಾಡತಿದಿ ಎಲೆ ಮನವೇ ನಿನಗೆ ಯಾತರ ಸುಖವಿಲ್ಲ ಎಲೆ ಮನವೇ....."

42ರ ಹರೆಯದ ಹನುಮಕ್ಕಳ ದುಃಖದ ಕಥನಕ್ಕೆ ಪಲ್ಲವಿಯಂತೆ ತತ್ವಪದದ ಎಳೆಯೊಂದು ಮನದ ಮೂಲೆಯಲ್ಲಿ ಸುಳಿದಾಡುತ್ತಿತ್ತು. ಕುಡುಕ ಗಂಡ ಇಪ್ಪತ್ತು ವರ್ಷದ ಇಡೀ ಜವಾನಿ ದಿನಗಳನ್ನು ತನ್ನ ಅಮಲಿನ ತೆವಲಿಗಾಗಿ ಹೊಡೆದು ಹೊಡೆದು ಅವಳ ಅಂತರಂಗ, ಬಹಿರಂಗ ಎರಡನ್ನೂ ತಿಂದು ಹಾಕಿದ್ದ. ಇವಳು ಕಸಮುಸುರೆ ಮನೆಗೆಲಸ ಮಾಡಿ ಸಂಪಾದಿಸಿ ತರುತ್ತಿದ್ದ ಹಣವನ್ನು ತಗಾದೆ ಮಾಡಿ ಸೆಳೆಯುತ್ತಿದ್ದ. ಗೌಂಡಿ ಕೆಲಸ ಮಾಡುತ್ತಿದ್ದ ಆತ ಎಂದಿಗೂ ಮನೆಗೆ ಚಿಕ್ಕಾಸು ಕೊಡಲಿಲ್ಲ. ಬದಲಾಗಿ ಜವಾನಿ ದಿನಗಳ ಒತ್ತಾಯದ ದೈಹಿಕ ಬಳಕೆಗೆ ಒಡ್ಡಿ ಮೂರು ಮಕ್ಕಳನ್ನು ದಯಪಾಲಿಸಿದ್ದ.

ದುಃಖದ ಕಟ್ಟೆ ಒಡೆದು

ದಿನದ ಹೊಡೆತ, ಬಡೆತ, ಕಿರುಕುಳ ಸಹಿಸಿ ಸಹಿಸಿ ಸಾಕಾಗಿದ್ದ ಹನುಮಕ್ಕಳಾದರೂ ಒಂದು ದಿನ ದುಃಖದ ಕಟ್ಟೆ ಒಡೆದು, ಸಹನೆಯ ಅಳತೆ ಮೀರಿ ಕುಡಿದ ಗಂಡನೊಂದಿಗೆ ಕೈ ಮಿಲಾಯಿಸಿದ್ದೆ ಬೆಳೆದು ಝಟಾಪಟಿಗೆ ಬಿದ್ದು ಗಂಡನನ್ನು ಒಂದಷ್ಟು ರಭಸವಾಗಿ ನೂಕಿದಳು. ಬಿದ್ದ ರಭಸಕ್ಕೆ ಆತನ ತಲೆ ಸೀದಾ ಮೂಲಿಗಲ್ಲಿಗೆ ಬಡಿದು ಮೊದಲೇ ಕುಡಿಕುಡಿದು ಗೊರಲಿ ಹತ್ತಿದ ಕಟ್ಟಿಗೆಯಂಥ ಶರೀರದೊಳಗಿನ ಪ್ರಾಣಪಕ್ಷಿ ಪಟಕನೆ ಹಾರಿಯೇ ಹೋಗಿತ್ತು. ಒಂದೇ ಏಟಿಗೆ ಆತ ಸತ್ತು ಹೆಣವಾಗಿದ್ದ. ಖಡಿ ಖಡಿ ಮಧ್ಯಾಹ್ನದ ಬಿರು ಬಿಸಲಿನಲ್ಲಿ ನಡೆದ ಘಟನೆಗೆ ಊರಿಗೆ ಊರೇ ಸಾಕ್ಷಿ ನುಡಿದಿತ್ತು. ಗಂಡನ ಹೆಣದ ಪಂಚನಾಮೆಯೊಂದಿಗೆ ಹನುಮಕ್ಕ ಜೇಲು ಸೇರಿದ್ದಳು. ಪುಟ್ಟ ಪುಟ್ಟ ಮೂರು ಮಕ್ಕಳನ್ನು ಬೀದಿಯ ಬಯಲಿಗೆ ಬಿಟ್ಟು ಜೇಲಿನ ನಾಲ್ಕು ಗೋಡೆಗಳ ನಡುವೆ ಬಂದಿಯಾಗಿ ಬಿದ್ದಿರುವ ಈಕೆಗೆ ಆರು ತಿಂಗಳಿಂದ ಅನಾಥ ಮಕ್ಕಳದೇ ಚಿಂತೆ. ಹೌದ್ರಿ ಮೇಡಮ್ಮೊರೆ ನನ್ನ ಗಂಡನ ತ್ರಾಸ ಭಾಳ ಇತ್ರಿ. ಆದ್ರ ಅಂವಾ ಹಿಂಗ ಸಾಯಿತಾನ, ನಾ ಹೀಂಗ ಜೇಲಿನ್ಯಾಗ ಕೊಳಿತೀನಿ. ನನ್ ಮಕ್ಳು ಬೀದಿ ಪಾಲಾಗತಾವ್ ಅಂತ ನಂಗ ಖೂನಾನೇ ಆಗಲಿಲ್ದ್ರಿ. ಈಗ ಹ್ಯಾಂಗರೇ ಮಾಡ್ರಿ. ನಂಗ್ ಮಕ್ಳ ಸಂಗಾಟ ಇರಪ್ಲೆ ಮಾಡ್ರಿ ಅಂತ ಅವಳು ಹಲಬುತ್ತಿದ್ದರೇ ಬಂದಿಖಾನೆಯ ಮಹಿಳಾ ಖೈದಿಗಳ ಮಧ್ಯೆ ಈ ಸಲದ ಅಂತರಾಷ್ಟ್ರೀಯ ಮಹಿಳಾದಿನವನ್ನು ಆಚರಿಸಲೆಂದು ಬಂದಿದ್ದ ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ ಮತ್ತು ಪ್ರಜ್ಞಾ ಕಾನೂನು ಸಲಹಾ ಸಮಿತಿಯ ಕಾರ್ಯಕರ್ತೆಯರು ದಂಗಾಗಿ ನಿಂತಿದ್ದರು.

ಕಣ್ಣುಗಳ ಆಳದ ಗುಳಿಯೊಳಗೆ

ಅಚ್ಚ ಹಸುರಿನ ದಪ್ಪ ಬಟ್ಟೆಯ ನೈಟಿ ಧರಿಸಿದ್ದ ಹದಿನಾಲ್ಕು ವರ್ಷದ ಕಿಶೋರಿ ರೇಣುಕಾ. ತುಂಬಿ ನಿಂತ ಕಣ್ಣುಗಳ ಆಳದ ಗುಳಿಯೊಳಗೆ ಒಂದೇ ಒಂದು ಸಲ ಹಣಕಿ ಹಾಕುವ ಪ್ರಯತ್ನ ಮಾಡಿದ್ದೇ ಖರೆ ಅಂದ್ರೆ ಖರೇನೇ ಎದೆ ಧಸಕ್ಕೆಂದಿತ್ತು. ಆ ಕಣ್ಣುಗಳಲ್ಲಿ ಅದೆಂಥ ಕ್ರೌರ್ಯ, ರೊಚ್ಚು, ರೋಷ, ಭಯಂಕರ ವ್ಯಾಧಿ ತುಂಬಿಕೊಂಡಿತ್ತು ಅಂದರೆ ಅದು ಪ್ರಾಯಶಃ ಶಬ್ದಗಳ ಸೀಮೆಗೆ, ಭಾವನೆಗಳ ಅಳತೆಗೆ ಸಿಗದಷ್ಟು ಸಂಕೀರ್ಣವಾಗಿತ್ತು. ಹೌದು ಅವಳು ತನ್ನ ತಾಯಿಯ ಕೃಪೆಯಿಂದಲೇ ಬಂಧನಕ್ಕೆ ಒಳಗಾಗಿದ್ದಳು. ನಡೆದದ್ದು ಇಷ್ಟೇ. ಅವಳ ತಾಯಿ ವಿಧವೆ. ಚಿಕ್ಕ ಹರೆಯದಲ್ಲಿಯೇ ಗಂಡನನ್ನು ಕಳೆದುಕೊಂಡ ವಿಧವೆ. ಭರ್ತಿ ಯೌವ್ವನದ ಹಸಿ ಹಸಿ ಬಯಕೆಗಳು ಯಾವನೋ ಗೆಳೆಯನೊಬ್ಬನ ಸೋಬತಿಗೆ ಅವಳನ್ನು ಎಳೆದು ತಂದಿದ್ದವು. ಸಾಮಾಜಿಕ ಸಂಬಂಧಗಳ ಸ್ಥಾಪಿತ ವ್ಯವಸ್ಥೆಯಡಿಯಲ್ಲಿ ಹಾದರವೆಂದು ಕರೆಸಿಕೊಳ್ಳುವ ಈ ಸೋಬತಿ ಮಗಳಾದ ರೇಣುಕಾಳ ಕಿರಿಕಿರಿಗೆ ಕಾರಣವಾಯ್ತು. ರೇಣುಕಾ ಮತ್ತು ಅವಳಿಗಿಂತ ಎರಡು ವರ್ಷಕ್ಕೆ ಹಿರಿಯನಾದ ಅವಳ ಅಣ್ಣ ಇಬ್ಬರಿಗೂ ಬುದ್ಧಿ ಮನಸ್ಸು ಬೆಳೆದಂತೆ ತಾಯಿಯ ಅನೈತಿಕ ಸಂಬಂಧ ಅಪಮಾನ, ಹಿಂಸೆ, ಭರ್ತನೆಗೆ ಗುರಿ ಮಾಡಿತ್ತು. ಓರಗೆಯ ಗೆಳೆಯ-ಗೆಳತಿಯರು ತಮ್ಮ ತಾಯಿಯ ಸೋಬತಿಯನ್ನು ಕುರಿತು ಅಸಹ್ಯಕರ ಮಾತುಗಳನ್ನು ಆಡಿದಾಗ, ದೊಡ್ಡವರು ಮೊದಲ್ಗೊಂಡು ಬಂಧು-ಬಳಗ ಎಲ್ಲರೂ ಇವರನ್ನು ತುಚ್ಛ ಭಾವನೆಯಿಂದ ನೋಡತೊಡಗಿದಾಗ ಈ ಮಕ್ಕಳಿಗೆ ಅದನ್ನು ಸಹಿಸುವುದು ಆಗಲೇ ಇಲ್ಲ. ಅವರಿಬ್ಬರು ತಾಯಿಯನ್ನು ವಿರೋಧಿಸಲು ಪ್ರಾರಂಭಿಸಿದರು. ಪರಸ್ಪರ ತಾಯಿ ಮಕ್ಕಳ ನಡುವೆ ಹೊಡೆದಾಟ, ಬಡಿದಾಟಗಳು ಸುರುವಾದವು. ಪರಿಣಾಮವಾಗಿ ತಾಯಿಯ ಪ್ರಿಯಕರನು ಷಡ್ಯಂತ್ರವನ್ನು ರಚಿಸುವುದಲ್ಲದೆ ಈ ಇಬ್ಬರೂ ಹುಡುಗರ ಮೇಲೆ ಹಾಫ್ ಮರ್ಡರ್ ಕೇಸ್ ನೋಂದಾಯಿಸಿದನು. ತಾಯಿಯಿಂದಲೇ ಕೇಸು ಮಾಡಿಸಿ ತನ್ನ ಪುಡಾರಿ ಪ್ರಭಾವವನ್ನು ಬಳಸಿ ಇಬ್ಬರೂ ಹುಡುಗರನ್ನು ಜೇಲಿಗೆ ಅಟ್ಟಿದನು. ವಿಚಾರಣಾಧೀನ ಕೈದಿಯಾಗಿ ಈಗ ಹದಿನೈದು ದಿನಗಳಿಂದ ರೇಣುಕಾ ಹತ್ತಾರು ವೃದ್ಧೆ ಮಧ್ಯ ವಯಸ್ಕ ಮಹಿಳಾ ಕೈದಿಗಳ ನಡುವೆ ಬಂಧಿಯಾಗಿದ್ದಾಳೆ.

ಗೋಡೆಗಳ ನಡುವೆ ಹತ್ತಾರು ಕಥೆಗಳು

ಇಂಥ ಹತ್ತಾರು ಕಥೆಗಳು ಗುಲ್ಬರ್ಗಾದಲ್ಲಿ ಜಿಲ್ಲಾ ಕೇಂದ್ರ ಬಂದೀಖಾನೆಯ ಒಟ್ಟು 55 ಮಹಿಳಾ ಕೈದಿಗಳ ರೂಪದಲ್ಲಿ ಎತ್ತರದ ಗೋಡೆಗಳ ನಡುವೆ ಹೊರಬರಲಾಗದೆ ಒದ್ದಾಡುತ್ತಿವೆ. ಈ ಸಲದ ಮಹಿಳಾ ದಿನಾಚರಣೆಯನ್ನು ಬಂದೀಖಾನೆಯಲ್ಲಿ ಆಚರಿಸಬೇಕೆಂದು ಪ್ರಜ್ಞಾ ಕಾನೂನು ಸಲಹಾ ಸಮಿತಿ, ರಾಜ್ಯ ಸರ್ಕಾರಿ ನೌಕರರ ಒಕ್ಕೂಟ ಮಹಿಳಾ ಘಟಕ ಮತ್ತು ವೀರಮ್ಮ ಗಂಗಸಿರಿ ಮಹಿಳಾ ಮಹಾವಿದ್ಯಾಲಯಗಳು ಜಂಟಿಯಾಗಿ ನಡೆಸುವ ಹಿಂದೆ ಸ್ಪಷ್ಟವಾದ ಉದ್ದೇಶವನ್ನಿಟ್ಟುಕೊಂಡೇ ಮುಂದಡಿಯಿಡಲಾಗಿತ್ತು. ಒಂದನೇಯದಾಗಿ ಜೇಲಿನಲ್ಲಿರುವ ಮಹಿಳೆಯರ ಸ್ಥಿತಿ-ಗತಿ, ಅವರಿಗೆ ದೊರೆಯುತ್ತಿರುವ ಸೌಲಭ್ಯ, ಅವರನ್ನು ನಡೆಸಿಕೊಳ್ಳುತ್ತಿರುವ ವಿಧಾನ ಇತ್ಯಾದಿಗಳನ್ನು ಕುರಿತು ಅವಲೋಕಿಸುವುದಾಗಿತ್ತು. ಎರಡನೇಯದಾಗಿ ಮಹಿಳೆಯರ ಮಧ್ಯೆ ಹೆಚ್ಚುತ್ತಿರುವ ಅಪರಾಧಿ ಮನೋಭಾವ ಅವುಗಳ ಹಿಂದಿರುವ ಸಾಮಾಜಿಕ, ರಾಜಕೀಯ, ಸಾಂಸ್ಕೃತಿಕ ಕಾರಣಗಳನ್ನು ಹುಡುಕುವುದಾಗಿತ್ತು. ಈಗ 5-6 ವರ್ಷಗಳ ಹಿಂದೆ ಜನವಾದಿ ರಾಜ್ಯಾಧ್ಯಕ್ಷರಾಗಿದ್ದ ನೀಲಾ.ಕೆ ಯವರು ತೊಗರಿ ಬೆಳೆಗೆ ಬೆಂಬಲ ಬೆಲೆ ಕೊಡಿಸಲೆಂದು ಹೋರಾಟ ಮಾಡಿ ಚಳುವಳಿಯು ಉಗ್ರರೂಪ ಪಡೆದು ಅವರನ್ನು ಬಂಧಿಸಲಾಗಿತ್ತು. ಅವರು ಅಲ್ಲಿ ಹತ್ತು ದಿನ ಬಂಧಿಗಳಾಗಿದ್ದಾಗ ಮಹಿಳಾ ಖೈದಿಗಳ ಸಂಖ್ಯೆ ಇಪ್ಪತ್ತು ಇತ್ತು. ಆದರೆ ಇಂದು ಅದರ ಪ್ರಮಾಣ ಐವತ್ತೈದಕ್ಕೆ ಏರಿದೆ ಎಂದರೆ ಇದು ಆತಂಕಪಡಬೇಕಾದ ಸಂಗತಿ.

> ಎಲ್ಲಕ್ಕಿಂತ ಭಯಾನಕ ಸಂಗತಿಯೆಂದರೆ ಕುಟುಂಬ ಕಲಹ, ಆಸ್ತಿ-ಪಾಸ್ತಿ ಜಗಳಗಳಾಗಿ ಕೇಸುಗಳಾದಾಗ ಮನೆಮಂದಿಯನ್ನು ಬಂಧಿಸಿ ತರಲಾಗುತ್ತದೆ. ಸಂಬಂಧಪಟ್ಟ ಪುರುಷ ಕೈದಿಗಳನ್ನು ಹರಸಾಹಸ ಮಾಡಿ ಬೇಲ್ (ಜಾಮೀನು) ಮಾಡಿಸಿಕೊಂಡು ಖುಲಾಸೆ ಮಾಡಲಾಗುತ್ತದೆ. ಆದರೆ ಅದೇ ಮನೆಯ ಮಹಿಳಾ ಖೈದಿಗಳನ್ನು ಮಾತ್ರ ಬಡಿಸಿಕೊಂಡು ಹೋಗುವುದೇ ಇಲ್ಲ.

ಮಹಿಳೆ, ಪುರುಷ, ಮಕ್ಕಳಾದಿಯಾಗಿ ಎಲ್ಲ ವಿಭಾಗಗಳಲ್ಲಿ ಅಪರಾಧಿಗಳ ಸಂಖ್ಯೆ ಹೆಚ್ಚಾಗುತ್ತಿರುವುದು ಖಂಡಿತ. ನಮ್ಮ ನಾಗರೀಕ ಸಮಾಜದ ವೈಪರಿತ್ಯ. ಸಾಮಾಜಿಕ ವಿಘಟನೆಗಳು, ರಾಜಕೀಯ ಗಲಭೆಗಳು, ದೇಶದಾದ್ಯಂತ ನಾಯಿಕೊಡೆಗಳಂತೆ ಹಬ್ಬುತ್ತಿರುವ ಅಪರಾಧಿ ಜಾಲಗಳು ನಮ್ಮ ನ್ಯಾಯಾಂಗ ವ್ಯವಸ್ಥೆಗೆ ದೊಡ್ಡ ಸವಾಲಾಗಿ ಪರಿಣಮಿಸುತ್ತಿವೆ. ಇಲ್ಲಿ ಬಂಧಿಸಲ್ಪಟ್ಟ ಮಹಿಳೆಯರಲ್ಲಿ ಒಬ್ಬಿಬ್ಬರು ಅಮಾಯಕರು. ಮುಗ್ಧರಿರಬಹುದಾದರೂ ಹೆಚ್ಚಿನ ಸಂಖ್ಯೆಯಲ್ಲಿ ಅಪರಾಧ ಎಸಗಿದವರು, ಪರಿಸ್ಥಿತಿಯ ಒತ್ತಡಕ್ಕೆ ಒಳಗಾದವರು ಇದ್ದರು. ಯಾವುದನ್ನು ಅಪರಾಧವೆಂದು ಪರಿಗಣಿಸಬೇಕು? ಅಪರಾಧಕ್ಕೆ ಕಾರಣವಾದ ಅಂಶಗಳನ್ನು ವಿಶ್ಲೇಷಿಸಿಕೊಳ್ಳುವುದು ಹೇಗೆ? ಎಂಬುದು ತುಂಬಾ ತಾರ್ಕಿಕ ಸಂಘರ್ಷದ ಕುತೂಹಲ ಮೂಡಿಸುವ ಸಂಗತಿಗಳಾಗಿರುತ್ತವೆ. ಗಂಭೀರವಾದ ವಿವೇಚನೆಯನ್ನು ಆಚೆಗಿಟ್ಟು ನೋಡಿದಾಗಲೂ ಕೆಲವು ಮೇಲ್ಪದರಿನ ಸತ್ಯಗಳು ಗೋಚರವಾಗದೆ ಇರದು.

ಭೋಗ ಸಂಸ್ಕೃತಿಯ ಪರಿಣಾಮ

ಮುಕ್ತ ಮಾರುಕಟ್ಟೆ ನಿರ್ಮಿಸಿದ ಭೋಗ ಸಂಸ್ಕೃತಿಯ ಭೌತ ದಾಹ, ಜಾಗತಿಕ ಮಟ್ಟದ ಆರ್ಥಿಕ ಪೈಪೋಟಿಗಳು ತೀರಾ ಜನಸಾಮಾನ್ಯರ ಬದುಕಿನ ಮೇಲೆ ತುಂಬಾ ಸಂಕೀರ್ಣದ ಗಂಭೀರ ಪರಿಣಾಮ ಬೀರಿವೆ. ಗ್ರಾಮೀಣ ಪ್ರದೇಶಗಳಲ್ಲಿ ಆಸ್ತಿ-ಪಾಸ್ತಿಯ ಕುಟುಂಬ ಕಲಹಗಳು ಹೆಚ್ಚಾಗಿದ್ದು ಇಂಥ ಷಡ್ಯಂತ್ರಗಳಲ್ಲಿ ಇತ್ತೀಚಿಗೆ ಮಹಿಳೆಯರನ್ನು ವೆಗ್ಗಳವಾಗಿ ಬಳಸಿಕೊಳ್ಳಲಾಗುತ್ತಿದೆ. ಪುರುಷರಿಗೆ ಉದ್ಯೋಗಾವಕಾಶಗಳು ಕಡಿಮೆ ಯಾಗುತ್ತಿರುವ ಪರಿಣಾಮವಾಗಿಯೂ ಕುಟುಂಬ ನಿರ್ವಹಣೆಯು ಪೂರ್ತಿಯಾಗಿ ಮಹಿಳೆಯ ಮೇಲೆ ಬೀಳುತ್ತಿದ್ದು ಪರಿಣಾಮತಃ ಮಹಿಳೆಯರು ಎಲ್ಲ ಬಗೆಯ ಕುಟೀಲ, ಕುನೀತಿಯ ವ್ಯವಸ್ಥೆಯೊಂದಿಗೆ ಕೈ ಜೋಡಿಸಬೇಕಾದ ಅನಿವಾರ್ಯತೆ ಎದುರಾಗುತ್ತಿದೆ. ಎಲ್ಲಕ್ಕಿಂತ ಭಯಾನಕ ಸಂಗತಿಯೆಂದರೆ ಕುಟುಂಬ ಕಲಹ, ಆಸ್ತಿ-ಪಾಸ್ತಿ ಜಗಳಗಳಾಗಿ ಕೇಸುಗಳಾದಾಗ ಮನೆಮಂದಿಯನ್ನು ಬಂಧಿಸಿ ತರಲಾಗುತ್ತದೆ. ಸಂಬಂಧಪಟ್ಟ ಪುರುಷ ಕೈದಿಗಳನ್ನು ಹರಸಾಹಸ ಮಾಡಿ ಬೇಲ್ (ಜಾಮೀನು) ಮಾಡಿಸಿಕೊಂಡು ಖುಲಾಸೆ ಮಾಡಲಾಗುತ್ತದೆ. ಆದರೆ ಅದೇ ಮನೆಯ ಮಹಿಳಾ ಖೈದಿಗಳನ್ನು ಮಾತ್ರ ಬಿಡಿಸಿಕೊಂಡು ಹೋಗುವುದೇ ಇಲ್ಲ. ವರದಕ್ಷಿಣೆ ಅಪರಾಧಗಳಲ್ಲಿಯೂ ಸಂಬಂಧಪಟ್ಟ ಗಂಡ, ಮಾವ, ಇನ್ನಿತರ ಸಂಬಂಧಿಕರು ಬೇಗನೆ ಖುಲಾಸೆಯಾದರೆ, ಅತ್ತೆ ನಾದನಿಯರು ಮಾತ್ರ ವಿಚಾರಣೆಯ ಅವಕಾಶವಿಲ್ಲದೆ ಕೊಳೆಯುತ್ತಲೇ ಇರುತ್ತಾರೆ. ವರದಕ್ಷಿಣೆ ಕಿರುಕುಳಕ್ಕೆ ಬಲಿಯಾಗಿ ಸತ್ತವಳು ಮಹಿಳೆಯೇ. ಈ ಅಪರಾಧ ಎಸಗಿದವರಿಗೆ ಶಿಕ್ಷೆಯಾಗಲೇಬೇಕು. ಆದರೆ ಇಂಥ ಸ್ಥಿತಿಗೆ ಕಾರಣವಾದ ಪುರುಷಪ್ರಧಾನ ವ್ಯವಸ್ಥೆಯು ಇಬ್ಬಗೆಯ ಧಾರೆಯಂತೆ ಎರಡೂ ಕಡೆಯೂ ಮಹಿಳೆಯರನ್ನು ಗುರಿ ಮಾಡುತ್ತಿರುತ್ತದೆ. ಇದೇ ಅಪರಾಧಕ್ಕೆ ಕುಮ್ಮಕ್ಕು ನೀಡಿದ. ಪ್ರತ್ಯಕ್ಷವಾಗಿ ವರದಕ್ಷಿಣೆ ಹಣ ಪಡೆದ ಗಂಡ, ಮಾವ, ಭಾವ, ಮೈದುನ ಇತ್ಯಾದಿ ಪುರುಷರೆಲ್ಲ ಒಂದೋ ಹಣ, ರಾಜಕೀಯ ಪ್ರಭಾವ ಬಳಸಿ ಬೇಗನೆ ಖುಲಾಸೆಯಾಗುತ್ತಾರೆ. ಶ್ರೀಮಂತ ಮನೆತನದ ಮಹಿಳೆಯರು ಅಪರಾಧ ಸಾಬೀತಾಗದೆ ಥಟ್ಟನೆ ಹೊರಬರುತ್ತಾರೆ. ಆದರೆ ಸ್ತ್ರೀಯರು ತಮ್ಮದಲ್ಲದ ನಂಬಿಕೆಗಳಿಗೆ ಬಲಿಯಾಗಿ ತಮಗರಿವಾಗದಂತೆ ಸ್ತ್ರೀ ವಿರೋಧಿ ಮನೋಭಾವನೆ ಬೆಳೆಸಿಕೊಂಡು ಅಪರಾಧಕ್ಕೆ ಪಕ್ಕಾಗುತ್ತಾರೆ. ಇನ್ನೊಂದೆಡೆ ಹೊರಬರುವ ದಾರಿ ಕಾಣದೆ ಒದ್ದಾಡುತ್ತಾರೆ. ಅದರಲ್ಲೂ ಬಡ, ದಲಿತ, ಜನಸಾಮಾನ್ಯ ಮಹಿಳೆಯರಂತೂ ವ್ಯವಸ್ಥೆ ಮತ್ತು ಕುಟುಂಬದ ಒಳಸುಳಿಗೆ ಸಿಕ್ಕು ಅಪರಾಧಿ ಲೋಕದ ಶಾಶ್ವತ ಸದಸ್ಯರಾಗಿ ಬಿಡುತ್ತಾರೆ. ಭೂಜ್ವಾ ವ್ಯವಸ್ಥೆಯ ಮಾನದಂಡಗಳನ್ನಿಟ್ಟುಕೊಂಡು ರೂಪಿಸಲಾದ ನ್ಯಾಯ, ನೀತಿಯಂತಹ ನಂಬಿಕೆಗಳು ಹೇಗೆ ದಮನಿತರನ್ನು ತೀರಷ್ಟು ಪಾತಾಳಕ್ಕೆ ತುಳಿಯುತ್ತವೆ ಎಂಬುದಕ್ಕೆ ಸಾಕ್ಷಿಯೆಂಬಂತೆ ಅಲ್ಲಿನ ಮಹಿಳೆಯರು ನಿಂತಿದ್ದರು. ಅಂದಿನ ಕಾರ್ಯಕ್ರಮದ ಅತಿಥಿ ಉಪನ್ಯಾಸಕರಾಗಿದ್ದ ಕೆ.ನೀಲಾ ಅವರು ಅಪರಾಧಿತನದ ನಿರ್ಮೂಲನೆಗೆ ಅವಶ್ಯವಾಗಿ ಬೇಕಾಗುವ ಸಮಾಜದ ಸಮೂಲ ಪರಿವರ್ತನೆ ಮತ್ತು ಅದರ ಮಾರ್ಗೋಪಾಯಗಳನ್ನು ಕುರಿತು ಅಲ್ಲಿನ ಮಹಿಳೆಯರಿಗೆ ಮನವರಿಕೆ ಮಾಡಿಕೊಟ್ಟಿದ್ದು ಅತ್ಯಂತ ಸಮಯೋಚಿತವಾಗಿತ್ತು. ಅವರ ಮಾತಿನ ಸತ್ಯ ಆವರ ಮಹಿಳೆಯರ ಮನೋಪಾತಳಿಯನ್ನು ಬಗೆದು ಪಶ್ಚಾತಾಪದ ತೀಕ್ಷ್ಣ ನೋಟ ಅವರ ಗುಳಿಬಿದ್ದ ಕಣ್ಣುಗಳಲ್ಲಿ ಹರಡಿಕೊಳ್ಳತೊಡಗಿತ್ತು.

ನಿರೀಕ್ಷೆಗಳನ್ನು ಸುಳ್ಳಾಗಿಸಿದ ಯುಪಿಎ

ನಿತ್ಯಾನಂದಸ್ವಾಮಿ

ಕೇಂದ್ರ ಯುಪಿಎ ಸರ್ಕಾರ ಜನತೆಗೆ 'ಆಮ್ ಆದ್ಮಿ' ಸರ್ಕಾರವನ್ನು ನೀಡುವುದಾಗಿ ಮಾತು ಕೊಟ್ಟಿತ್ತು. ಆದರೆ ಅದು ಏನೆಲ್ಲಾ ಮಾಡಬಹುದಿತ್ತೋ ಅದರಲ್ಲಿ ಬಹಳಷ್ಟನ್ನು ಮಾಡಿಲ್ಲ.

2004ರ ಸಾರ್ವತ್ರಿಕ ಚುನಾವಣೆಗಳ ಫಲಿತಾಂಶವನ್ನು ನೆನಪು ಮಾಡಿಕೊಳ್ಳಬೇಕಾದ ಪರಿಸ್ಥಿತಿ ಬಂದಿದೆ. ಅಂದು ಯಾವುದೇ ಒಂದು ಪಕ್ಷಕ್ಕೆ, ಅಥವಾ ಪಕ್ಷಗಳ ಗುಂಪಿಗೆ ಅಗತ್ಯ ಬಹುಮತ ಲಭಿಸಿರಲಿಲ್ಲ. ಅಧಿಕಾರದಲ್ಲಿದ್ದ ಕೋಮುವಾದಿ ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರ ಹೀನಾಯವಾಗಿ ಸೋತಿತ್ತು. ಹಾಗೆ ಬಿಟ್ಟಿದ್ದರೆ, ಬಿಜೆಪಿ ತನ್ನ ಅವಕಾಶವಾದಿ ಮೈತ್ರಿಯನ್ನು ವಿಸ್ತರಿಸಿ, ಹಿಂಬಾಗಿಲಿನಿಂದಾದರೂ ಅಧಿಕಾರಕ್ಕೆ ಬರುವ ಪ್ರಯತ್ನವನ್ನು ಮಾಡದೆ ಇರುತ್ತಿರಲಿಲ್ಲ. ಮೂರನೇ ಗುಂಪಿನಲ್ಲಿದ್ದ ಎಡಪಕ್ಷಗಳು ಈ ಅಪಾಯವನ್ನು ಮನಗಂಡು, ಬಿಜೆಪಿ ಮತ್ತೆ ಅಧಿಕಾರಕ್ಕೆ ಬರುವುದನ್ನು ತಡೆಯುವ ಏಕೈಕ ಉದ್ದೇಶದಿಂದ, ಲೋಕಸಭೆಯಲ್ಲಿ 61 ಸದಸ್ಯ ಬಲವನ್ನು ಹೊಂದಿದ ಎಡಪಕ್ಷಗಳು ಕಾಂಗ್ರೆಸ್ ನೇತೃತ್ವದ ಸಂಯುಕ್ತ ಪ್ರಗತಿಪರ ಮೈತ್ರಿ (ಯುಪಿಎ) ಕೂಟಕ್ಕೆ ಬಾಹ್ಯ ಬೆಂಬಲ ನೀಡಲು ನಿರ್ಧರಿಸಿದವು. ಈ ಬೆಂಬಲ ಬೇಷರತ್ ಬೆಂಬಲ ಆಗಿರಲಿಲ್ಲ. ಎಡ ಪಕ್ಷಗಳೊಂದಿಗೆ ಹಲವು ಸುತ್ತಿನ ಚರ್ಚೆಗಳನ್ನು ನಡೆಸಿ, ಎಡಪಕ್ಷಗಳ ಸಲಹೆಗಳನ್ನು ಅಂಗೀಕರಿಸಿ ರಚಿಸಲಾದ ಸಾಮಾನ್ಯ ಕನಿಷ್ಠ ಕಾರ್ಯಕ್ರಮದ ಆಧಾರದಲ್ಲಿ ಮಾತ್ರ ಎಡಪಕ್ಷಗಳು ಯುಪಿಎ ಸರ್ಕಾರಕ್ಕೆ ತಮ್ಮ ಬಾಹ್ಯ ಬೆಂಬಲವನ್ನು ಘೋಷಿಸಿದ್ದವು.


ಯುಪಿಎ ಸರ್ಕಾರದ ಈ ಸಾಮಾನ್ಯ ಕನಿಷ್ಠ ಕಾರ್ಯಕ್ರಮ (ಸಿಎಂಪಿ) ದೇಶಾದ್ಯಂತ ದುಡಿಯುವ ಜನಸಮುದಾಯಗಳಲ್ಲಿ ಹಲವು ನಿರೀಕ್ಷೆಗಳನ್ನು ಹುಟ್ಟುಹಾಕಿತ್ತು. ದೇಶದಲ್ಲಿ ಸಮತೋಲನ ಅಭಿವೃದ್ಧಿ ಸಾಧಿಸಲು ಇದೊಂದು ನೀಲನಕ್ಷೆಯಾಗಲಿದೆ ಎಂದು ಹಲವರು ನಂಬಿದ್ದರು. ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರದ ಅಧಿಕಾರಾವಧಿಯಲ್ಲಿ ಹಿಂದಿನ ಕಾಂಗ್ರೆಸ್ ಸರ್ಕಾರಕ್ಕಿಂತಲೂ ಹೆಚ್ಚು ರಭಸದಿಂದ ಜಾರಿಗೆ ತರಲಾದ ನವ ಉದಾರೀಕರಣ ನೀತಿಗಳ ಫಲವಾಗಿ ಸಂಕಷ್ಟಕ್ಕೀಡಾದ ರೈತರಿಗೆ, ಕಾರ್ಮಿಕರಿಗೆ ನಿರುದ್ಯೋಗಿಗಳಿಗೆ ಮಧ್ಯಮ ವರ್ಗದವರಿಗೆ ಇದರಿಂದ ತುರ್ತು ಪರಿಹಾರ ಸಿಗಬಹುದೆಂದು ನಿರೀಕ್ಷಿಸಲಾಗಿತ್ತು. ದೇಶದ ಮತದಾರರಿಂದ ತೀವ್ರ ಶಿಕ್ಷೆಗೆ ಒಳಗಾಗಿ, ಬಹುಮತಕ್ಕಾಗಿ ಎಡಪಕ್ಷಗಳನ್ನು ಅವಲಂಬಿಸಬೇಕಾದ ಈ ಸ್ಥಿತಿಯಲ್ಲಿ ಕಾಂಗ್ರೆಸ್ ತಮ್ಮ ಬೇಡಿಕೆಗಳನ್ನು ಈಡೇರಿಸಬಹುದೆಂಬ ಜನರ ನಿರೀಕ್ಷೆಯಲ್ಲಿ ಅಸಹಜವಾದುದು ಏನೂ ಇರಲಿಲ್ಲ. ಆದರೆ ಯುಪಿಎ ಸರ್ಕಾರ ತನ್ನ 4 ವರ್ಷಗಳ ಆಡಳಿತವನ್ನು ಮುಗಿಸಿ ಕೊನೆಯ ವರ್ಷಕ್ಕೆ ಕಾಲಿಡುತ್ತಿರುವ ಈ ಸಂದರ್ಭದಲ್ಲಿ ಜನತೆ ನಿರಾಶೆಯ ನಿಟ್ಟುಸಿರು ಬಿಡುತ್ತಿರುವುದು ಅಷ್ಟೇ ಸಹಜವಾಗಿದೆ.

ದೊಡ್ಡ ಬಂಡವಾಳಿಗರ ಹಿತಕ್ಕೆ ಬದ್ಧ
:

ದೇಶದಲ್ಲಿ ಕಾಂಗ್ರೆಸ್ಸಿನ ಏಕಚಕ್ರಾಧಿಪತ್ಯ ಕೊನೆಗೊಂಡಿದೆ ಎಂದ ಮಾತ್ರಕ್ಕೆ ಅದರ ವರ್ಗ ಸ್ವರೂಪದಲ್ಲಿ ಬದಲಾವಣೆ ಯಾಗಿಬಿಟ್ಟಿದೆ ಎಂದು ಯಾರೂ ಅಂದುಕೊಂಡಿಲ್ಲ. ದೇಶದ ದೊಡ್ಡ ಬಂಡವಾಳಿಗರಲ್ಲಿ ಒಂದು ವಿಭಾಗ ಈಗ ಕಾಂಗ್ರೆಸನ್ನು ಬಿಟ್ಟು ಬಿಜೆಪಿಯನ್ನು ಬೆಂಬಲಿಸಲು ಹೊರಟಿರುವುದು ಸತ್ಯ. ಆದರೆ ಕಾಂಗ್ರೆಸ್ ಪಕ್ಷ ಇಂದಿಗೂ ದೊಡ್ಡ ಬಂಡವಾಳಿಗರ ಮತ್ತು ಬಂಡವಾಳಶಾಹಿ ಭೂಮಾಲಿಕರಾಗಿ ಬೆಳೆದಿರುವ ಪಾಳೆಗಾರರ ಪಕ್ಷವಾಗಿಯೇ ಇದೆ. ಅಧಿಕಾರಕ್ಕಾಗಿ ಎಡಪಕ್ಷಗಳನ್ನು ಅವಲಂಬಿಸಿಕೊಂಡು ಇರುವ ಈ ಅಸಹಾಯಕ ಸ್ಥಿತಿಯಲ್ಲಿಯೂ ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರವು ಬಂಡವಾಳಗಾರರ ಹಿತಕ್ಕೆ ಕಿಂಚಿತ್ತೂ ಧಕ್ಕೆಯಾಗದಂತೆ ನೋಡಿಕೊಳ್ಳುವಲ್ಲಿ ಯಶಸ್ವಿಯಾಗಿದೆ.

ಖ್ಯಾತ ಆರ್ಥಿಕ ತಜ್ಞರಾದ ನಮ್ಮ ಪ್ರಧಾನಮಂತ್ರಿ ಡಾ.ಮನಮೋಹನ್‌ಸಿಂಗ್ ಮತ್ತು ಅವರ ಮಂತ್ರಿಮಂಡಲದ ಶುಭ್ರ ಉಡುಪಿನ ಹಣಕಾಸು ಮಂತ್ರಿ ಪಿ.ಚಿದಂಬರಂ ಅವರುಗಳು ಇಂದು ದೇಶದಲ್ಲಿ ಶೇ.8ರಷ್ಟು ದರದಲ್ಲಿ ಬೆಳವಣಿಗೆಯಾಗುತ್ತಿದೆ ಎಂದು ಹೆಮ್ಮೆಯಿಂದ ಹೇಳುತ್ತಿದ್ದಾರೆ. ಇವರು ಹೇಳುವುದನ್ನು ಕೇಳುವಾಗ 2004ರ ಸಾರ್ವತ್ರಿಕ ಚುನಾವಣೆಗಳ ಸಮಯದಲ್ಲಿ ವಾಜಪೇಯಿ ಸರ್ಕಾರ ಹೇಳಿದ್ದು ನೆನಪಾಗುತ್ತದೆ. 'ಭಾರತ ಪ್ರಕಾಶಿಸುತ್ತಿದೆ' ಎಂದು ಸಾಬೀತುಪಡಿಸಲು ಅವರು ಕೋಟಿಗಟ್ಟಲೆ ರೂಪಾಯಿ ಖರ್ಚು ಮಾಡಿ ಪತ್ರಿಕೆಗಳಲ್ಲಿ ಜಾಹೀರಾತು ಪ್ರಕಟಿಸಿದ್ದರು.

ಹೌದು, ಭಾರತದಲ್ಲಿ ಬೆಳವಣಿಗೆಯಾಗುತ್ತಿದೆ. ಯಾರ ಬೆಳವಣಿಗೆ? ಇಲ್ಲಿ ಲಕ್ಷಾಧಿಪತಿಗಳು ಕೋಟ್ಯಾಧಿಪತಿಗಳಾಗುತ್ತಿದ್ದಾರೆ. ಕೋಟ್ಯಾಧಿಪತಿಗಳು ಶತಕೋಟ್ಯಾಧಿಪತಿಗಳಾಗುತ್ತಿದ್ದಾರೆ. ಜಗತ್ತಿನ 20 ಅತಿ ದೊಡ್ಡ



ಶ್ರೀಮಂತರ ಪಟ್ಟಿಯಲ್ಲಿ ಮೂವರು ಭಾರತೀಯರಿದ್ದಾರೆ. ಅತಿ ದೊಡ್ಡ ಶ್ರೀಮಂತರು ಇರುವ ದೇಶಗಳ ಸಾಲಿನಲ್ಲಿ ಅಮೇರಿಕ ಮೊದಲ ಸ್ಥಾನ ಪಡೆದಿದ್ದರೆ ಭಾರತ ಎರಡನೇ ಸ್ಥಾನದಲ್ಲಿದೆ. ಕಳೆದ 20 ವರ್ಷಗಳಿಂದ ಜಪಾನ್ ಈ ಸ್ಥಾನವನ್ನು ಹೊಂದಿತ್ತು. ಈ ವರ್ಷ ಜಪಾನಿನ ಶತಕೋಟಿ ಕುಬೇರರ ಸಂಖ್ಯೆ 24. ಆದರೆ ಭಾರತದ ಶತಕೋಟಿ ಕುಬೇರರ ಸಂಖ್ಯೆ 36.

ಈ ಬೆಳವಣಿಗೆಯ ಕುರಿತಾಗಿಯೇ ದೊಡ್ಡ ಬಂಡವಾಳಿಗರು ಮತ್ತು ಯುಪಿಎ ಸರ್ಕಾರದಲ್ಲಿರುವ ಅವರ ಬೆಂಬಲಿಗರು ಹೆಮ್ಮೆಪಟ್ಟುಕೊಳ್ಳುತ್ತಿರುವುದು. ದೊಡ್ಡ ಬಂಡವಾಳಗಾರರಿಗೆ ಮತ್ತು ವಿದೇಶಿ ಹಣಕಾಸು ಬಂಡವಾಳಗಾರರಿಗೆ ಯುಪಿಎ ಸರ್ಕಾರ ಹೆಚ್ಚೆಚ್ಚು ರಿಯಾಯ್ತಿಗಳನ್ನು ನೀಡುವ ಮೂಲಕ ಖಾಸಗಿ ಕಾರ್ಪೊರೇಟ್ ಬಂಡವಾಳ ಮತ್ತು ಅವರ ಲಾಭಗಳು ಗಣನೀಯವಾಗಿ ಹೆಚ್ಚಾಗಿವೆ. 4000 ಕೋಟಿ ರೂ.ಗಿಂತ ಹೆಚ್ಚಿನ ಆಸ್ತಿ ಹೊಂದಿರುವ ಭಾರತೀಯರ ಸಂಖ್ಯೆ 2006ರಲ್ಲಿ 25 ಇದ್ದದ್ದು 2007ರಲ್ಲಿ 48ಕ್ಕೆ ಏರಿದೆ. ಭಾರತದ 40 ಶತಕೋಟ್ಯಾಧಿಪತಿಗಳ ಒಟ್ಟು ಆಸ್ತಿ 2006ರಲ್ಲಿ 6,88,000 ಕೋಟಿ ರೂ. ಇದ್ದದ್ದು 2007ರಲ್ಲಿ 14,04,000 ಕೋಟಿ ರೂ. ಆಗಿದೆ. ಇಷ್ಟೊಂದು ಅಗಾಧ ಪ್ರಮಾಣದಲ್ಲಿ ಹೆಚ್ಚುತ್ತಿರುವ ಭಾರತೀಯ ದೊಡ್ಡ ಬಂಡವಾಳಿಗರ ಲಾಭ ಮತ್ತು ಸಂಪತ್ತನ್ನು ಅವರು ವಿದೇಶಗಳಲ್ಲಿ ಆಸ್ತಿಯನ್ನು (ಕಂಪನಿಗಳನ್ನು) ಕೊಂಡುಕೊಳ್ಳಲು ಬಳಸುತ್ತಿದ್ದಾರೆ. 2007ರಲ್ಲಿ ವಿದೇಶಿ ಕಂಪನಿಗಳನ್ನು ಕೊಂಡುಕೊಳ್ಳಲು ಭಾರತೀಯ ಕಂಪನಿಗಳು 1,28,000 ಕೋಟಿ ರೂ.ಗಿಂತಲೂ ಹೆಚ್ಚು ಹಣವನ್ನು ತೊಡಗಿಸಿವೆ. ದೇಶದಲ್ಲಿ ಇಂದು ಬಂಡವಾಳ ಹೂಡಿಕೆಯ ಕೊರತೆಯಿಂದಾಗಿ ನಿರುದ್ಯೋಗ ಸಮಸ್ಯೆ ಉಲ್ಬಣಗೊಳ್ಳುತ್ತಿರುವಾಗ ಇಷ್ಟೊಂದು ಅಗಾಧ ಪ್ರಮಾಣದ ಬಂಡವಾಳ ದೇಶದಿಂದ ಹೊರಗೆ ಹರಿದುಹೋಗುತ್ತಿದೆ.

ಕಾರ್ಪೊರೇಟ್ ಕ್ಷೇತ್ರಕ್ಕೆ ಯುಪಿಎ ಸರ್ಕಾರ ಭಾರೀ ಪ್ರಮಾಣದ ತೆರಿಗೆ ರಿಯಾಯ್ತಿಗಳನ್ನು ನೀಡುತ್ತಾ ಬಂದಿದೆ. 2006, 07ರಲ್ಲಿ ಕಾರ್ಪೊರೇಟ್ ಕ್ಷೇತ್ರಕ್ಕೆ ನೀಡಲಾದ ತೆರಿಗೆ ರಿಯಾಯ್ತಿಗಳಿಂದ ಸರ್ಕಾರಕ್ಕೆ 50,000 ಕೋಟಿ ರೂ.ಗಿಂತಲೂ ಹೆಚ್ಚು ನಷ್ಟವಾಗಿದೆ. ಅಬಕಾರಿ ಸುಂಕ ರಿಯಾಯ್ತಿಗಳ ಮೂಲಕ ಸುಮಾರು ಒಂದು ಲಕ್ಷ ಕೋಟಿ ರೂ.ನಷ್ಟವಾಗಿದೆ. ಇಂತಹ ನೀತಿಗಳಿಂದಾಗಿ ದೊಡ್ಡ ಬಂಡವಾಳಿಗರ ಕೈಗಳಲ್ಲಿ ಸಂಪತ್ತು ಕೇಂದ್ರೀಕರಣಗೊಳ್ಳುತ್ತಿದೆ.

ದೂರವಾಣಿ ಕ್ಷೇತ್ರದಲ್ಲಿ ಶೇ.74ರಷ್ಟು ವಿದೇಶಿ ನೇರ ಬಂಡವಾಳ, ವಿಮೆ ಮತ್ತು ಬ್ಯಾಂಕಿಂಗ್‌ನಲ್ಲಿ ವಿದೇಶಿ ನೇರ ಬಂಡವಾಳ ಹೆಚ್ಚಿಸಲು ಪ್ರಯತ್ನ, ಚಿಲ್ಲರೆ ವ್ಯಾಪಾರದಲ್ಲಿ ವಿದೇಶಿ ನೇರ ಬಂಡವಾಳ ಹೂಡಿಕೆಯ ಆರಂಭ, ರಿಯಲ್ ಎಸ್ಟೇಟ್ ಕ್ಷೇತ್ರದಲ್ಲಿ ವಿದೇಶಿ ನೇರ ಬಂಡವಾಳ, ಕೃಷಿಯ ಕಂಪನೀಕರಣ, ಗುತ್ತಿಗೆ ಕೃಷಿ, ಆಹಾರಧಾನ್ಯ ವ್ಯಾಪಾರ ಖಾಸಗೀಕರಣಗೊಳಿಸಲು ಕ್ರಮ, ಲಾಭದಾಯಕ ಸಾರ್ವಜನಿಕ ವಲಯದ ಘಟಕಗಳಲ್ಲಿನ ಬಂಡವಾಳ ಹಿಂತೆಗೆತ, ಉನ್ನತ ಶಿಕ್ಷಣದಲ್ಲಿ ವಿದೇಶಿ ನೇರ ಬಂಡವಾಳ ಮೊದಲಾದ ಕ್ರಮಗಳಿಂದ ಸಮಾಜದ ಎಲ್ಲ ವಲಯಗಳಲ್ಲಿ ವಿದೇಶಿ ನೇರ ಬಂಡವಾಳಕ್ಕೆ ಪ್ರವೇಶ ನೀಡಲಾಗುತ್ತಿದೆ.

ಯುಪಿಎ ಸರ್ಕಾರದ 'ವಿಶೇಷ ಆರ್ಥಿಕ ವಲಯ ನೀತಿ' ಯೂ ಸಹ ದೊಡ್ಡ ಬಂಡವಾಳಿಗರ ಪಕ್ಷಪಾತಿಯಾಗಿದೆ. ಇದು ನೈಜ ಕೈಗಾರೀಕರಣವನ್ನು ಪ್ರೋತ್ಸಾಹಿಸುವ ಬದಲು ಅಕ್ರಮ ರಿಯಲ್ ಎಸ್ಟೇಟ್ ದಂಧೆಗೆ ಕುಮ್ಮಕ್ಕು ನೀಡುತ್ತದೆ. ವಿಶಾಲ ಭೂಭಾಗಗಳನ್ನು, ಕೆಲವೊಮ್ಮೆ ಫಲವತ್ತಾದ ಕೃಷಿ ಭೂಮಿಯನ್ನು ಖಾಸಗಿ ವಿಶೇಷ ಆರ್ಥಿಕ ವಲಯದ ಪ್ರಾಯೋಜಕರಿಗೆ ನೀಡಲಾಗುತ್ತಿದ್ದು, ಜೊತೆಯಲ್ಲಿ ಅಗಾಧ ಪ್ರಮಾಣದ ತೆರಿಗೆ ರಿಯಾಯ್ತಿಗಳನ್ನು ನೀಡಲಾಗುತ್ತಿದೆ.

ಚಿಲ್ಲರೆ ವ್ಯಾಪಾರದಲ್ಲಿ ವಿದೇಶಿ ನೇರ ಬಂಡವಾಳಕ್ಕೆ ಅವಕಾಶ ಕೊಡುವ ಮತ್ತು ದೇಶೀಯ ದೊಡ್ಡ ಬಂಡವಾಳಶಾಹಿ ಕಂಪನಿಗಳಿಗೆ ಚಿಲ್ಲರೆ ವ್ಯಾಪಾರ ಕ್ಷೇತ್ರದಲ್ಲಿ ಪ್ರವೇಶ ನೀಡುವ ಯುಪಿಎ ಸರ್ಕಾರದ ಧೋರಣೆಯಿಂದ ದಶಲಕ್ಷಗಟ್ಟಲೆ ಸಣ್ಣ ವ್ಯಾಪಾರಿಗಳು ಬೀದಿಪಾಲಾಗುವ ಅಪಾಯ ಉಂಟಾಗಿದೆ. ಗಣಿಕ್ಷೇತ್ರವನ್ನು ಮತ್ತಷ್ಟು ಉದಾರೀಕರಣಗೊಳಿಸಲು ಮತ್ತು ಖಾಸಗೀಕರಣಗೊಳಿಸಲು ಯುಪಿಎ ಸರ್ಕಾರ ಹೊರಟಿರುವುದು ದೇಶಕ್ಕೆ ಇನ್ನೊಂದು ದೊಡ್ಡ ಅಪಾಯವನ್ನು ತಂದೊಡ್ಡಲಿದೆ. ಕಬ್ಬಿಣದ ಅದಿರು ಮತ್ತು ಇತರ ಬರಿದಾಗುವ ಖನಿಜಗಳನ್ನು ಲಂಗುಲಗಾಮಿಲ್ಲದೆ ರಫ್ತು ಮಾಡುವುದು ಮತ್ತು ಖಾಸಗಿ ಕಂಪನಿಗಳಿಗೆ ಅಕ್ರಮ ಸಂಪಾದನೆಗೆ ಅವಕಾಶ ಮಾಡುತ್ತಿರುವುದು ದೇಶಕ್ಕೆ ಹಾನಿಕಾರಕವಾಗಿದೆ.

ಶೋಚನೀಯವಾದ ಜನಜೀವನ ಪರಿಸ್ಥಿತಿ

ಕಾಂಗ್ರೆಸ್ ಪಕ್ಷದ ನೇತೃತ್ವದ ಯುಪಿಎ ಸರ್ಕಾರ ಬಂಡವಾಳಿಗರ ಪಕ್ಷಪಾತಿಯಾಗಿ ಕಾರ್ಯ ನಿರ್ವಹಿಸುತ್ತಾ ಬಂದುದರಿಂದ ದೇಶದಲ್ಲಿ ಶ್ರೀಮಂತರು ಶ್ರೀಮಂತರಾಗುತ್ತಿದ್ದಾರೆ. ದೊಡ್ಡ ಬಂಡವಾಳಿಗರ ಲಾಭ ಹೆಚ್ಚುತ್ತಿದೆ. ನಗರ ಪ್ರದೇಶಗಳ ಮೇಲ್ವರ್ಗಗಳ ಆದಾಯವೂ ಹೆಚ್ಚುತ್ತಿದೆ. ಆದರೆ ನಗರ ಪ್ರದೇಶದ ಕಾರ್ಮಿಕರಾಗಲಿ, ಗ್ರಾಮೀಣ ಪ್ರದೇಶದ ವಿವಿಧ ಕಾರ್ಷಿಕ ವಿಭಾಗಗಳಾಗಲಿ ಯಾವುದೇ ಲಾಭವನ್ನು ಪಡೆಯುತ್ತಿಲ್ಲ. ಇಂತಹ ಕಾರ್ಪೊರೇಟ್ ಬಂಡವಾಳಪ್ರೇರಿತ ಬೆಳವಣಿಗೆಯಿಂದ ಉದ್ಯೋಗದ ಅವಕಾಶಗಳು ಹೆಚ್ಚಾಗುವುದಿಲ್ಲ. ಬಡವ, ಶ್ರೀಮಂತರ ನಡುವಿನ ಅಂತರ ಕಡಿಮೆಯಾಗುವುದಿಲ್ಲ.

ಇಲ್ಲೊಂದು 'ಹೊಳೆಯುವ ಭಾರತ' ಇದೆ. ಆದರೆ ಪಕ್ಕದಲ್ಲೇ ಇನ್ನೊಂದು 'ನರಳುವ ಭಾರತ'ವೂ ಇದೆ. ಇಲ್ಲಿ ಶೇ.50 ಜನ ದೇಶದ ಶೇ.95ರಷ್ಟು ಸಂಪತ್ತನ್ನು ಹೊಂದಿದ್ದಾರೆ. ಇದು ಹೊಳೆಯುವ ಭಾರತ! ಆದರೆ ಉಳಿದ ಶೇ.50ರಷ್ಟು ಜನ ಕೇವಲ ಶೇ.5ರಷ್ಟು ಸಂಪತ್ತನ್ನು ಹೊಂದಿದ್ದಾರೆ. ಇದು ನರಳುವ ಭಾರತ!!

ಅಸಂಘಟಿತ ವಲಯಗಳಲ್ಲಿ ಉದ್ದಿಮೆಗಳ ಕುರಿತಾದ ರಾಷ್ಟ್ರೀಯ ಆಯೋಗದ ಇತ್ತೀಚಿನ ವರದಿ ಪ್ರಕಾರ 2004, 05ನೇ ಸಾಲಿನ ಕೊನೆಯಲ್ಲಿ, ದಿನವೊಂದಕ್ಕೆ 20 ರೂ.ಗಳಿಗಿಂತ ಕಡಿಮೆ ಆದಾಯ ಗಳಿಸುವವರ ಸಂಖ್ಯೆ 836 ದಶಲಕ್ಷ. ಅಂದರೆ ಜನಸಂಖ್ಯೆಯ ಶೇ.77ರಷ್ಟು ಆಗಿತ್ತು. ಅದೇ ವರ್ಷದ ಭಾರತದ ತಲಾ ಆದಾಯವೂ ತಿಂಗಳಿಗೆ ರೂ.1937 ಇತ್ತು. ಅಂದರೆ ಈ ಮಾಸಿಕ ತಲಾ ಆದಾಯವು ಶೇ.77ರಷ್ಟು ಜನರ ಮಾಸಿಕ ಆದಾಯದ 3 ಪಟ್ಟು ಆಗಿರುತ್ತದೆ. ಈ ಅಂಕಿಅಂಶಗಳು ಭಾರತದಲ್ಲಿ ಹೆಚ್ಚುತ್ತಿರುವ ಆರ್ಥಿಕ ಅಸಮಾನತೆಯನ್ನು ತೋರುಸುತ್ತವೆ.

ಬಂಡವಾಳಶಾಹಿ ಬೆಳವಣಿಗೆಯ ಪ್ರಸಕ್ತ ಹಂತದಲ್ಲಿ ಕಾರ್ಮಿಕ ವರ್ಗ ತೀವ್ರ ಶೋಷಣೆಯನ್ನು ಅನುಭವಿಸುತ್ತಿದೆ. ಕೈಗಾರಿಕೆಗಳಲ್ಲಿನ ಬಿಕ್ಕಟ್ಟು ಮತ್ತು ಕಾರ್ಖಾನೆಗಳ ಮುಚ್ಚುವಿಕೆಯಿಂದ ಲಕ್ಷಾಂತರ ಕಾರ್ಮಿಕರು ಜೀವನೋಪಾಯ ವನ್ನು ಕಳೆದುಕೊಂಡಿದ್ದಾರೆ. ಸಾರ್ವಜನಿಕ ವಲಯದಲ್ಲಿನ ಉದ್ಯೋಗಗಳು ಗಣನೀಯ ಪ್ರಮಾಣದಲ್ಲಿ ಕಡಿಮೆಯಾಗಿವೆ. ಕಾರ್ಮಿಕರ ಹಂಗಾಮೀಕರಣ, ಹೊರಗುತ್ತಿಗೆ ಹಾಗೂ ಕಾಯಂ ಸ್ವರೂಪದ ಕೆಲಸಗಳಿಗೆ ಗುತ್ತಿಗೆ ಕಾರ್ಮಿಕರ ವ್ಯಾಪಕ ಬಳಕೆಯಿಂದಾಗಿ ಕಾರ್ಮಿಕರು ಕಾನೂನುಬದ್ಧ ಹಕ್ಕುಗಳಿಂದ ವಂಚಿತರಾಗುತ್ತಿದ್ದಾರೆ. ಕಾರ್ಮಿಕ ಸಂಘಗಳನ್ನು ರಚಿಸುವ ಕಾರ್ಮಿಕರ ಹಕ್ಕುಗಳ ಮೇಲೆ ಧಾಳಿ ಮತ್ತು ಕಾರ್ಮಿಕ ಕಾನೂನುಗಳ ಉಲ್ಲಂಘನೆ ವ್ಯಾಪಕವಾಗುತ್ತಿದೆ ಮಾತ್ರವಲ್ಲ, ನ್ಯಾಯಾಲಯಗಳಲ್ಲಿಯೂ ಕಾರ್ಮಿಕರ ವಿರುದ್ಧವಾದ ತೀರ್ಪುಗಳು ಸಾಮಾನ್ಯ[illegible]ಗುತ್ತಿವೆ. ಯುಪಿಎ ಸರ್ಕಾರದ ಅವಧಿಯ[illegible], ಅಗತ್ಯ

12ಕ್ಕೆ

ನಿರೀಕ್ಷೆಗಳನ್ನು ಸುಳ್ಳಾಗಿಸಿದ ಯುಪಿಎ

ಪುಟ 11 ರಿಂದ

ವಸ್ತುಗಳ-ಮುಖ್ಯವಾಗಿ ಆಹಾರ ಸಾಮಗ್ರಿಗಳ ಬೆಲೆಗಳು ತೀವ್ರ ಏರಿಕೆಯನ್ನು ಕಂಡಿವೆ. ಪೆಟ್ರೋಲಿಯಂ ಉತ್ಪನ್ನಗಳ ಮೇಲಿನ ತೆರಿಗೆ ಸ್ವರೂಪವನ್ನು ಪರಿಷ್ಕರಿಸಲು ಎಡಪಕ್ಷಗಳು ನೀಡಿರುವ ಸಲಹೆಗಳನ್ನು ತಿರಸ್ಕರಿಸಿ ಇಂಧನ ಬೆಲೆಗಳನ್ನು ಏರಿಸುತ್ತಾ ಹೋಗಿರುವುದರಿಂದ ಹಣದುಬ್ಬರ ಹೆಚ್ಚಾಗಿವೆ. ಬೆಲೆ ಏರಿಕೆಗೆ ತಕ್ಕಂತೆ ದುಡಿಯುವ ಜನರ ಆದಾಯ ಹೆಚ್ಚಾಗುವುದಿಲ್ಲ. ವಿಶೇಷವಾಗಿ ಕೃಷಿ ಕೂಲಿಕಾರರು ಮತ್ತು ಅಸಂಘಟಿತ ವಲಯದ ಕಾರ್ಮಿಕರು ಕಾನೂನುಬದ್ಧ ಕನಿಷ್ಠ ವೇತನಕ್ಕಿಂತ ಕಮ್ಮಿ ವೇತನ ಪಡೆಯುತ್ತಿರುತ್ತಾರೆ. ಮಾತ್ರವಲ್ಲ ಸಾಮಾಜಿಕ ಭದ್ರತೆಯ ಸೌಲಭ್ಯಗಳಿಂದ ವಂಚಿತರಾಗಿರುತ್ತಾರೆ. ಗ್ರಾಮೀಣ ಪ್ರದೇಶದಲ್ಲಿ ಹಸಿವು ಮತ್ತು ನಿರುದ್ಯೋಗದಿಂದಾಗಿ ತತ್ತರಿಸುತ್ತಿರುವ ಜನಸಮೂಹಗಳು ದೊಡ್ಡ ಪ್ರಮಾಣದಲ್ಲಿ ನಗರ ಪ್ರದೇಶಗಳಿಗೆ ವಲಸೆ ಹೋಗುತ್ತಿದ್ದು ಅಲ್ಲಿ ಭಯಾನಕವಾದ ಶೋಷಣೆಗೆ ಒಳಗಾಗುತ್ತಿದ್ದಾರೆ. ಬೆಲೆ ಏರಿಕೆಗೆ ಕಡಿವಾಣ ಹಾಕಲು 2008-09ರ ಬಜೆಟ್ ಸಹ ಸಂಪೂರ್ಣ ವಿಫಲವಾಗಿದೆ.

ಬಗೆಹರಿಯದ ಕಾರ್ಷಿಕ ಬಿಕ್ಕಟ್ಟು :

ಕೃಷಿ ಬಿಕ್ಕಟ್ಟನ್ನು ಬಗೆಹರಿಸುವಲ್ಲಿ ಯುಪಿಎ ಸರ್ಕಾರ ಸಂಪೂರ್ಣವಾಗಿ ವಿಫಲವಾಗಿದೆ. ಕೃಷಿ ಲಾಗುವಾಡುಗಳ ಬೆಲೆ ಏರಿಕೆ ಮತ್ತು ಕೃಷಿ ಉತ್ಪನ್ನಗಳ ಬೆಲೆ ಏರಿಳಿತದಿಂದಾಗಿ, ಖರ್ಚು ಆದಾಯಕ್ಕಿಂತ ಹೆಚ್ಚಾಗಿ ರೈತರು ದಿವಾಳಿಯಾಗುತ್ತಿದ್ದಾರೆ. ಕೃಷಿಯಲ್ಲಿನ ಸಾರ್ವಜನಿಕ ಹೂಡಿಕೆ ಕಡಿಮೆ ಮಾಡುತ್ತಾ ಬಂದದ್ದರಿಂದ ಕೃಷಿ ಬೆಳವಣಿಗೆಯಲ್ಲಿ ಹಿನ್ನಡೆ ಉಂಟಾಗಿದೆ. ಆಹಾರದಾನ್ಯಗಳ, ಬೇಳೆಕಾಳುಗಳ ಉತ್ಪಾದನೆ ಗಣನೀಯವಾಗಿ ಇಳಿಮುಖವಾಗಿದೆ.

ಭೂಸುಧಾರಣೆಗಳನ್ನು ತಿರುಮುರುವುಗೊಳಿಸುವ ಮತ್ತು ಭೂಮಿತಿ ಕಾಯ್ದೆಗಳನ್ನು ಮೊಟಕುಗೊಳಿಸುವ ಪ್ರವೃತ್ತಿ ಮುಂದುವರೆದಿದೆ. ಸಾಂಸ್ಥಿಕ ಸಾಲದ ಲಭ್ಯತೆಯ ಕೊರತೆಯಿಂದಾಗಿ ಖಾಸಗಿ ಲೇವಾದೇವಿಗಾರರ ಮೇಲಿನ ಅವಲಂಬನೆ ಹೆಚ್ಚಾಗಿದೆ. ಶೇ.49ರಷ್ಟು ರೈತ ಕುಟುಂಬಗಳು ಸಾಲದಲ್ಲಿದ್ದು ಅವರಲ್ಲಿ ಶೇ.70 ರೈತರು ಖಾಸಗಿ ಸಾಲವನ್ನೇ ಅವಲಂಬಿಸಿದ್ದಾರೆ. ಸಾಲದ ಬಾಧೆ ತಾಳಲಾರದೆ ರೈತರು ಒಂದು ಕಡೆ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಇನ್ನೊಂದು ಕಡೆ ತಮ್ಮ ಜಮೀನು ಮತ್ತು ಜಾನುವಾರುಗಳನ್ನು ಕಳೆದುಕೊಂಡು ನಿರ್ಗತಿಕರಾಗುತ್ತಿದ್ದಾರೆ.

2008-09ರ ಬಜೆಟ್‌ನಲ್ಲಿ ದೇಶದ ಸಣ್ಣ ಮತ್ತು ಮಧ್ಯಮ ರೈತರ ಸಾಲ ಮನ್ನಾ ಮಾಡಲು ಪ್ಯಾಕೇಜ್ ಪ್ರಕಟಿಸಿರುವುದು ಸ್ವಾಗತಾರ್ಹ ಕ್ರಮವಾಗಿದೆ. ಇದನ್ನು ಯುಪಿಎ ಸರ್ಕಾರ ಅಧಿಕಾರಕ್ಕೆ ಬಂದ ತಕ್ಷಣ ಮಾಡಬೇಕಾಗಿತ್ತು. ಈ ಪ್ಯಾಕೇಜ್‌ನಿಂದಾಗಿ ಶೇ.70 ರಷ್ಟಿರುವ ರೈತರ ಖಾಸಗಿ ಸಾಲಕ್ಕೆ ಪರಿಹಾರ ಸಿಗಲಾರದು. ಡಾ.ಸ್ವಾಮಿನಾಥನ್ ಆಯೋಗದ ಶಿಫಾರಸ್ಸಿನಂತೆ ಎಲ್ಲ ರೈತರಿಗೆ ಶೇ.4ರ ಬಡ್ಡಿದರದಲ್ಲಿ ಸಾಂಸ್ಥಿಕ ಸಾಲ ಸಿಗುವಂತಾಗಬೇಕು. ಆದರೆ ಯುಪಿಎ ಸರ್ಕಾರ ಡಾ.ಸ್ವಾಮಿನಾಥನ್ ಆಯೋಗದ ಶಿಫಾರಸುಗಳನ್ನು ಜಾರಿ ಮಾಡಲು ಮೀನಮೇಷ ಎಣಿಸುತ್ತಿದೆ.

ಬೆಲೆ ಏರಿಕೆಯಿಂದ ತತ್ತರಿಸುತ್ತಿರುವ ಜನಗಳ ನೆರವಿಗೆ ಧಾವಿಸಬೇಕಾಗಿತ್ತು ಸರ್ಕಾರ. ಆದರೆ ಗಾಯದ ಮೇಲೆ ಬರೆ ಎಳೆಯುವ ರೀತಿಯಲ್ಲಿ ಯುಪಿಎ ಸರ್ಕಾರ ಸಾರ್ವಜನಿಕ ರೇಷನ್ ವ್ಯವಸ್ಥೆಯನ್ನೇ ನಾಶ ಮಾಡಲು ಹೊರಟಿದೆ. ಬಡತನ ರೇಖೆ ಕೆಳಗೆ ಇರುವವರನ್ನು ಗುರುತಿಸಲು ಅಸಂಬದ್ಧ ಮಾನದಂಡಗಳನ್ನು ಉಪಯೋಗಿಸಿ ಬಿಪಿಎಲ್ ಫಲಾನುಭವಿಗಳನ್ನು ಅವರಿಗೆ ವಿತರಿಸುವ ರೇಷನ್ ಕಾರ್ಡುಗಳನ್ನು ಕಡಿತಗೊಳಿಸಲಾಗುತ್ತಿದೆ. ಹಾಗೆಯೇ ರಾಜ್ಯಗಳಿಗೆ ಒದಗಿಸುವ ಆಹಾರದಾನ್ಯಗಳ ಪ್ರಮಾಣವನ್ನು ಕಡಿತ ಮಾಡಲಾಗುತ್ತಿದೆ.

ಆಹಾರದಾನ್ಯಗಳನ್ನು ಬೆಳೆಯುವ ರೈತರಿಗೆ ಯಾವುದೇ ಪ್ರೋತ್ಸಾಹ ನೀಡದಿರುವುದು, ರೈತರು ಬೆಳೆದ ಆಹಾರಧಾನ್ಯಗಳನ್ನು ಬೆಂಬಲ ಬೆಲೆ ನೀಡಿ ಸರ್ಕಾರ ಖರೀದಿ ಮಾಡಲು ಹಿಂದೇಟು ಹಾಕುತ್ತಿರುವುದು, ನಮ್ಮ ರೈತರಿಗೆ ನೀಡುವ ಬೆಲೆಗಿಂತ ಹೆಚ್ಚಿನ ಬೆಲೆ ಕೊಟ್ಟು ವಿದೇಶಗಳಿಂದ ಗೋಧಿಯಂತಹ ಆಹಾರಧಾನ್ಯಗಳನ್ನು ಆಮದು ಮಾಡಿಕೊಳ್ಳುವುದು, ಆಹಾರಧಾನ್ಯಗಳ ವ್ಯಾಪಾರದಲ್ಲಿ ದೊಡ್ಡ ದೊಡ್ಡ ಖಾಸಗಿ ಕಂಪನಿಗಳಿಗೆ ಅವಕಾಶ ಕೊಟ್ಟು, ಮುಂಗಡ ವ್ಯಾಪಾರಕ್ಕೆ ಅವಕಾಶ ನೀಡಿರುವುದು ಮೊದಲಾದ ಕ್ರಮಗಳಿಂದಾಗಿ ಇಂದು ದೇಶದ ಆಹಾರದ ಭದ್ರತೆಗೆ ಗಂಡಾಂತರ ಉಂಟಾಗಿದೆ.

ಫ್ಯಾಸಿಸ್ಟ್ ಶಕ್ತಿಗಳ ಅಪಾಯ :

ಕಾಂಗ್ರೆಸ್ ನೇತೃತ್ವದ ಯುಪಿಎ ಜನರ ನಿರೀಕ್ಷೆಗಳನ್ನು ಸುಳ್ಳಾಗಿಸುತ್ತಾ ಜನರ ಅತೃಪ್ತಿಗೆ ಗುರಿಯಾಗುತ್ತಿರುವಾಗ ಅದರ ಲಾಭ ಪಡೆಯಲು ಫ್ಯಾಸಿಸ್ಟ್ ಮೆದುಳಿನ ಹಿಂದುತ್ವ ಶಕ್ತಿಗಳು ಭಾರೀ ಕ್ರಿಯಾಶೀಲವಾಗಿವೆ. ಧರ್ಮದ ಆಧಾರದಲ್ಲಿ ಕಾರ್ಮಿಕ ವರ್ಗದ ಐಕ್ಯತೆಯನ್ನು ನಾಶ ಮಾಡಿ ಅದು ಬಂಡವಾಳಗಾರರ ಸೇವೆ ಮಾಡುತ್ತದೆ. ಅದನ್ನು ಸೈದ್ಧಾಂತಿಕವಾಗಿ ವಿರೋಧಿಸುತ್ತಿರುವ ಎಡಶಕ್ತಿಗಳ ಮೇಲೆ, ಮುಖ್ಯವಾಗಿ ಸಿಪಿಐ(ಎಂ) ಮೇಲೆ ಅದು ತನ್ನ ಫ್ಯಾಸಿಸ್ಟ್ ಗುಂಡಾಗಿರಿಯನ್ನು ಹರಿಯಬಿಡಲಾರಂಭಿಸಿದೆ. ಕಾಂಗ್ರೆಸ್ ಮತ್ತು ಬಿಜೆಪಿ, ದೊಡ್ಡ ಬಂಡವಾಳಿಗರ 'ಎ' ಮತ್ತು 'ಬಿ' ತಂಡಗಳೇ ಆಗಿರುವುದರಿಂದ ದೇಶದ ಜನತೆಯ ದೂರಗಾಮಿ ಹಿತದೃಷ್ಟಿಯಿಂದ ಮೂರನೇ ಪರ್ಯಾಯವನ್ನು ಮೂಡಿಸುವುದು ಅತ್ಯಗತ್ಯವಾಗಿದೆ. ಮೂರನೇ ಪರ್ಯಾಯ ಕೇವಲ ಚುನಾವಣಾ ಮೈತ್ರಿಕೂಟವಾಗಬಾರದು. ಅದು ಜನತೆಯ ವಿಶ್ವಾಸವನ್ನು ಗಳಿಸಿದ ವೇದಿಕೆಯಾಗಿ ಹೊರಹೊಮ್ಮಬೇಕು. ಅಂತಹ ವೇದಿಕೆಯ ಭಾಗವಾಗುವ ಶಕ್ತಿಗಳಿಗೆ ದೃಢವಾದ ಕೋಮುವಾದಿ ವಿರೋಧಿ ಕಣ್ಣೋಟ ಇರಬೇಕು. ಜನತೆಯ ಆರ್ಥಿಕ ಪ್ರಶ್ನೆಗಳ ಬಗ್ಗೆ ಮತ್ತು ಅವುಗಳ ಪರಿಹಾರೋಪಾಯಗಳ ಬಗ್ಗೆ ವಿಶಾಲವಾದ ಸಹಮತ ಇರಬೇಕು. ಕೋಮುವಾದದ ವಿರುದ್ಧ ಹಾಗೂ ದುಡಿಯುವ ಜನರ ಪ್ರಶ್ನೆಗಳಿಗಾಗಿ ನಡೆಯುವ ಹೋರಾಟಗಳ ನಡುವೆ ಈ ಮೂರನೇ ಪರ್ಯಾಯ ಮೂಡಿ ಬರುವಂತಾಗಬೇಕಾಗಿದೆ. ಸಾಮಾನ್ಯ ಕನಿಷ್ಠ ಕಾರ್ಯಕ್ರಮವೇ ಇದರ ಪಂಚಾಂಗವಾಗಬೇಕಾಗಿದೆ.ಇದುವೇ ಭಾರತದ ಪ್ರಸಕ್ತ ಸಾಮಾಜಿಕ, ಆರ್ಥಿಕ ರಾಜಕೀಯ ಪರಿಸ್ಥಿತಿಯಿಂದ ಹೊರಹೊಮ್ಮುವ ಪ್ರಮುಖ ಸವಾಲಾಗಿದೆ. ಅದು ಒಂದು ಅವಕಾಶವೂ ಸಹ ಆಗಿದೆ.

○

ಎಡಪಕ್ಷಗಳ ಪಾತ್ರ

ಯುಪಿಎ ಸರ್ಕಾರಕ್ಕೆ ಬಾಹ್ಯ ಬೆಂಬಲ ನೀಡುತ್ತಾ ಬಂದಿರುವ ಎಡಪಕ್ಷಗಳು ಜನಹಿತದ ಕಾವಲು ನಾಯಿಯಂತೆ ಕೆಲಸ ಮಾಡುತ್ತಾ ಬಂದಿವೆ. ಕಳೆದ 4 ವರ್ಷಗಳ ಅವಧಿಯಲ್ಲಿ ವಿಮೆ ಮತ್ತು ಬ್ಯಾಂಕಿಂಗ್ ಕ್ಷೇತ್ರದಲ್ಲಿ ವಿದೇಶಿ ನೇರ ಬಂಡವಾಳ ಹೆಚ್ಚಳ ಮಾಡುವ ಪ್ರಯತ್ನವನ್ನು ಎಡಪಕ್ಷಗಳು ತಡೆಹಿಡಿದಿವೆ. ಚಿಲ್ಲರೆ ವ್ಯಾಪಾರದಲ್ಲಿ ವಿದೇಶಿ ನೇರ ಬಂಡವಾಳವನ್ನು ಅದು ಭಾಗಶ: ಜಾರಿಯಾದ ನಂತರವಾದರೂ ಅದನ್ನು ತಡೆಹಿಡಿಯಲು ಎಡಪಕ್ಷಗಳಿಗೆ ಸಾಧ್ಯವಾಗಿದೆ. ಬಿಹೆಚ್‌ಇಎಲ್ ಬಂಡವಾಳ ಹಿಂಪಡೆತವನ್ನು ದೃಢವಾಗಿ ವಿರೋಧಿಸಿದರ ಪರಿಣಾಮವಾಗಿ ಸಾರ್ವಜನಿಕ ವಲಯದ ಲಾಭದಾಯಕ ಘಟಕಗಳಲ್ಲಿ ಬಂಡವಾಳ ಹಿಂಪಡೆತವನ್ನು ತಡೆಯಲು ಸಾಧ್ಯವಾಗಿದೆ. ಅಕ್ಕಿ ಮತ್ತು ಗೋಧಿ ವ್ಯಾಪಾರದಲ್ಲಿ ಮುಂಗಡ ವ್ಯಾಪಾರವನ್ನು ನಿಲ್ಲಿಸಲು ಸಾಧ್ಯವಾಯಿತು. ಕಾರ್ಮಿಕರ ಪಿಂಚಣಿ ನಿಧಿಯನ್ನು ಖಾಸಗೀಕರಣಗೊಳಿಸುವಲ್ಲಿ ಮತ್ತು ಕಾರ್ಮಿಕ ಕಾನೂನುಗಳಲ್ಲಿ ಪ್ರಮುಖ ಬದಲಾವಣೆಗಳನ್ನು ತರುವಲ್ಲಿ ಸರ್ಕಾರ ಯಶಸ್ವಿಯಾಗಲಿಲ್ಲ.

ಎಡಪಕ್ಷಗಳು ಯುಪಿಎ ಸರ್ಕಾರದ ಮೇಲೆ ಹಾಕಿದ ಒತ್ತಡ ಹಾಗೂ ನಡೆಸಿದ ಜನಚಳುವಳಿಗಳ ಪರಿಣಾಮವಾಗಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗಖಾತ್ರಿ ಯೋಜನೆಯನ್ನು ಮತ್ತಷ್ಟು ಉತ್ತಮಪಡಿಸಿ ಜಾರಿಗೆ ತರಲು ಸಾಧ್ಯವಾಯಿತು. ಆದಿವಾಸಿಗಳ ಮತ್ತು ಇತರ ಅರಣ್ಯವಾಸಿಗಳ ಕಾಯ್ದೆಯನ್ನು ಸಹ ಅಂಗೀಕರಿಸಲು ಸಾಧ್ಯವಾಯಿತು. ಅದಲ್ಲದೆ, ಮಾಹಿತಿ ಹಕ್ಕು ಕಾಯ್ದೆ ಮತ್ತು ಕೌಟುಂಬಿಕ ಹಿಂಸೆ ತಡೆಗಟ್ಟುವ ಕಾಯ್ದೆ ಅಂಗೀಕರಿಸಲಾಗಿದೆ. ಪೋಟಾ ಕಾಯ್ದೆಯನ್ನು ರದ್ದುಗೊಳಿಸಿ ಅದರ ದುರುಪಯೋಗವನ್ನು ತಡೆಗಟ್ಟಲಾಗಿದೆ. ಕಾನೂನಿನ ಮೂಲಕ ಬಾಲ ಕಾರ್ಮಿಕ ಪದ್ಧತಿಯನ್ನು ನಿಷೇಧಿಸಲಾಗಿದೆ. ಶಿಕ್ಷಣದ ಅನುದಾನವನ್ನು ಸ್ವಲ್ಪಮಟ್ಟಿಗಾದರೂ ಹೆಚ್ಚಿಸಲಾಗಿದೆ. ಶಾಲಾ ಮಕ್ಕಳ ಮಧ್ಯಾಹ್ನದ ಊಟ ಯೋಜನೆಯನ್ನು ದೇಶಾದ್ಯಂತ ವಿಸ್ತರಿಸಲಾಗಿದೆ. ಇವೆಲ್ಲವುಗಳು ಜನ ಸಮೂಹಗಳ ಹೋರಾಟಗಳಿಂದಷ್ಟೇ ಅಂಗೀಕರಿಸಲ್ಪಟ್ಟಿವೆ.

ಆದರೆ ಸಾಮಾನ್ಯ ಕನಿಷ್ಠ ಕಾರ್ಯಕ್ರಮದಲ್ಲಿ ಯುಪಿಎ ಸರ್ಕಾರ ಜನರಿಗೆ ಕೊಟ್ಟ ಅನೇಕ ಭರವಸೆಗಳು ಇನ್ನೂ ಭರವಸೆಯಾಗಿ ಉಳಿದಿವೆ. ರೇಷನ್ ವ್ಯವಸ್ಥೆಯನ್ನು ಸಾರ್ವತ್ರಿಕಗೊಳಿಸುವ ಭರವಸೆಯನ್ನು ಅದು ಮರೆತೇಬಿಟ್ಟಿದೆ. ಈ ಸಲದ ಬಜೆಟ್‌ನಲ್ಲಿ ಒದಗಿಸಲಾದ 7000 ಕೋಟಿ ರೂ.ಗಳು ಆಹಾರದಾನ್ಯಗಳನ್ನು ಆಮದು ಮಾಡಿಕೊಳ್ಳಲು ಬಳಸಲಾಗುವುದೇ ಹೊರತು ಭಾರತದ ಬಡವರಿಗಾಗಿ ಅಲ್ಲ. ಅಸಂಘಟಿತ ವಲಯದ ಕಾರ್ಮಿಕರಿಗೆ ಸಾಮಾಜಿಕ ಭದ್ರತೆಯನ್ನು ಒದಗಿಸುವ ಒಂದು ಪರಿಣಾಮಕಾರಿ ಕಾನೂನನ್ನು, ಕೃಷಿ ಕಾರ್ಮಿಕರ ಕಲ್ಯಾಣಕ್ಕಾಗಿ ಒಂದು ಸಮಗ್ರ ಮಸೂದೆಯನ್ನು ಮತ್ತು ಮಹಿಳೆಯರ ಮೀಸಲಾತಿ ಮಸೂದೆಯನ್ನು ಜಾರಿಗೆ ತರುವಲ್ಲಿ ಸರ್ಕಾರ ವಿಫಲವಾಗಿದೆ.

2008-09ರ ಬಜೆಟ್ ಯುಪಿಎ ಸರ್ಕಾರದ ಕೊನೆಯ ಬಜೆಟ್. ಅದರಲ್ಲಿ ಕೆಲವೊಂದು ಸ್ವಾಗತಾರ್ಹ ಅಂಶಗಳಿದ್ದರೂ ಯುಪಿಎ ಸರ್ಕಾರ ಸಾಮಾನ್ಯ ಕನಿಷ್ಠ ಕಾರ್ಯಕ್ರಮದಲ್ಲಿ ಜನತೆಗೆ ಕೊಟ್ಟ ಭರವಸೆಗಳನ್ನು ಈಡೇರಿಸಲು ಇದ್ದ ಒಂದು ಕೊನೆಯ ಅವಕಾಶವನ್ನು ಕಳೆದುಕೊಂಡಂತಾಗಿದೆ. ಬಜೆಟ್‌ನಲ್ಲಿ ವ್ಯಕ್ತವಾದ ಧೋರಣೆ ಮತ್ತು ದಾಟಿಯನ್ನು ಗಮನಿಸಿದರೆ ಯುಪಿಎ ಸರ್ಕಾರ ಚುನಾವಣೆಗೆ ಸಿದ್ಧವಾಗುತ್ತಿದೆ ಎಂಬ ಸಂದೇಶವನ್ನು ಅದು ರವಾನಿಸುತ್ತಿರುವಂತೆ ಕಾಣುತ್ತಿದೆ. ಕೇವಲ ಚುನಾವಣೆಗಳನ್ನು ಗಮನದಲ್ಲಿಟ್ಟುಕೊಂಡು ಬಜೆಟ್ ಪ್ರಸ್ತಾವಗಳಲ್ಲಿ ಆಮಿಷಗಳನ್ನು ಒಡ್ಡುವುದು ಒಳ್ಳೆಯ ಪರಿಪಾಠವಲ್ಲ.

..............'ಚಕ್ ದೆ' ಲಾಲ್ ಜಂಡಾ

ಪುಟ 7 ರಿಂದ

ವಿಶ್ವಾಸ ಮೂಡಿಸಿದೆ. ನಗರ ಪ್ರದೇಶಗಳಲ್ಲಿನ ಕಾಂಗ್ರೆಸ್ ಭದ್ರ ಕೋಟೆಗಳಿಗೂ ಎಡರಂಗ ಲಗ್ಗೆ ಇಟ್ಟಿದೆ.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳಿಗೆ ಮೀಸಲಾ ರುವ 20 ಸ್ಥಾನಗಳಲ್ಲಿ 19 ಸ್ಥಾನಗಳನ್ನು ಎಡರಂಗ ಗೆದ್ದುಕೊಂಡಿದೆ. ಇದರಲ್ಲಿ ಪರಿಶಿಷ್ಟ ಜಾತಿಗೆ ಮೀಸಲಾಗಿದ್ದ ಎಲ್ಲ ಆರು ಕ್ಷೇತ್ರಗಳಲ್ಲಿ ಸಿಪಿಎಂ ಜಯಭೇರಿ ಸಾಧಿಸಿದೆ. ಎಡರಂಗ ಕೈಗೊಂಡ ಅಭಿವೃದ್ಧಿ ಕಾರ್ಯಕ್ರಮಗಳಿಂದಾಗಿ ಪ್ರತ್ಯೇಕತಾವಾದಿ ಸಂಘಟನೆಗಳಾದ ನ್ಯಾಷನಲ್ ಲಿಬರೇಷನ್ ಫ್ರಂಟ್ ಆಫ್ ತ್ರಿಪುರ (ಎನ್‌ಎಲ್‌ಎಫ್‌ಟಿ) ಮತ್ತು ಆಲ್ ತ್ರಿಪುರ ಟೈಗರ್ಸ್ ಫೋರ್ಸ್ (ಎಟಿಟಿಎಫ್) ಗಳು ಬುಡಕಟ್ಟು ಜನಾಂಗಗಳ ನಡುವೆ ಹೊಂದಿದ್ದ ಪ್ರಾಬಲ್ಯ ಭಾರಿ ಹೊಡೆತಕ್ಕೆ ಸಿಲುಕಿದೆ.

ಶೇಕಡ 31ರಷ್ಟು ಮತ ಹೊಂದಿರುವ ಬುಡಕಟ್ಟು ಜನಾಂಗಗಳು ಶಾಂತಿ ಮತ್ತು ಸುಸ್ಥಿರ ಅಭಿವೃದ್ಧಿಗೆ ತಹತಹಿಸುತ್ತಿದ್ದಾರೆ ಎಂಬುದನ್ನು ಈ ಫಲಿತಾಂಶ ಸಾಬೀತುಗೊಳಿಸಿದೆ. ಒಂದು ವೇಳೆ ಕಾಂಗ್ರೆಸ್-ಐಎನ್‌ಪಿಟಿ ಅಧಿಕಾರಕ್ಕೆ ಬಂದರೆ 1988-1993ರ ನಡುವೆ ಅಧಿಕಾರ ನಡೆಸಿದ ಕಾಂಗ್ರೆಸ್-ತ್ರಿಪುರ ಉಪಜಾತಿ ಜುಬಾ ಸಮಿತಿಯ ಸಮ್ಮಿಶ್ರ ಸರ್ಕಾರದಲ್ಲಿದ್ದ ಭಯಾನಕ ಪರಿಸ್ಥಿತಿ ಮರುಕಳಿಸಲಿದೆ ಎಂಬ ಎಚ್ಚರಿಕೆಯನ್ನು ಎಡರಂಗ ಮತದಾರರಿಗೆ ನೀಡಿತ್ತು.

ಐಎನ್‌ಪಿಟಿಯಿಂದ ಅಂಪಿನಗರ್, ರೀಮಾವ್ಯಾಲಿ, ಪ್ರಮೋದ್‌ನಗರ್, ಚೌಮೊನು ಮತ್ತು ತಾಕರ್‌ಜಲ ಕ್ಷೇತ್ರಗಳನ್ನು ಸಿಪಿಎಂ ಪಕ್ಷ ತನ್ನ ತೆಕ್ಕೆಗೆ ಸೆಳೆದುಕೊಂಡಿದೆ. ಭೂಗತವಾಗಿದ್ದು ರಾಜಕಾರಣಿಯಾಗಿ ಪರಿವರ್ತಿತನಾದ ಬಿಜೊಯ್ ಕುಮಾರ್ ರಂಗ್‌ವಾಲ್ ಮಾತ್ರ ಐಎನ್‌ಪಿಟಿ ಪರ ಗೆದ್ದಿರುವ ಏಕೈಕ ಅಭ್ಯರ್ಥಿಯಾಗಿದ್ದಾರೆ. ಸಿಪಿಎಂ ಟಿಕೆಟ್‌ನಿಂದ ಸ್ಪರ್ಧಿಸಿದ್ದ ಬುಡಕಟ್ಟು ಜನಾಂಗದ ನಾಯಕ ಅಘೋರ್ ದೇವ್ ವರ್ಮಾ ಪ್ರಮೋದ್‌ನಗರ್ ಕ್ಷೇತ್ರದಲ್ಲಿ ಜಯಿಸಿದ್ದಾರೆ. ಕಾಂಗ್ರೆಸ್ ಹಿಡಿತದಲ್ಲಿದ್ದ ಪರಿಶಿಷ್ಟ ಪಂಗಡದ ಮತ್ತೊಂದು ಮೀಸಲು ಕ್ಷೇತ್ರ ಗೋಲಾಘಟಿಯನ್ನು ಸಿಪಿಎಂ ತನ್ನತ್ತ ಸೆಳೆದುಕೊಂಡಿದೆ.

ಎಡರಂಗದ ಚುನಾವಣಾ ಪ್ರಚಾರದಲ್ಲಿ ಮಾಣಿಕ್ ಸರ್ಕಾರ್ ಮತ್ತು ಇತರ ಮುಖಂಡರೊಂದಿಗೆ ಸಿಪಿಎಂ ಪ್ರಧಾನ ಕಾರ್ಯದರ್ಶಿ ಪ್ರಕಾಶ್ ಕಾರಟ್, ಪಶ್ಚಿಮಬಂಗಾಳ ಮುಖ್ಯಮಂತ್ರಿ ಬುದ್ಧದೇವ್ ಭಟ್ಟಾಚಾರ್ಯ ಪಾಲ್ಗೊಂಡಿದ್ದರು.

ಕೋಮುವಾದಿ ಶಕ್ತಿಗಳಿಗೆ ದುಡಿಯುವ ವರ್ಗದ ಎಚ್ಚರಿಕೆ

ಸಿಪಿಐ(ಎಂ) ಪಕ್ಷದ ಕೇಂದ್ರ ಕಛೇರಿ ಮೇಲೆ ಹಾಗೂ ಪಕ್ಷದ ರಾಜ್ಯ ಕಾರ್ಯದರ್ಶಿ, ಸಿಐಟಿಯು ಸಂಘಟನೆ ರಾಜ್ಯ ಪ್ರಧಾನ ಕಾರ್ಯದರ್ಶಿ ದುಡಿಯುವ ವರ್ಗದ ನೇತಾರ ಕಾಂ: ವಿಜೆಕೆ ನಾಯರ್‌ರವರ ಮನೆಯ ಮೇಲೆ ನಡೆದ ಬರ್ಬರ ದಾಳಿಯನ್ನು ಖಂಡಿಸಿ ಮಾರ್ಚ್ 10, 2008ರಂದು ಸಿಪಿಐ(ಎಂ) ಪಕ್ಷದ ನೇತೃತ್ವದಲ್ಲಿ ಬೆಂಗಳೂರಿನಲ್ಲಿ 4,000 ದಷ್ಟಿದ್ದ ಜನರ ಬೃಹತ್ ಪ್ರತಿಭಟನೆ ನಡೆಯಿತು.



ಪ್ರತಿಭಟನೆ ನಿರ್ಧಾರವಾದದ್ದೇ ಬೆಳಿಗಿನ ಜಾವ 2 ಕ್ಕೆ. ಆದರೆ ಸಂಜೆ ನಿಗದಿತ ಸಮಯಕ್ಕಿಂತ ಮೊದಲೇ ಕಾರ್ಪೋರೇಷನ್ ಸರ್ಕಲ್ ಬಳಿ ಕಾರ್ಯಕರ್ತರು ದಂಡು ದಂಡಾಗಿ ಸೇರಿದರು. ಕೆಂಬಾವುಟ ಹಾರಿದವು. ಕೋಮುವಾದಿ ಶಕ್ತಿಗಳನ್ನು ಧಿಕ್ಕರಿಸುವ ಧಿಕ್ಕಾರಗಳು ಮೊಳಗಿದವು. ಸಹಸ್ರ ಸಂಖ್ಯೆಯಲ್ಲಿ ನೆರದ ಕಾರ್ಯಕರ್ತರು. ಮೈಸೂರು ಬ್ಯಾಂಕ್ ವೃತ್ತ, ಮಹಾರಾಣಿ ಕಾಲೇಜು ಹಾಗೂ ಬಸವೇಶ್ವರ ಸರ್ಕಲ್ ಬಂತು ಪ್ರತಿಭಟನಾ ಮೆರವಣಿಗೆ. ಅಲ್ಲಿ ಬೃಹತ್ ಪ್ರತಿಭಟನಾ ಸಭೆ.

ಕೋಮುವಾದದ ಗೋರಿ ತೋಡುವವರು:

ಮಾಜಿ ಶಾಸಕರೂ, ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರೂ ಆದ ಜಿ.ವಿ. ಶ್ರೀರಾಮರೆಡ್ಡಿ ಸಾರಿದರು. ಕೋಮುವಾದಿ ಶಕ್ತಿಗಳಿಗೂ, ದುಡಿಯುವ ವರ್ಗಕ್ಕೂ ಸಂಘರ್ಷ ಆರಂಭವಾಗಿದೆ. ಈ ಸಂಘರ್ಷದಲ್ಲಿ ದುಡಿಯುವ ವರ್ಗವೇ ಗೆಲ್ಲುತ್ತದೆ. ಜಗತ್ತಿನ ಸರ್ವನಾಶಕ್ಕೆ ಹೊರಟು ಕೋಟಿ ಕೋಟಿ ಜನರ ಮಾರಣಹೋಮ ಗೈಯ್ಯುತ್ತಿದ್ದ ನಾಜಿವಾದಿ ಹಿಟ್ಲರನ ಹುಟ್ಟಡಗಿಸಿದ್ದು ಮಾರ್ಕ್ಸ್‌ವಾದಿಗಳು. ಜರ್ಮನಿ, ಇಟಲಿ ಮುಂತಾದಡೆ ಫ್ಯಾಶಿಸ್ಟ್ ಶಕ್ತಿಗಳನ್ನು ಎದುರಿಸಿದ್ದು ಮಾರ್ಕ್ಸ್‌ವಾದಿಗಳು. ಭಾರತದಲ್ಲಿ ಕೋಮುವಾದದ ಗೋರಿ ತೋಡುವವರು ಮಾರ್ಕ್ಸ್‌ವಾದಿಗಳೇ ಎಂದು ಜಿ.ವಿ. ಶ್ರೀರಾಮರೆಡ್ಡಿ ಘೋಷಿಸಿದರು.

ಈ ಸಂದರ್ಭದಲ್ಲಿ ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ್‌ವಾದ) ಮುಖಂಡರಾದ ಮಾವಳ್ಳಿ ಶಂಕರ್ ಅವರು ಮಾತನಾಡಿ ವರ್ಗ ಹೋರಾಟದ ಮೂಲಕ ಸಮಾಜದ ಅಸಮಾನತೆಯನ್ನು ನಿವಾರಿಸಲು ಯತ್ನಿಸುತ್ತಿರುವ ಒಂದು ಜನಪರ ಶಕ್ತಿ ಸಿಪಿಐ(ಎಂ). ಇಂತಹ ಪಕ್ಷದ ಮುಖಂಡರ ಮನೆ ಮೇಲೆ, ಹಾಗೂ ಕಛೇರಿ ಮೇಲೆ ದಾಳಿ ನಡೆಸಿರುವುದು ಖಂಡನಾರ್ಹ ಎಂದರು.

ಸಮಾಜವಾದಿ ಪಕ್ಷ (ಎಸ್.ಪಿ)ದ ರಾಜ್ಯ ಕಾರ್ಯದರ್ಶಿ ಶ್ರೀನಿವಾಸಗೌಡ ಅವರು ದಾಳಿಗಳನ್ನು ಖಂಡಿಸಿ ಪ್ರತಿಭಟನೆಗೆ ಬೆಂಬಲ ಸೂಚಿಸಿ ಮಾತನಾಡಿದರು. ಕೋಮುವಾದಿಗಳ ವಿರುದ್ಧ ಸಮಾಜವಾದಿ ಪಕ್ಷ, ಸಿಪಿಐ(ಎಂ) ಸಹಯೋಗದಲ್ಲಿ ಹೋರಾಡುವುದೆಂದು ಅವರು ತಿಳಿಸಿದರು.



ಸಿಪಿಐ(ಎಂ) ಕಾರ್ಯದರ್ಶಿ ಮಂಡಳಿ ಸದಸ್ಯರು ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಜಿ.ಸಿ. ಬಯ್ಯಾರೆಡ್ಡಿಯವರು ಮಾತನಾಡಿ ಕಣ್ಣೂರಿನಲ್ಲಿ ಆರೆಸ್ಸೆಸ್ ಕಾರ್ಯಕರ್ತರು ಅಲ್ಪಸಂಖ್ಯಾತರಿಗೆ ಹಿಂಸೆ ಕೊಡುತ್ತಿದ್ದಾರೆ. ಪಶ್ಚಿಮ ಬಂಗಾಳದಲ್ಲಿ ಕಳೆದ 31 ವರ್ಷದಿಂದ ತ್ರಿಪುರದಲ್ಲಿ 15 ವರ್ಷಗಳಿಂದ ನಿರಂತರವಾಗಿ ಅಧಿಕಾರದಲ್ಲಿದ್ದರೂ ಅಲ್ಲಿ ರಾಜಕೀಯ ವಿರೋಧಿಗಳ ಮೇಲೆ ಹಿಂಸೆ ಇಲ್ಲ. ಇನ್ನು ಸಮಾಜದ ವಿವಿಧ ಸಮುದಾಯಗಳ ವ್ಯಾಪಕ ಬೆಂಬಲ ಇರುವ ಕೇರಳದಲ್ಲಿ ಹಿಂಸೆ ಮಾಡುವ ಅಗತ್ಯವೇನೂ ಇಲ್ಲ ಎಂದೂ ಹೇಳಿದರು.



ಸಿಪಿಐ(ಎಂ) ರಾಜ್ಯ ಸಮಿತಿ ಸದಸ್ಯೆ ಕರ್ನಾಟಕ ರಾಜ್ಯ ಅಂಗನವಾಡಿ ನೌಕರರ ಸಂಘದ ರಾಜ್ಯ ಕಾರ್ಯದರ್ಶಿ ಎಸ್.ವರಲಕ್ಷ್ಮಿಯವರು ಮಾತನಾಡಿ ದುಡಿಮೆಗಾರರ ಒಗ್ಗಟ್ಟನ್ನು ಮುರಿಯುವ ಕೋಮುವಾದಿ ಶಕ್ತಿಗಳ ಪಿತೂರಿಯನ್ನು ಸೋಲಿಸುವ ಪ್ರಶ್ನೆಯನ್ನು ಕಾರ್ಮಿಕ ವರ್ಗ ಸವಾಲಾಗಿ ತೆಗೆದುಕೊಳ್ಳಲಿದೆ ಎಂದು ತಿಳಿಸಿದರು.

ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಾತನಾಡಿ, 'ಕಮ್ಯುನಿಸ್ಟ್‌ರನ್ನು ಬೇಕಾದರೆ ಕೊಲ್ಲಬಹುದು. ಕಮ್ಯುನಿಸಂನ್ನು ಕೊಲ್ಲಲಾಗದು' ಎಂದು ಹೇಳಿದರು. 'ಕಮ್ಯುನಿಸಂ ಅನ್ನು ಪ್ರೀಚ್(ಬೋಧನೆ) ಮಾಡ್ತೀರಾ" ಎಂದು ತನ್ನ ಪತ್ನಿಯ ಕುತ್ತಿಗೆಗೆ ಚಾಕು ಹಿಡಿದು ಬೆದರಿಸಲು ಯತ್ನಿಸಲಾಗಿದೆ. ಸಂಜಯ್‌ಗಾಂಧಿ ಕಾಲದಲ್ಲಿಯೂ ಇಂತಹ ಗೂಂಡಾಗಿರಿ ನಡೆದಿತ್ತು. ಇಂತಹದ್ದಕ್ಕೆಲ್ಲಾ ನಾವು ಹೆದರುವವರಲ್ಲ. ಪ್ರಜಾಸತ್ತಾತ್ಮಕವಾದ ರೀತಿಯ ಹೋರಾಟದ ಮೂಲಕ ಕೋಮುವಾದಿಗಳನ್ನು ಎದುರಿಸುತ್ತೇವೆಯೇ ಹೊರತು. ರಾತ್ರಿ ಮನೆಗೆ ನುಗ್ಗುವುದು. ಕಛೇರಿ ಮೇಲೆ ಧಾಳಿ ಮಾಡುವುದು ಮಾಡುವುದಿಲ್ಲ. ಕಾನೂನನ್ನು ಕೈಗೆತ್ತಿಕೊಳ್ಳುವುದಿಲ್ಲ ಎಂದರು.

ಸಿಪಿಐ(ಎಂ) ರಾಜ್ಯ ಸಮಿತಿ ಸದಸ್ಯರುಗಳಾದ ಕೆ.ಪ್ರಕಾಶ್, ಕೆ.ಎಸ್.ಉಮೇಶ್, ಇ.ಕೆ.ಎನ್.ರಾಜನ್ ಮುಂತಾದವರು ಮಾತನಾಡಿದರು. ದುಷ್ಕರ್ಮಿಗಳ ಪತ್ತೆಗಾಗಿ, ಹಾಗೂ ತಕ್ಕ ಶಿಕ್ಷೆಗಾಗಿ ಆಗ್ರಹಿಸಿ ಕಾಂ:ವಿಜೆಕೆ ನಾಯರ್ ನೇತೃತ್ವದ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಎಸ್.ವೈ.ಗುರುಶಾಂತ್ ರಾಜ್ಯಸಮಿತಿ ಸದಸ್ಯರಾದ ಮೀನಾಕ್ಷಿ ಸುಂದರಂ, ಕೆ.ಪ್ರಕಾಶ್‌ರವರನ್ನೊಳಗೊಂಡ ನಿಯೋಗ ರಾಜ್ಯಪಾಲರನ್ನು ಭೇಟಿ ಮಾಡಿ ಮನವಿ ಅರ್ಪಿಸಿತು.

ವ್ಯಾಪಕ ಪ್ರತಿಭಟನೆಗಳು

ರಾಜ್ಯದ ವಿವಿಧ ಭಾಗಗಳಲ್ಲಿ ವ್ಯಾಪಕ ಪ್ರತಿಭಟನೆಗಳು ನಡೆದ ವರದಿ ಬರುತ್ತಿವೆ. ಮಾರ್ಚ್ 10 ರಂದು ಮಂಗಳೂರಿನ ಜಿಲ್ಲಾಧಿಕಾರಿಗಳ ಕಛೇರಿಯ ಮುಂದೆ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಬಿ. ಮಾಧವ, ಕೆ.ಆರ್. ಶ್ರೀಯಾನ್, ವಸಂತ್ ಆಚಾರಿ ಅವರ ನೇತೃತ್ವದಲ್ಲಿ ಪ್ರತಿಭಟನೆಗೆ ನಡೆದಿದೆ. ಉತ್ತರ ಕನ್ನಡ ಜಿಲ್ಲೆಯ ದಾಂಡೇಲಿ, ಹೊನ್ನಾವರ, ಭಟ್ಕಳ, ಸಿದ್ದಾಪುರ, ಕಾರವಾರಗಳಲ್ಲಿ ಪ್ರತಿಭಟನೆ ನಡೆದಿದೆ. ರಾಯಚೂರಿನಲ್ಲಿ ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಕರಿಯಪ್ಪ ಅಚ್ಚೊಳ್ಳಿ ನಾಯಕತ್ವದಲ್ಲಿ ನಡೆದ ಪ್ರತಿಭಟನೆಯಲ್ಲಿ ರಾಜ್ಯ ಸಮಿತಿ ಸದಸ್ಯರಾದ ಶಾಂತಾರಾಮನಾಯಕ್ ಪಾಲ್ಗೊಂಡಿದ್ದಾರೆ. ಪ್ರತಿಭಟನಾ ಮೆರವಣಿಗೆ ಜಿಲ್ಲಾಧಿಕಾರಿ ಕಛೇರಿಯ ಎದುರು ಪ್ರತಿಭಟನಾ ಮೆರವಣಿಗೆ ಜಿಲ್ಲಾಧಿಕಾರಿ ಕಛೇರಿಯ ಎದುರು ಪ್ರತಿಭಟನೆ ಪ್ರದರ್ಶನ ನಡೆದಿದೆ. ಗುಲ್ಬರ್ಗಾದಲ್ಲಿದಲ್ಲಿ ಮಾನ್ಪಡೆ, ಎಂಪಲ್ಲಿ ನೇತೃತ್ವದಲ್ಲಿ, ಚಿಂಚೋಳಿ, ಶಹಪುರದಲ್ಲೂ ವ್ಯಾಪಕ ಪ್ರತಿಭಟನೆ ವ್ಯಕ್ತವಾಗಿದೆ.



ಬಳ್ಳಾರಿ ಜಿಲ್ಲೆಯ ಹೊಸಪೇಟೆಯಲ್ಲಿ ಯು.ಬಸವರಾಜ್, ಡಿ.ವೆಂಕಟರಮಣ ಮುಂತಾದವರ ನೇತೃತ್ವದಲ್ಲಿ ಆರ್‌ಎಸ್‌ಎಸ್ ಬಿಜೆಪಿಗಳ ಭೂತದಹನ, ಪ್ರತಿಭಟನಾ ಮೆರವಣಿಗೆ ನಡೆದಿದೆ. ಬೆಳಗಾಂ ಜಿಲ್ಲೆಯ ರಾಮದುರ್ಗದಲ್ಲಿ ವಿ.ಪಿ.ಕುಲಕರ್ಣಿ, ಗೈಬು ಜೈನೆಖಾನ್ ನೇತೃತ್ವದಲ್ಲಿ ಪ್ರತಿಭಟನಾ ಪ್ರದರ್ಶನ ನಡೆದಿದೆ. ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆಯಲ್ಲಿ ನೆಹರೂ ಸರ್ಕಲ್‌ನಲ್ಲಿ ರಸ್ತೆ ತಡೆ, ಮೆರವಣಿಗೆ ನಡೆದಿದೆ. ಕೋಲಾರ, ಕೆ.ಜಿ.ಎಫ್., ಬಾಗೇಪಲ್ಲಿ, ಚಿಂತಾಮಣಿ, ಗುಡಿಬಂಡೆ, ಗೌರಿಬಿದನೂರುಗಳು ಪ್ರತಿಭಟನೆಗಳು ನಡೆದಿದೆ. ○

ಎಲ್ಲೆಲ್ಲಿ ಏನೆಲ್ಲಾ ದಾಳಿಗಳು

ಕಛೇರಿಯ ಮೇಲೆ ದಾಳಿಗಳನ್ನು ಮಾಡುವುದರ ಮೂಲಕ, ಕಾರ್ಯಕರ್ತರನ್ನು ಮುಖಂಡರನ್ನು ಹತ್ಯೆ ಮಾಡುವ ಮೂಲಕ ದೇಶದ ಕಮ್ಯುನಿಸ್ಟ್ ಚಳುವಳಿಯನ್ನು ನಿರ್ಮೂಲನೆ ಮಾಡುವುದು ಸಾಧ್ಯ ಎನ್ನುವಂತಾಗಿದ್ದಿದ್ದರೆ ಈ ಹೊತ್ತಿಗಾಗಲೇ ದೇಶದಲ್ಲಿ ಕಮ್ಯುನಿಸ್ಟ್ ಚಳುವಳಿ ಎಂಬುದು ಅಸ್ತಿತ್ವದಲ್ಲಿ ಇರುತ್ತಲೇ ಇರಲಿಲ್ಲ.

ಈ ದೇಶದ ಕಮ್ಯುನಿಸ್ಟ್ ಚಳುವಳಿ ತೆಲಂಗಾಣದಲ್ಲಿ ಭಾರತ ಸೈನ್ಯದ ಎದುರು ಸೆಣಸಿದ ಹಿರಿಮೆ ಹೊಂದಿರುವಂತಹದ್ದು. ಅದು ಕಾರ್ಯಕರ್ತರ ಮುಖಂಡರ ಮೇಲೆ ಕಛೇರಿ ಮೇಲೆ ನಡೆದ ಎಷ್ಟೆಷ್ಟು ದಾಳಿಗಳನ್ನು ಎದುರಿಸಿಯೆ ಬೆಳೆದು ಬಂದಿದೆ. ಇಂತಹ ದಾಳಿಗಳನ್ನು ಎದುರಿಸುವ ಮೂಲಕ ಇನ್ನಷ್ಟು ಜನ ಬೆಂಬಲದೊಂದಿಗೆ ಹೊರ ಹೊಮ್ಮಿದೆ. ಸಂಘ ಪರಿವಾರಕ್ಕೆ ಇದು ಗೊತ್ತಿದೆ. ಆದರೂ ಒಂದು ಕೈ ನೋಡೋಣ ಎಂಬುದು ಸಂಘ ಪರಿವಾರದ ಈಗಿನ ಯತ್ನ.

ಅವರ ದಾಳಿಗಳು ಎಷ್ಟು ಯೋಜಿತ ಅನ್ನುವುದಕ್ಕೆ ಇಲ್ಲೇ ಸಾಕ್ಷಿ ಇದೆ. ಬರೀ ದೆಹಲಿ, ಬೆಂಗಳೂರುಗಳಲ್ಲಿ ಮಾತ್ರ ಅಲ್ಲ ಅವರ ದಾಳಿಗಳು. ಆಂಧ್ರದ ಹೈದರಾಬಾದ್‌ನಲ್ಲಿ ಸುಂದರಯ್ಯ ವಿಜ್ಞಾನ ಕೇಂದ್ರ ಅಂತಾ ಒಂದಿದೆ. ಆಂಧ್ರದ ಜನಪರ ಚಳುವಳಿಗಳ ದೊಡ್ಡ ಕೇಂದ್ರ ಅದು. ಅದರ ಮೇಲೆ ದಾಳಿ ನಡೆದಿದೆ. ಏಷ್ಯಾಖಂಡದಲ್ಲೇ ಒಂದು ಅಪೂರ್ವವಾದ ಗ್ರಂಥಾಲಯ ಹೊಂದಿರುವ ಕೇಂದ್ರದ ಮೇಲೆ ದಾಳಿ ಮಾಡಿ ಗ್ರಂಥಾಲಯಕ್ಕೆ ಬೆಂಕಿ ಹಚ್ಚುವ ಪ್ರಯತ್ನ ನಡೆಸಿದ್ದಾರೆ ಈ ಚೆಡ್ಡಿ ಚತುರರು. ತಮಿಳುನಾಡಿನ ನಾಗರಕೊಯಿಲ್‌ನಲ್ಲಿ ಸಿಪಿಐ(ಎಂ) ಪಕ್ಷದ ಕಛೇರಿಯ ಮೇಲೆ ದಾಳಿ ಮಾಡಿದ್ದಾರೆ. ಅತ್ತ ಉತ್ತರ ಭಾರತದಲ್ಲಿ ಉತ್ತರ ಖಂಡದ ಡೆಹ್ರಾಡೂನ್‌ನಲ್ಲಿ ಸಿಪಿಐ(ಎಂ) ಪಕ್ಷದ ಕಛೇರಿಯ ಮೇಲೆ ದಾಳಿ ನಡೆದಿದೆ. ಇನ್ನು ಎಲ್ಲೆಲ್ಲಿ ದಾಳಿ ನಡೆದಿದೆಯೋ ವರದಿಗಳು ಬರಬೇಕಿದೆ.

ಇವರ ಕಮ್ಯುನಿಸಂ ದ್ವೇಷ ಎಲ್ಲಿವರೆಗೆ ಹರಡಿದೆ ಅಂದ್ರೆ, ತಾವೇ ಸರಸ್ವತಿ ಅಂತ ಕರೆಯೋ ಪುಸ್ತಕಗಳ ಸಮೂಹಕ್ಕೆ ಜ್ಞಾನ ಭಂಡಾರಕ್ಕೆ ಬೆಂಕಿ ಇಡೋವರೆಗೆ ಬಂದಿದೆ.

ಬಿಜೆಪಿ ಗೂಂಡಾಗಿರಿ......

ಪುಟ 9 ರಿಂದ

ಮಾಡಲಾಗುತ್ತಿದೆ. ಪಾರ್ಲಿಮೆಂಟ್‌ನ ಮುಂದೆ, ಬೆಂಗಳೂರಿನಲ್ಲಿ ಟೌನ್‌ಹಾಲ್ ಮುಂದೆ ಮತ್ತು ಎಷ್ಟೋ ಕಡೆ ಪ್ರತಿಭಟನೆಗಳು. ಸಿಪಿಐ(ಎಂ) ಪಕ್ಷದ 'ದೌರ್ಜನ್ಯ'ಗಳ ವಿರುದ್ಧ!!

ದೆಹಲಿಯಲ್ಲಿ ಸಿಪಿಐ(ಎಂ) ಕೇಂದ್ರ ಸಮಿತಿಯ ಸಭೆ ನಡೆಯುತ್ತಿರುವಾಗ ಎಕೆಜಿ ಭವನದ ಮೇಲೆ ಆರೆಸ್ಸಸ್ ಬಿಜೆಪಿ ಕಾರ್ಯಕರ್ತರು ಕಲ್ಲು ತೂರಿ ಹಿಂಸಾಚಾರ ನಡೆಸಿದ್ದನ್ನು ದೇಶಕ್ಕೆ ದೇಶವೇ ಟಿ.ವಿ.ಗಳಲ್ಲಿ ನೇರ ಪ್ರಸಾರದಲ್ಲಿ ನೋಡಿದೆ. ಅಂಥದ್ದರಲ್ಲಿ ಬಿಜೆಪಿಯ ಮುಖಂಡರು ವಾದ ಮಾಡುವುದೇನೆಂದರೆ 'ಶಾಂತಿಯುತ' ಪ್ರತಿಭಟನೆ ನಡೆಸುತ್ತಿದ್ದ ಬಿಜೆಪಿ ಕಾರ್ಯಕರ್ತರ ಮೇಲೆ ಸಿಪಿಐ(ಎಂ) ಕಾರ್ಯಕರ್ತರೇ ಕಲ್ಲು ತೂರಿದರಂತೆ!!

ಅಬ್ಬಬ್ಬಾ !! ಎಂತಹ ಭಂಡತನ. 'ಶಾಂತಿಯುತ' ಪ್ರತಿಭಟನೆ ನಡೆಸಲು ಬಿಜೆಪಿ ಕಾರ್ಯಕರ್ತರು ತಮ್ಮ ಮುಖಂಡರ ಕಾರುಗಳಲ್ಲಿ ಕಲ್ಲುಗಳ ರಾಶಿಯನ್ನು ತುಂಬಿಕೊಂಡು ಬಂದಿದ್ದರು.

ಹಿಂದೂ ಮುಸ್ಲಿಂ ಎಂದು ದೇಶವನ್ನು ದೇಶದ ಒಗ್ಗಟ್ಟನ್ನು ಒಡೆಯುವ ಯಾತ್ರೆಗೆ ಇವರು 'ಏಕತಾ ಯಾತ್ರೆ' ಅಂತ ಹೆಸರಿಟ್ಟುಕೊಂಡಿದ್ದರು. ಇವರ 'ಶಾಂತಿಯುತ ಪ್ರತಿಭಟನೆ' ಎಂದರೆ ಏನೂಂತ ಹೆಚ್ಚು ವಿವರಿಸಬೇಕಾದ ಅಗತ್ಯ ಇಲ್ಲ ಅನಿಸುತ್ತದೆ.ಜನ ಎಲ್ಲವನ್ನು ಗಮನಿಸುತ್ತಿದ್ದಾರೆ. ಯಾರದು ನ್ಯಾಯ. ಯಾರು ಜನರ ಪರ ಅಂತ ಅವರು ಖಂಡಿತ ತೀರ್ಪು ಕೊಡುತ್ತಾರೆ. ○

ಜಗದಗಲ

ಶರತ್‌ಚಂದ್ರ

ಮಲೇಶ್ಯಾದಲ್ಲಿ ಹೊಸ ರಾಜಕೀಯ ಗಾಳಿ

ಮಲೇಶ್ಯಾದಲ್ಲಿ ಇತ್ತೀಚಿನ ಚುನಾವಣಾ-ಪೂರ್ವ ರಾಜಕೀಯ ಚಟುವಟಿಕೆ, ಫಲಿತಾಂಶ ಮತ್ತು ಅದರ ಪರಿಣಾಮವಾಗಿ ಹೊಸ ರಾಜಕೀಯ ಗಾಳಿ ಬೀಸುತ್ತಿದೆ. ಯುನೈಟೆಡ್ ಮಲಯ್ ಪಕ್ಷದ ನಾಯಕತ್ವದ ಆಳುವ ರಾಷ್ಟ್ರೀಯ ರಂಗ ಉತ್ತಮ ಬಹುಮತ ಗಳಿಸಿದೆ. ಆದರೆ ಮೂರನೇ ಎರಡು ಬಹುಮತ ಗಳಿಸುವಲ್ಲಿ ವಿಫಲವಾಗಿದೆ. ಹಿಂದೆ ಇದ್ದ ಭಾರೀ (ಶೇ.90 ಸೀಟುಗಳ) ಬಹುಮತದಿಂದ ದೊಡ್ಡ ಪ್ರಮಾಣದಲ್ಲಿ ಕುಸಿದಿದೆ. ಮೊದಲ ಬಾರಿಗೆ 12 ಪ್ರಾಂತ್ಯಗಳಲ್ಲಿ 5 ರಲ್ಲಿ ಅಧಿಕಾರ ಕಳೆದುಕೊಂಡಿದೆ. ಆಳುವ ರಂಗದ ಭಾಗವಾದ ಮಲೇಶ್ಯನ್ ಇಂಡಿಯನ್ ಕಾಂಗ್ರೆಸ್ ಅಧ್ಯಕ್ಷ ಮತ್ತು ದೀರ್ಘಕಾಲ ಕೇಂದ್ರ ಸಚಿವರಾಗಿದ್ದ ಸಾಮಿ ವೆಲ್ಲು ಸೋತಿದ್ದಾರೆ.

ಪ್ರಧಾನಿ ಬದಾವಿ ಬಹುಮತ ಪಡೆದಿದ್ದರೂ ಅವರನ್ನು ರಾಜೀನಾಮೆ ನೀಡುವಂತೆ ಮಾಜೀ ಪ್ರಧಾನಿ ಮಹಾತೀರ್ ಮೊಹಮದ್ (ದೇಶದ ಆಧುನಿಕೀಕರಣದಲ್ಲಿ ಪ್ರಮುಖ ಪಾತ್ರ ವಹಿಸಿದ್ದ ಆಳುವ ರಂಗದ ನಾಯಕ) ಕೇಳಿದ್ದು ಆಶ್ಚರ್ಯ ಉಂಟು ಮಾಡಿದೆ. ವಿರೋಧ ಪಕ್ಷಗಳಾದ ಡೆಮೊಕ್ರಾಟಿಕ್ ಆಕ್ಶನ್ ಪಾರ್ಟಿ (ಆ ದೇಶದ ಪ್ರಮುಖ ಅಲ್ಪಸಂಖ್ಯಾತರಾದ ಚೀನೀ ಬೆಂಬಲ ಇರುವ ಆದರೆ ಬಹು-ಜನಾಂಗೀಯತೆ ಪ್ರತಿಪಾದಿಸುವ ಪಕ್ಷ), ಮಾಜೀ ಉಪಪ್ರಧಾನಿ ಅನ್ವರ್ ಇಬ್ರಾಹಿಮ್ ರ ಪಿ.ಕೆ.ಆರ್. ಪಕ್ಷ ಮತ್ತು ಇಸ್ಲಾಮಿಕ್ ಪಕ್ಷಗಳು ಪ್ರಮುಖ ರಾಜಕೀಯ ಮುನ್ನಡೆ ಸಾಧಿಸಿವೆ. ಕೆಲವು ಪ್ರಾಂತ್ಯಗಳಲ್ಲಿ ಅಧಿಕಾರ ಪಡೆದಿವೆ.

ಚುನಾವಣೆ ಸುಧಾರಣೆಗಳಿಗೆ ಅನ್ವರ್ ಇಬ್ರಾಹಿಮ್ ರ ಸ್ಫೂರ್ತಿಯುತ ಪ್ರಚಾರ, ವಕೀಲರ ಹೆಚ್ಚು ಪ್ರಜಾಪ್ರಭುತ್ವದ ಹಕ್ಕುಗಳಿಗೆ ಚಳುವಳಿ ಮತ್ತು ಭಾರತೀಯ ಮೂಲದವರ 'ಸಮಾನ ಹಕ್ಕು' ಗಳಿಗೆ ಚಳುವಳಿ - ಚುನಾವಣೆ ಮುಂಚೆಯೇ ರಾಜಕೀಯ ವಾತಾವರಣ ಬದಲಾಯಿಸಿತ್ತು. ಹೊಸ ರಾಜಕೀಯ ಶಕ್ತಿಗಳು ಉದಯಿ ಸುತ್ತಿರುವುದು, ಅಲ್ಪಸಂಖ್ಯಾತರು ಸಮಾನತೆಗೆ ದನಿಯೆತ್ತಿರುವುದು - ಮಲೇಶ್ಯಾದ ವಿವಿಧ ಜನವಿಭಾಗಗಳಿಗೆ, ಅಭಿಪ್ರಾಯಗಳಿಗೆ ರಾಜಕೀಯ ಅಭಿವ್ಯಕ್ತಿ ಸಿಗುತ್ತಿರುವುದನ್ನು ಸೂಚಿಸುತ್ತದೆ.


ಸ್ಪಾನಿಷ್ ಸೋಶಲಿಸ್ಟರಿಗೆ ಜಯ

ಸ್ಪಾನಿಷ್ ಸೋಶಲಿಸ್ಟ್ ಪಕ್ಷ ಇತ್ತೀಚೆಗೆ ನಡೆದ ಪಾರ್ಲಿಮೆಂಟ್ ಚುನಾವಣೆಯಲ್ಲಿ ಜಯ ಗಳಿಸಿ ಅಧಿಕಾರ ಉಳಿಸಿಕೊಂಡಿದೆ. 350 ಸೀಟುಗಳ ಪಾರ್ಲಿಮೆಂಟಿನಲ್ಲಿ ತನ್ನ ಸೀಟು ಗಳನ್ನು 164 ರಿಂದ 169 ಕ್ಕೆ ಏರಿಸಿಕೊಂಡಿದೆ. ಏಕಪಕ್ಷೀಯ ಬಹುಮತ ಬರದಿದ್ದರೂ ಅದರ ಮೈತ್ರಿಕೂಟಕ್ಕೆ ಬಹುಮತ ಬಂದಿದೆ. ಸೋಶಲಿಸ್ಟರಿಗೆ ಶೇ. 43.6 ಮತ ಬಂದಿದೆ. ಪ್ರಮುಖ ವಿರೋಧ ಪಕ್ಷವಾದ ಬಲಪಂಥೀಯ ಪೊಪ್ಯುಲರ್ ಪಾರ್ಟಿ ಶೇ. 40.1 ಮತಗಳಿಸಿ 148 ರಿಂದ ತನ್ನು ಸೀಟುಗಳನ್ನು 153 ಕ್ಕೆ ಏರಿಸಿದೆ. ಶೇ.75 ಕ್ಕೂ ಹೆಚ್ಚು ಮತದಾನ ವಾಗಿದ್ದು ಕಳೆದ (ಭಯೋತ್ಪಾದನೆಯಿಂದ ಭಾರೀ ರೈಲು ಅಫಘಾತದ ನಂತರದ ವಿಶಿಷ್ಟ ಸಂಧರ್ಭದಲ್ಲಿ ನಡೆದ) ಚುನಾವಣೆಯ ಮತದಾನಕ್ಕೆ ಸಮೀಪವಿದೆ.

ಪೊಪ್ಯುಲರ್ ಪಾರ್ಟಿಗೆ ಕ್ಯಾಥೊಲಿಕ್ ಚರ್ಚ ಬೆಂಬಲಿಸಿದರೂ, ಭಯೋತ್ಪಾದನೆ-ವಿದೇಶೀಯರ ವಲಸೆ, ಸಾಮಾಜಿಕವಾಗಿ ಪ್ರಗತಿಪರ ಕ್ರಮಗಳ ವಿರುದ್ಧ ಮುಂತಾದ ಬಲಪಂಥೀಯರಿಗೆ ಪ್ರಿಯವಾದ ವಿಷಯಗಳ ಬಗ್ಗೆ ಗದ್ದಲ ಎಬ್ಬಿಸಿದರೂ ಸೋಶಲಿಸ್ಟ್ ಪಕ್ಷ ಗೆದ್ದಿರುವುದು ಗಮನಾರ್ಹ ಎನ್ನಲಾಗಿದೆ.

ಮೆಡ್ ವೆಡೆವ್ ರಶ್ಯನ್ ಅಧ್ಯಕ್ಷರಾಗಿ ಆಯ್ಕೆ

ಡಿಮಿಟ್ರಿ ಮೆಡ್‌ವೆಡೆವ್ ರಶ್ಯಾದ ಅಧ್ಯಕ್ಷರಾಗಿ ಭಾರೀ ಬಹುಮತದಿಂದ ಚುನಾಯಿತರಾಗಿದ್ದಾರೆ. ಮೆಡ್ ವೆಡೆವ್ ಶೇ.70 ರಷ್ಟು ಮತ ಗಳಿಸಿದರೆ ಹತ್ತಿರದ ಸ್ಪರ್ಧಿ ಕಮ್ಯುನಿಸ್ಟ್ ಪಕ್ಷದ ಝುಗನೋವ್ ಅವರು ಶೇ.18 ಮತ್ತು ಬಲಪಂಥೀಯ ಅರೆ ಫಾಸಿಸ್ಟ್ ಪಕ್ಷದ ಜಿರಿವೊನ್ಸ್ಕಿ ಶೇ.9 ಮತಗಳಿಸಿದ್ದಾರೆ. ಶೇ.70 ರಷ್ಟು ಮತದಾನವಾಗಿದೆ. ಚುನಾವಣೆಗಳಲ್ಲಿ ಅಕ್ರಮಗಳ ಆಪಾದನೆಗಳು ಬಂದಿವೆ. ಚುನಾವಣೆಗಳ ಮೊದಲಿಂದಲೇ ಹಲವು ಅಕ್ರಮಗಳ - ವಿರೋಧಿ ಅಭ್ಯರ್ಥಿಗಳು' ಸ್ಪರ್ಧೆಗೆ ಇಲ್ಲದಂತೆ ಹಲವು ಹೊಸ ನಿಯಮಗಳ ಜಾರಿ, ಚುನಾವಣಾ ಪ್ರಚಾರದಲ್ಲಿ ಅಧಿಕೃತ ಮಾಧ್ಯಮಗಳ ಮತ್ತು ಸರ್ಕಾರಿ ಯಂತ್ರದ ದುರ್ಬಳಕೆ - ಬಗ್ಗೆ ವರದಿಯಾಗಿತ್ತು.



42 ವರ್ಷದ ಮೆಡ್‌ವೆಡೆವ್ ರಶ್ಯದ ಅತ್ಯಂತ ಕಡಿಮೆ ವಯಸ್ಸಿನ ಅಧ್ಯಕ್ಷ ಎನ್ನಲಾಗಿದೆ. ಅವರು ಈಗಿನ ಅಧ್ಯಕ್ಷ ಪುಟಿನ್ ರ ನಿಕಟವರ್ತಿ ಆಗಿದ್ದು, ನಿಜವಾದ ಅಧಿಕಾರ ಪುಟಿನ್ 'ರ ಕೈಯಲ್ಲೇ ಇರುತ್ತದೆ ಎಂದು ಹೇಳಲಾಗಿದೆ. ಮೆಡ್‌ವೆಡೆವ್ ಅವರಿಗೆ ತಮ್ಮದೇ ಆದ ರಾಜಕೀಯ-ಸಂಘಟನಾತ್ಮಕ ನೆಲೆ ಇಲ್ಲ. ಪುಟಿನ್ ಆಗಲೇ ಎರಡು ಅವಧಿ ಮುಗಿಸಿದ್ದು ಸಂವಿಧಾನ ಬದಲಾಯಿಸದೆ ಅವರು ಪುನಃ ಸ್ಪರ್ಧಿಸುವಂತಿಲ್ಲ. ಆದಕ್ಕಾಗಿ ಈ ವ್ಯವಸ್ಥೆ ಎನ್ನಲಾಗಿದೆ. ಪುಟಿನ್ ಪ್ರಧಾನಿಯಾಗಿ ಆಯ್ಕೆಯಾಗಲಿದ್ದು ಮೆಡ್‌ವೆಡೆವ್ ಜತೆ ಅಧಿಕಾರ ಹಂಚಿಕೊಳ್ಳಲಿದ್ದಾರೆ. ಪುಟಿನ್ ರ ಸ್ವತಂತ್ರ ವಿದೇಶ ಮತ್ತು ಆರ್ಥಿಕ ಬೆಳವಣಿಗೆಯ ನೀತಿಗಳನ್ನು ಮುಂದುವರೆಸುವುದಾಗಿ ಮೆಡ್‌ವೆಡೆವ್ ಹೇಳಿದ್ದಾರೆ.

ಮೆಡ್‌ವೆಡೆವ್ ಗಾಝ್ ಪ್ರೊಮ್ ಎಂಬ ಸರ್ಕಾರಿ ಗ್ಯಾಸ್ ಕಂಪನಿಯ ಮುಖ್ಯಸ್ಥರಾಗಿದ್ದರು. ಪೆಟ್ರೋಲ್, ಗ್ಯಾಸ್ ಮುಂತಾದ ಇಂಧನಗಳ ಅಂತರಾಷ್ಟ್ರೀಯ ಬೆಲೆಗಳು ಕಳೆದ ಹಲವು ವರ್ಷಗಳಿಂದ ಏರುತ್ತಲೇ ಹೋಗಿದೆ. ರಶ್ಯಾದ ಆರ್ಥಿಕ ಸ್ಥಿತಿ ಹಿಂದೆಂದಿಗಿಂತಲೂ ಉತ್ತಮ ಸ್ಥಿತಿಯಲ್ಲಿದೆ. ಇದು ರಶ್ಯದ ಸ್ವತಂತ್ರ ವಿದೇಶಿ ನೀತಿಯ ಹಿಂದೆ ಇರುವ ಹೂರಣ. ಆದರೆ ಕೈಗಾರಿಕೆ (ಸ್ವಲ್ಪ ಮಟ್ಟಿಗೆ ರಕ್ಷಣಾ ಸಂಬಂಧಿ ಮತ್ತು ವಿಮಾನ ಬಿಟ್ಟರೆ) ಯಲ್ಲಿ ಹಿಂದಿನ ಸ್ಥಿತಿಗೆ ಇನ್ನೂ ಬಂದಿಲ್ಲ. ಯುರೋಪ್- ಏಶ್ಯಾದಾದ್ಯಂತ ಹರಡುವ ವ್ಯಾಪಕ ಇಂಧನ (ಪೆಟ್ರೋಲ್, ಗ್ಯಾಸ್) ಜಾಲವನ್ನು ರಚಿಸುವ ಯೋಜನೆಯನ್ನು ರಶ್ಯಾ ಹೊಂದಿದ್ದು, ಅದು ಅದರ ಆರ್ಥಿಕದ ಬೆನ್ನೆಲುಬು ಆಗಲಿದೆ. ಅಮೆರಿಕ ಅದನ್ನು ವಿಫಲಗೊಳಿಸಲು ಎಲ್ಲಾ ಪ್ರಯತ್ನ ಮಾಡುತ್ತಿದೆ. ರಶ್ಯಾವನ್ನು ಮಿಲಿಟರಿ ಕೂಟಗಳಿಂದ ಸುತ್ತುವರಿಯಲು ಹವಣಿಸುತ್ತಿದೆ. ರಶ್ಯಾದ ನಾಯಕತ್ವ ಸ್ವಾಭಾವಿಕವಾಗಿಯೇ ಅದಕ್ಕೆ ಪ್ರತಿರೋಧ ಒಡ್ಡಿದೆ. ಮೆಡ್‌ವೆಡೆವ್ ಹೆಚ್ಚು ಪಾಶ್ಚಿಮಾತ್ಯ-ಪರ ಎಂದು ಹೇಳಲಾಗಿದ್ದರೂ, ಈ ನಿರ್ದಿಷ್ಟ ಸ್ಥಿತಿಯಿಂದಾಗಿ ಸ್ವತಂತ್ರ ವಿದೇಶಿ ನೀತಿಯನ್ನು ಮುಂದುವರೆಸುವ ಸಂಭವ ಹೆಚ್ಚು.

ಇರಾನ್ ವಿರುದ್ಧ ಭದ್ರತಾ ಸಮಿತಿಯ ಹೊಸ ನಿರ್ಬಂಧಗಳು

ಇರಾನ್ ಅಣ್ವಸ್ತ್ರದ ವಿವಾದ ಮುಗಿಯಿತು. ಅಷ್ಟರ ಮಟ್ಟಿಗೆ ಯುದ್ದ ಭೀತಿ ಇಲ್ಲ ಎಂದು ಜಗತ್ತು ನಿಟ್ಟುಸಿರು ಬಿಡುತ್ತಿರು ವಾಗಲೇ, ಆಶ್ಚರ್ಯಕಾರಿ-ಆಘಾತಕಾರಿ ಬೆಳವಣಿಗೆ ಆಗಿದೆ. ಐ.ಎ..ಇ.ಎ.(ಅಂತರ್‍ರಾಷ್ಟ್ರೀಯ ಅಣು ಶಕ್ತಿ ಏಜೆನ್ಸಿ) ದ ಇತ್ತೀಚಿನ 'ಅಧ್ಯಯನ' ಒಂದರ ಆಧಾರದ ಮೇಲೆ, ಒಂದು ಭದ್ರತಾ ಸಮಿತಿಯ ನಿರ್ಣಯದ ಮೂಲಕ ಇರಾನ್ ಮೇಲೆ ಹೊಸ ನಿರ್ಬಂಧಗಳನ್ನು ಹೊರಿಸಿದೆ. ಹಿಂದೆ ಇರಾನ್ ಅಣು ಶಕ್ತಿ ಕಾರ್ಯಕ್ರಮದ ಬಗ್ಗೆ ಇದ್ದ ಎಲ್ಲಾ ಅಂಶಗಳಿಗೆ ಸಮಾಧಾನಕರ ಸಮಜಾಯಿಷಿ ಕೊಡಲಾಗಿದ್ದು ಈ ವಿವಾದ ಮುಗಿಯಿತು ಎಂದು ಕೊಳ್ಳುತ್ತಿರುವಾಗಲೇ ಈ ನಿರ್ಣಯ ಬಂದಿದೆ. ಅಮೆರಿಕದ ಒಂದು ಆಂತರಿಕ ಏಜೆನ್ಸಿ ಸಹ (ಬಯಲಾದ ರಹಸ್ಯ ವರದಿಯಲ್ಲಿ) ಇರಾನ್ ಅಣು ಶಕ್ತಿ ಬಾಂಬ್ ಗೆ ತಯಾರಿಸಿಲ್ಲ ಎಂದು ಹೇಳಿತ್ತು ಎಂದು ಇಲ್ಲಿ ನೆನಪಿಸಿಕೊಳ್ಳಬಹುದು.

ಐ.ಎ..ಇ.ಎ. ದ ಈ 'ಅಧ್ಯಯನ' ಅಮೆರಿಕ ಮತ್ತು ಇಸ್ರೇಲ್ ಸೃಷ್ಟಿಸಿದ್ದು ಅದರ ಬಗ್ಗೆ ವಿವರಣೆ ನೀಡಲು ಅವಕಾಶ ಕೊಟ್ಟಿಲ್ಲ ಎಂದು ಆಪಾದಿಸಿದೆ. ಭದ್ರತಾ ಸಮಿತಿಯ ನಿರ್ಣಯ 14-0 ಬಹುಮತದಿಂದ ಮಂಜೂರಾಯಿತು ಎಂಬುದು ವಿಷಾದಕರ ಸಂಗತಿ. ಇಂಡೋನೇಶ್ಯಾ ಮಾತ್ರ ಮತದಾನದಲ್ಲಿ ಭಾಗವಹಿಸಲಿಲ್ಲ. ಭದ್ರತಾ ಸಮಿತಿಯನ್ನು ತಮ್ಮ ವಿದೇಶ ನೀತಿಯ ಉಪಕರಣವಾಗಿ ದುರ್ಬಳಕೆ ಮಾಡುವ ಅಮೆರಿಕದ ಅಟಾಟೋಪಕ್ಕೆ ಕನಿಷ್ಟ ಚೀನಾ, ರಶ್ಯಾ, ದಕ್ಷಿಣ ಆಫ್ರಿಕಾಗಳು ವಿರೋಧಿಸುತ್ತವೆ ಎಂದು ನಿರೀಕ್ಷಿಸಲಾಗಿತ್ತು. ಈ ಹೊಸ ನಿರ್ಬಂಧ ದ ಭಾಗವಾಗಿ ಇರಾನಿನ ವಿಮಾನ, ಹಡಗುಗಳನ್ನು ನಿಷೇಧಿತ ವಸ್ತುಗಳ ತಪಾಸಣೆಗೆ ಪರೀಕ್ಷಿಸಬಹುದು. ಇರಾನ್ ಅಣುಶಕ್ತಿಗೆ ಸಂಬಂಧಿಸಿದೆ ಎಂದು ಗುಮಾನಿ ಇರುವ ಎರಡು ಬ್ಯಾಂಕ್ ಗಳ ಚಟುವಟಿಕೆಗಳ ಪರೀಕ್ಷಣೆ , 12 ಇರಾನಿ ಕಂಪನಿಗಳು ಮತ್ತು 13 ವ್ಯಕ್ತಿಗಳ ಆಸ್ತಿಗಳನ್ನು ಸ್ಥಗಿತಗೊಳಿಸುವಂತಹ ಕಟು ಕ್ರಮಗಳು ಸೇರಿವೆ. ಇವು ಅಂತರ್‍ರಾಷ್ಟ್ರೀಯ ಕಾನೂನು-ನಿಯಮಗಳನ್ನು ಉಲ್ಲಂಘಿಸುವ ಕ್ರಮಗಳು.

ರಾಜಕೀಯ ರಂಗ ತಾಲೀಮು

ಪುಟ 3 ರಿಂದ

ಮುಖ್ಯಮಂತ್ರಿ ಕುಮಾರಸ್ವಾಮಿ ಊರೂರು ತಿರುಗುವುದು, ಗ್ರಾಮವಾಸ್ತವ್ಯ ಸಭೆಗಳ ಮೂಲಕ ಜನಸಂಪರ್ಕ ಏರ್ಪಡಿಸಿ ಪಕ್ಷಕ್ಕೆ ಹುಮ್ಮಸ್ಸು ತುಂಬಲು ನೋಡುತ್ತಿದ್ದಾರೆ. ಬಿಜೆಪಿ ಜನಾರ್ಧನ ರೆಡ್ಡಿ ಕಾಂಗ್ರೆಸ್‌ನ ಸಿದ್ಧರಾಮಯ್ಯ ಕುಮಾರನ ಬೆನ್ನುಹತ್ತಿ ಅದನ್ನೇ ರಾಜಕೀಯ ಹೋರಾಟ ಎಂದು ತಿಳಿದಿದ್ದಾರೆ.

ಬಿಜೆಪಿ ತನ್ನ ರಾಜಕೀಯ ಆಕ್ರಮಣ ತೀವ್ರಗೊಳಿಸಿದೆ. ಅವರಿವರನ್ನು ಸೆಳೆವ ತಂತ್ರವಲ್ಲದೆ ಸದಾ ರಾಜಕೀಯದಲ್ಲಿ ಸುದ್ದಿ ಇರುವಂತೆಯೂ ಯತ್ನಿಸುತ್ತಿದೆ. ದೊರೆವ ಯಾವ ಅವಕಾಶವನ್ನು ಅದು ತಪ್ಪಿಸಿಕೊಳ್ಳಲು ಸಿದ್ಧವಿಲ್ಲ. ಹೊಣೆನೆಕಲ್‌ಗೆ ಯಡಿಯೂರಪ್ಪ ಪ್ರತಿಭಟನೆಯಂತೆ, ಚುನಾವಣೆಗಳು ಆಗಬೇಕೆಂದು ಮತ್ತೊಂದು ರಾಜಭವನ ಚಲೋ 'ಲೋಕಕ್ಕೆ ಬೆಳಗಾದದ್ದು' ತಮ್ಮ ಕೋಳಿ ಕೂಗಿದ್ದರಿಂದಲೇ ಎಂದು ತೋರಿಸುವ ತವಕ ಅವರಿಗೆ. ಹಾಗೆಯೇ ಸಂಘ ಪರಿವಾರವೂ ಸಹ. ಅದು ಮಂಗಳೂರಿನಲ್ಲಿ ಮಹಾನಗರ ಪಾಲಿಕೆಯ ಅಧಿಕಾರ ಬಳಸಿ ಕಸಾಯಿ ಖಾನೆಯನ್ನು ಹೊಸ ಪ್ರದೇಶದಲ್ಲಿ ಪ್ರಾರಂಭಿಸಲು ಹಲವಾರು ಅಡ್ಡಿ ಸೃಷ್ಟಿಸಿ ದ್ವೇಷ ಹುಟ್ಟುಹಾಕುತ್ತಿದೆ. ಹಾಗೆಯೇ 'ಕರಾವಳಿ ಅಲೆ' ಪತ್ರಿಕೆಯ ಮುಖ್ಯಸ್ಥ ಪತ್ರಕರ್ತ ಬಿ.ವಿ. ಸೀತಾರಾಂ ಮನೆ ಮೇಲೆ ಕಲ್ಲಿನ ಧಾಳಿ ನಡೆಸಿದೆ. ರಾಜಕೀಯ ಸನ್ಯಾಸಿ ಪೇಜಾವರ ಮಠಾಧೀಶರು ದಾಸರ ಸ್ಮರಣೆ ಸಂದರ್ಭದಲ್ಲಿ ಹಂಪಿ ಪರಿಸರಕ್ಕೆ ಕೊಳ್ಳಿ ಇಡಲು ವಿವಾದದ ಊದಿದ್ದಾರೆ. ಪುರಂದರ ಮಂಟಪದ ಪರಿಸರದಲ್ಲಿ ಮುಸ್ಲೀಮರು ಮಾಂಸ ಬೇಯಿಸಿ ಅಪವಿತ್ರ ಗೊಳಿಸುವರೆಂದು ತೀರ್ಪು ನೀಡಿ ಅಲ್ಲಿನ ಈರಣ್ಣ ದೇವಾಲಯ ಅತಿಕ್ರಮಿಸಿ ದರ್ಗಾ ನಿರ್ಮಿಸಿದ್ದಾರೆಂದು ಹೇಳಿ ಕೋಮುದ್ವೇಷ ಕೆರಳಿಸಲು ಯತ್ನಿಸಿದ್ದಾರೆ. ವಿಧ್ವಂಸರಾದ ಚಿ.ಮೂ. ಇದಕ್ಕೆ ಧ್ವನಿಗೂಡಿಸಿದ್ದಾರೆ. ಗದಗ್‌ನಲ್ಲಿ ಶ್ರೀರಾಮ ಸೇನೆ ತ್ರಿಶೂಲ ದೀಕ್ಷೆ ಕಾರ್ಯಕ್ರಮ ಯೋಜಿಸಿದೆ. ಇದಕ್ಕೆ ಜಿಲ್ಲಾಡಳಿತ 'ಅನುಮತಿ' ನೀಡಿತ್ತು. ಇಂತಹವು ಹಲವು... ಹನ್ನೆರಡು... ಮುಂಬರುವ ಚುನಾವಣಾ ಹೋರಾಟ ಎತ್ತ, ಏನೆಂಬುದು ಒಂದು ರೂಪ ತಳೆಯಬೇಕಿದೆ. ಇದೀಗ ಕೇವಲ ರಂಗತಾಲೀಮು.

ನೋಟ



ಡಾ. ಭಾಸ್ಕರ ಮಯ್ಯ

ಜಾಗತೀಕರಣವನ್ನು ಕೆಲವರು 'ವಸುದೈವಕುಟುಂಬಕಂ' ಜತೆಗೆ ಸಮೀಕರಿಸುತ್ತಾರೆ. ಇನ್ನು ಕೆಲವರಿಗೆ ಅದು ವಿಶ್ವಗ್ರಾಮವನ್ನು ನನಸಾಗಿಸುವ ಪ್ರಕ್ರಿಯೆ. ಕೆಲವರಿಗೆ ಅದು ಕೇವಲ ಆಧುನಿಕ ತಂತ್ರಜ್ಞಾನದ ಫಲ. ಇನ್ನು ಕೆಲವರ ದೃಷ್ಟಿಯಲ್ಲಿ ಅದು ಮಾಹಿತಿ ಮತ್ತು ತಂತ್ರಜ್ಞಾನದ ಕ್ರಾಂತಿಕಾರೀ ಪರಿವರ್ತನೆಯ ಹೆಗಲೇರಿ ಅವತರಿಸಿದೆ! ಆದರೆ 'ಜಾಗತೀಕರಣ' ಎಂದರೇನು?

ಜಾಗತೀಕರಣದ ನಾಗಪಾಶ

ವಾಸ್ತವದಲ್ಲಿ ಯುರೋಪಿನ ವ್ಯಾಪಾರಿಗಳು ಅಮೇರಿಕಾವನ್ನು ಕಂಡುಹಿಡಿಯುವ ತನಕ ಅರ್ಧ ಭೂಮಂಡಲ 'ಜಾಗತೀಕರಣ'ಕ್ಕೆ ಒಳಗಾಗಿತ್ತು. ಕೊಲಂಬಸ್‌ನ ಪ್ರವಾಸದ ಅನಂತರ ಈ ಪ್ರಕ್ರಿಯೆ ಆರಂಭವಾಯಿತು. ಇಪ್ಪತ್ತನೆಯ ಶತಮಾನವು ಎರಡು ಮಹಾ ಯುದ್ಧಗಳನ್ನು ಕಂಡಿತು. ಅದು ವಸಾಹತುಶಾಹಿ ಯುಗ. ಜಗತ್ತನ್ನು ತಮ್ಮೊಳಗೆ ಹಂಚಿಕೊಳ್ಳಲು ಯುರೋಪಿನ ವರ್ತಕರು ಹೂಡಿದ ಸಮರ. ಆಗ ಸಾಮ್ರಾಜ್ಯವಾದವು ಪ್ರಬಲವಾಗಿ ತಲೆ ಎತ್ತಿತ್ತು. ಮಹಾಯುದ್ಧದ ಅನಂತರ ಹಳೆಯ ಸಾಮ್ರಾಜ್ಯವಾದವು ಹೊಸ ರೂಪವು ಪಡೆಯಿತು. ವಸಾಹತುಯುಗ ಕೊನೆಗೊಂಡಿತು.

ಸೂರ್ಯ ಮುಳುಗಿದ ಮೇಲೆ....

ಎರಡನೆಯ ವಿಶ್ವ ಯುದ್ಧದ ಪರಿಣಾಮವಾಗಿ 'ಸೂರ್ಯ ಮುಳುಗದ ಸಾಮ್ರಾಜ್ಯ'ದಲ್ಲಿ ಸೂರ್ಯ ಮುಳುಗಿದ. ಅಮೇರಿಕಾವು ಬಂಡವಾಳಶಾಹಿ ವಿಶ್ವದ ಅತ್ಯಂತ ಸಶಕ್ತವಾದ ಏಕಮೇವ ಶಕ್ತಿಯಾಗಿ ರೂಪ ಪಡೆಯಿತು. ಪ್ರತ್ಯಕ್ಷವಾಗಿ ಅಮೇರಿಕಾ ಜಗತ್ತಿನ ಮೇಲೆ ತನ್ನ ಆಡಳಿತ ನಡೆಸದಿರಬಹುದು. ಆದರೆ, ಅದು ಪರೋಕ್ಷವಾಗಿ ಜಗತ್ತಿನ ಮೇಲೆ ತನ್ನ ಹಿಡಿತವನ್ನು ಸಾಧಿಸಿತು. ಅದಕ್ಕಾಗಿ ಅದು ಮಾಡಿಕೊಂಡ ವ್ಯವಸ್ಥೆ ವಿಶ್ವಬ್ಯಾಂಕ್, ಅಂತಾರಾಷ್ಟ್ರೀಯ ಹಣಕಾಸು ಸಂಸ್ಥೆ ಇತ್ಯಾದಿಗಳು. ಇಂದು ಅಮೇರಿಕಾದೊಂದಿಗೆ ಕೈಜೋಡಿಸಿರುವ ಅತೀ ಮುಂದುವರಿದ ದೇಶಗಳು ಎಂಟು ಅಮೇರಿಕಾ, ಫ್ರಾನ್ಸ್, ಜರ್ಮನಿ, ಇಟಲಿ, ಜಪಾನ್, ಇಂಗ್ಲೆಂಡ್, ಕೆನಡ ಮತ್ತು ಕೊನೆಯಲ್ಲಿ ಸೇಡಿಕೊಂಡ ರಶ್ಯಾ. ಇವು ಕೈಗಾರಿಕಾ ರಾಷ್ಟ್ರಗಳ ಒಂದು ಬೃಹತ್ ಒಕ್ಕೂಟ. ಇವು ಇಡೀ ಪ್ರಪಂಚದ ಮೇಲೆ ತಮ್ಮ ಹಿಡಿತವನ್ನು ಸಾಧಿಸಿವೆ. ಇವುಗಳು ಹುಟ್ಟುಹಾಕಿದ ಜಾಗತಿಕ ವ್ಯಾಪಾರ ಒಪ್ಪಂದವೇ ಗ್ಯಾಟ್. ರಿಂದ ವಿವಿಧ ಬಗೆಗಳಿಂದ ಜಗತ್ತಿನಾದ್ಯಂತ 'ವ್ಯಾಪಾರ ಮತ್ತು ಸುಂಕಗಳ ಸಾರ್ವತ್ರಿಕ ಒಪ್ಪಂದ 'ಗ್ಯಾಟ್'ದ ತನ್ನ ಕಬಂಧ ಬಾಹುಗಳನ್ನು ಚಾಚಿದ ಸಾಮ್ರಾಜ್ಯಶಾಹಿ ಶಕ್ತಿಗಳು 1994 ರಲ್ಲಿ ಮಾರ್ರಕೇಶ್‌ನಲ್ಲಿ ಎಪ್ರಿಲ್ 15 ರಂದು ಗ್ಯಾಟ್‌ನ 'ಅಂತಿಮ ಪರಿಣತಿ'ಯಾಗಿ 'ವಿಶ್ವವ್ಯಾಪಾರ ಸಂಘಟನೆ' WTO ಸ್ಥಾಪನೆಯಾಯಿತು. 1995 ಜನವರಿ ಒಂದರಂದು WTO ಜಾರಿಗೆ ಬಂತು.

ಜಗತ್ತಿನಲ್ಲಿ ಅಂತಾರಾಷ್ಟ್ರೀಯ ವ್ಯಾಪಾರದ ಸಂಚಾಲನೆ ಮತ್ತು ನಿಯಂತ್ರಣದ ಏಕಮಾತ್ರ ಸಂಸ್ಥೆ 'ವಿಶ್ವವ್ಯಾಪಾರ ಸಂಘಟನೆ'. ಇಂದು ಜಗತ್ತಿನ 150 ದೇಶಗಳು WTO ವಿನ ಸದಸ್ಯ ರಾಷ್ಟ್ರಗಳು. ಸಂಪೂರ್ಣ ಜಗತ್ತಿನ ಶೇಕಡ 90 ಭಾಗ ವ್ಯಾಪಾರ ವಹಿವಾಟು ಇದರ ನೇತೃತ್ವದಲ್ಲಿ ನಡೆಯುತ್ತದೆ. ಒಮ್ಮೆ ಇದರ ಸದಸ್ಯನಾದ ಮೇಲೆ ಅದರ ಕಾನೂನು ಕಟ್ಟಲೆಗಳನ್ನು ಒಪ್ಪಲೇಬೇಕಾಗುತ್ತದೆ. ಇಲ್ಲದಿದ್ದರೆ ನಾನಾ ಬಗೆಯ ಪ್ರತಿಬಂಧಗಳನ್ನು, ನಿರ್ಬಂಧಗಳನ್ನು ಹೇರಲಾಗುತ್ತದೆ. ಅದು ದಂಡವನ್ನೂ ವಿಧಿಸಬಹುದು. ಈ ಹೊಸ ಬಗೆಯ ಸಾಮ್ರಾಜ್ಯವಾದರಿಂದ ತಪ್ಪಿಸಿಕೊಳ್ಳುವುದು ಸಾಧ್ಯವೇ ಇಲ್ಲ. ಆರ್ಥಿಕ ಏಜೆನ್ಸಿಗಳ ಮೂಲಕ ದೇಶವನ್ನು ಹದ್ದುಬಸ್ತಿನಲ್ಲಿಡಲು ಸಾಧ್ಯವಾಗಿದಿದ್ದರೆ ಅಮೇರಿಕಾ ಹಾಗೂ ಅದರ ಸೈನ್ಯ ಏಜನ್ಸಿಗಳು 'ನ್ಯಾಟೊ' ಆಕ್ರಮಣಕಾರಿ ಕಾರ್ಯಾಚರಣೆಗೆ ಇಳಿದುಬಿಡುತ್ತವೆ. ಎರಡನೆಯ ವಿಶ್ವಯುದ್ಧದ ಅನಂತರ ನವಸಾಮ್ರಾಜ್ಯಶಾಹಿ ಹಿತಗಳಿಗೆ ಧಕ್ಕೆ ಎನಿಸಿದಲ್ಲೆಲ್ಲಾ ಅದು ನೂರಾರು ಬಾರಿ ಯುದ್ಧಮಾಡಿದೆ. ಕೋಟ್ಯಂತರ ಜನರನ್ನು ಕೊಂದಿದೆ. ಅಫಘಾನಿಸ್ಥಾನ ಮತ್ತು ಇರಾಕ್ ಇತ್ತೀಚೆಗಿನ ತಾಜಾ ಉದಾಹರಣೆಗಳು.

ಬರ್ಬರತಾವಾದ - ಬೆಂಬಿಡದ ಬೇತಾಳ

ಜಾಗತೀಕರಣ ಇಂದು ಬೆಂಬಿಡದ ಬೇತಾಳ. ಇದರಿಂದ ತಪ್ಪಿಸಿಕೊಳ್ಳುವ ಉಪಾಯವಂತೂ ಸದ್ಯೋಭವಿಷ್ಯದಲ್ಲಿ ಕಾಣಿಸುತ್ತಿಲ್ಲ. ಲೆನಿನ್ ಸಾಮ್ರಾಜ್ಯವಾದವನ್ನು ಬಂಡವಾಳವಾದದ ಉತ್ತುಂಗ ಶಿಖರವೆಂದು ಕರೆದರು. ಆದರೆ, ಸಾಮ್ರಾಜ್ಯವಾದದ ಉತ್ತುಂಗ ಶಿಖರವಾಗಿ ಈಗ ಜಾಗತೀಕರಣದ ಬರ್ಬರ ಯುಗ ಆವಿರ್ಭವಿಸಿದೆ.



ಇದನ್ನು ಇಜಾಜ್ ಅಹ್ಮದ್ ಅವರು 'ಸಾಮ್ರಾಜ್ಯವಾದವಲ್ಲ'; ಬದಲಿಗೆ 'ಬರ್ಬರತಾವಾದ' ಎಂದು ಕರೆಯುತ್ತಾರೆ. ಈ ನಾಗಪಾಶದಿಂದ ಬಿಡಿಸಿಕೊಳ್ಳುವ ಬ್ರಹ್ಮಾಸ್ತ್ರಕ್ಕಾಗಿ ಈ ಭೂಗ್ರಹವು ಸೌರವ್ಯೂಹದಲ್ಲಿ ಅಲೆದಾಡುವ ಒಂದು ಸತ್ತ ಬಂಜರು ಗ್ರಹವಾಗಿ ಮಾರ್ಪಟ್ಟರೆ-ಅದೂ ಆಶ್ಚರ್ಯವೇನಲ್ಲ.

'ಸ್ಪರ್ಶಮಣಿ' ಸಿದ್ಧಾಂತ

ಜಾಗತೀಕರಣದ ಫಲವಾಗಿ ಒಂದು ಹೊಸ ಅಭಿಜಾತವರ್ಗ ಸೃಷ್ಟಿಯಾಗಿದೆ. ಅದರಲ್ಲಿ ಮೇಲ್ಮಧ್ಯಮ, ಕೆಳಮಧ್ಯಮ ವರ್ಗದವರು ಉಣ್ಣಲೂ ತಿನ್ನಲೂ ಸಾಕಷ್ಟಿರುವ ಸಮುದಾಯ, ಪ್ರೊಫೆಸರುಗಳು, ಬುದ್ಧಿಜೀವಿಗಳು ಇದ್ದಾರೆ. ಇವರಲ್ಲಿ ಹೆಚ್ಚಿನವರು ಅಮೇರಿಕಾದ ಚಾಕರಿಯಲ್ಲಿಯೇ ತಮ್ಮ ಜನ್ಮದ ಸಾರ್ಥಕ್ಯವನ್ನು ಕಂಡುಕೊಳ್ಳುವವರು. ಯಾವ ದೇಶದಲ್ಲಿ ಇಂಥ ಜನಗಳು ಹೆಚ್ಚು ಹೆಚ್ಚು ಸಂಖ್ಯೆಯಲ್ಲಿ ಇರುತ್ತಾರೋ ಅಲ್ಲೆಲ್ಲೂ ಪ್ರತಿಭಟನೆಯ ಸ್ವರ ಮೊಳಗುವುದಿಲ್ಲ. ಈ ಬುದ್ಧಿಜೀವಿಗಳ ಪ್ರಕಾರ ಯಾವುದೇ ಬಡದೇಶವು ಶ್ರೀಮಂತ ದೇಶದೊಂದಿಗೆ ವ್ಯಾಪಾರ ಮತ್ತು ಬಂಡವಾಳದ ಸಂಬಂಧ ಹೊಂದಿದರೆ ಕಾಲಾಂತರದಲ್ಲಿ ಅದು ಕೂಡಾ ಶ್ರೀಮಂತ ರಾಷ್ಟ್ರವಾಗಿ ಬಿಡುತ್ತದೆ. ಇದಕ್ಕೆ 'ಥಿಯೋರಮ್ ಆಫ್ ಕನ್‌ವರ್ಜನ್ಸ್' ಎಂದು ಕರೆಯುತ್ತಾರೆ. ಇದು ಏಡಂ ಸ್ಮಿತ್‌ನ ವಿಚಾರ. ಆಶ್ಚರ್ಯ ಎಂದರೆ 20ನೆಯ ಶತಮಾನದಲ್ಲಿ 'ಪಾಲ್ ಸ್ಯಾಮ್ಯುವೆಲ್‌ಸನ್' ಇದೇ ಸಿದ್ಧಾಂತವನ್ನು ಮಂಡಿಸಿ ನೊಬೆಲ್ ಪ್ರಶಸ್ತಿಯನ್ನು ಪಡೆದ. ಹಾರ್ವರ್ಡ್ ವಿಶ್ವವಿದ್ಯಾಲಯದ ಜಫ್ರಸ್ಯೆಕ್ಸ್ ಮತ್ತು ಎಂಡೂವಾಫ್ ಸುಮಾರು 87 ಬಡ ರಾಷ್ಟ್ರಗಳ ಅಧ್ಯಯನ ಮಾಡಿದರು. ಅಧ್ಯಯನದ ಅವಧಿ 1965 ರಿಂದ 1990. ಈ ಸುಪ್ರಸಿದ್ಧ(!) ಅರ್ಥಶಾಸ್ತ್ರಜ್ಞರ ಶೋಧನೆಯ ಪ್ರಕಾರ 87 ರಾಷ್ಟ್ರಗಳಲ್ಲಿ 74 ಮುಚ್ಚಿದ ದೇಶಗಳು. ಏಕೆಂದರೆ ಅವಿನ್ನೂ ಜಾಗತೀಕರಣಕ್ಕೆ ಒಳಗಾಗಿಲ್ಲ. ಅವುಗಳು ಅತ್ಯಂತ ಹಿಂದುಳಿದಿವೆ. ಮಿಕ್ಕ ಹದಿಮೂರು ದೇಶಗಳು ಜಾಗತೀಕರಣಕ್ಕೆ ಒಳಗಾದ ಮುಕ್ತ ದೇಶಗಳು. ಇವರ ದೃಷ್ಟಿಯಲ್ಲಿ ಬಡತನ ಒಂದು ಕಾಯಿಲೆ. ವಿಕಾಸದ (ಅಭಿವೃದ್ಧಿ) ದರದಲ್ಲಿ ವೃದ್ಧಿಯಾದಂತೆ ಬಡತನ ನಿವಾರಣೆಯಾಗುತ್ತದೆ. ಆದರೆ ಯಾರ ಬಡತನ ನಿವಾರಣೆಯಾಗುತ್ತದೆ? ಶ್ರೀಮಂತರ ಬಡತನ ನಿವಾರಣೆಯಾಗುತ್ತದೆ. ಬಡವರು ಇಹಲೋಕವನ್ನೇ ತ್ಯಜಿಸುವುದರಿಂದ ಅಭಿವೃದ್ಧಿ ದರ ನಾಗಾಲೋಟದಿಂದ ಮೇಲೇರುತ್ತದೆ!

ಜಾಗತೀಕರಣ ಎಂಬ ಸುನಾಮಿ

ಜಾಗತೀಕರಣದ ಸುನಾಮಿ ಅಲೆಗಳಿಗೆ ಆಫ್ರಿಕಾ ಖಂಡದ ಬಹುತೇಕ ದೇಶಗಳ ಆರ್ಥಿಕ ವ್ಯವಸ್ಥೆ ನೆಲಕಚ್ಚಿದೆ. ಇಥಿಯೋಪಿಯಾ, ಸೋಮಾಲಿಯಾ, ಸೂಡಾನ್ ಜಗತ್ತಿನ ನಕ್ಷೆಯಲ್ಲಿ ಬರಿ ಹೆಸರಿಗೆ ಮಾತ್ರ ಇವೆ ಅಷ್ಟೆ. ಮೂರನೆಯ ವಿಶ್ವದ ದೇಶಗಳಲ್ಲಿ ಇಂದು ಎಂತಹ ಭೀಕರ ಪರಿಸ್ಥಿತಿ ಎಂದರೆ -



'ಪ್ರತೀ ವರ್ಷ ಈ ಜಗತ್ತಿನಲ್ಲಿ ಹಸಿವಿನಿಂದ ಸಾಯುವವರ ಸಂಖ್ಯೆ 15 ಮಿಲಿಯ. ಪ್ರತಿ ನಿಮಿಷಕ್ಕೆ 24 ಜನರು ಸಾಯುತ್ತಾರೆ. ಗಂಟೆಗೆ ಸರಾಸರಿ 35,000 ಜನರು ಅಸು ನೀಗುತ್ತಾರೆ. ಪ್ರತಿ ನಿಮಿಷಕ್ಕೆ ಸಾಯುವ 24 ಜನರಲ್ಲಿ 18 ಜನ ಮಕ್ಕಳು ಮತ್ತು 5 ವರ್ಷಕ್ಕೂ ಕೆಳಗಿನ ವಯಸ್ಸಿನವರು. ಕಳೆದ 2 ವರ್ಷಗಳಿಂದ ಹಸಿವಿನಿಂದ ಸತ್ತವರ ಸಂಖ್ಯೆ ಎರಡು ಮಹಾಯುದ್ಧಗಳಲ್ಲಿ ಸತ್ತವರ ಸಂಖ್ಯೆಗಿಂತಲೂ ಹೆಚ್ಚು. ಪ್ರತಿ ಎರಡು ದಿನಕ್ಕೆ ಹಸಿವಿನಿಂದ ಸಾಯುವವರ ಸಂಖ್ಯೆ ಹಿರೋಷಿಮಾದಲ್ಲಿ ಹಾಕಿದ ಅಣುಬಾಂಬಿನಿಂದ ಸತ್ತವರ ಸಂಖ್ಯೆಗಿಂತ ಹೆಚ್ಚು. 1976ರಲ್ಲಿ ಚೀನಾದಲ್ಲಿ ಸಂಭವಿಸಿದ ಭೂಕಂಪದಲ್ಲಿ ಎರಡು ಲಕ್ಷಕ್ಕೂ ಹೆಚ್ಚು ಜನರು ಜೀವನಕಳೆದುಕೊಂಡಿದ್ದರು. ಆದರೆ ಪ್ರತಿ ಏಳು ದಿನಕ್ಕೆ ಅದಕ್ಕಿಂತ ಅಧಿಕ ಸಂಖ್ಯೆಯಲ್ಲಿ ಜನ ಹಸಿವಿನಿಂದ ಸಾಯುತ್ತಿದ್ದಾರೆ.

ಹೀಗೆ ಹಸಿವಿನಿಂದ ಸಾಯುವ ಮತ್ತು ನರಳುತ್ತಿರುವ ಜನರು ತೃತೀಯ ಜಗತ್ತಿನ ದೇಶಗಳವರು. 'ಲ್ಯಾಟಿನ್ ಅಮೇರಿಕಾ, ಆಫ್ರಿಕಾ ಮತ್ತು ಏಷ್ಯಾ ಖಂಡದ ದೇಶಗಳು' ಈ ಭಯಾನಕ ಪೀಡೆಗೆ 'Starvation' ಒಳಗಾದವರ ಒಟ್ಟು ಸಂಖ್ಯೆ ಸುಮಾರು 1,000 ಮಿಲಿಯನ್. ಇದರ ಅರ್ಧದಷ್ಟು ಜನರು ಕೇವಲ ಭಾರತ, ಬಾಂಗ್ಲಾ, ಪಾಕಿಸ್ತಾನ, ನೈಜೀರಿಯ ಮತ್ತು ಇಂಡೋನೇಶಿಯಾದಲ್ಲಿದ್ದಾರೆ. ಭಾರತದಲ್ಲಿ ಹಸಿವು, ಬಡತನದ ಬೇನೆಗೆ ಗುರಿಯಾದವರ ಸಂಖ್ಯೆಯನ್ನು ಒಟ್ಟು ಸಂಖ್ಯೆಯಲ್ಲಿ ಕಳೆದರೆ Starvationಗೆ ಒಳಗಾದವರಲ್ಲಿ 1/3 ರಷ್ಟು ಕಡಿಮೆಯಾಗುತ್ತದೆ.

ಯುನೈಟೆಡ್ ನೇಶನ್ಸ್ 'ಹಂಗರ್ ಪ್ರಾಜೆಕ್ಟ್'ನ ವರದಿ ಭಾರತದ ಶಾಸಕ ವರ್ಗಕ್ಕೆ ಜಾಗತೀಕರಣ ಒಂದು ಸುವರ್ಣಯುಗವನ್ನೇ ಆರಂಭಿಸಿದೆ ಎಂಬ ಭ್ರಮೆಯಿದೆ. ದೇಶದ ಸಮಸ್ತ ದುಃಖಗಳಿಗೆ 'ಬಡತನ, ವಿಷಮತೆ, ಹಿಂದುಳಿದಿರುವಿಕೆ, ಅಸಮತೋಲ, ಅಭಿವೃದ್ಧಿ, ಅಸಂಗತ ಆಮದು-ರಫ್ತು, ನಿರುದ್ಯೋಗ' ಇದುವೇ ರಾಮಬಾಣವೆಂದು ಅದು ಭಾವಿಸಿಕೊಂಡಿದೆ. ಅದು ಅಚ್ಚರಿಯ ವಿಷಯವೇನಲ್ಲ. ಏಕೆಂದರೆ, ಭಾರತದ ಶಾಸಕವರ್ಗ ಭಾರತದ ಬಂಡವಾಳಗಾರರ, ಜಮೀನ್ದಾರರ ಪ್ರತಿನಿಧಿಗಳ ಗುಂಪು. ಭಾರತದ ಬಂಡವಾಳಗಾರರು ಬಹುರಾಷ್ಟ್ರೀಯ ಕಂಪೆನಿಗಳೊಂದಿಗೆ ನಾನಾ ಬಗೆಯ ಒಪ್ಪಂದ ಮಾಡಿಕೊಂಡು ಅವರ ದಲ್ಲಾಳಿಗಳಂತೆ ಕೆಲಸ ಮಾಡುವವರು. ಇವರಿಂದ ಇದಕ್ಕಿಂತ ಹೆಚ್ಚಿನದೇನನ್ನು ತಾನೆ ನಿರೀಕ್ಷಿಸಲು ಸಾಧ್ಯ?

ಎರಡನೇ ಮಜಲು

ಭಾರತದಲ್ಲಿ ಇಂದು ಜಾಗತೀಕರಣ ಎರಡನೆಯ ಮಜಲಿನಲ್ಲಿದೆ. ಮೊದಲ ಮಜಲು ಆರಂಭವಾದುದು 1991ರಲ್ಲಿ. ಕಾಂಗ್ರೆಸ್ ಕೇಂದ್ರದಲ್ಲಿ ಅಧಿಕಾರದಲ್ಲಿದ್ದ ಕಾಲ. ಅದರ ರೂವಾರಿಯೇ ಇಂದು ಪ್ರಧಾನಮಂತ್ರಿಯಾಗಿರುವ, ಅಂದು ಅರ್ಥಮಂತ್ರಿಯಾಗಿದ್ದ ಮನಮೋಹನ್ ಸಿಂಗ್ ಅವರು. ಎರಡನೆಯ ಮಜಲು ಆರಂಭವಾದುದು ಶ್ರೀಮಾನ್ ವಾಜಪೇಯಿಯವರ ಎನ್.ಡಿ.ಎ. ಸರಕಾರದ ಕಾಲಾವಧಿಯಲ್ಲಿ '1998 ರಿಂದ 2004'. ಇಂದಿನ ಯು.ಪಿ.ಎ. ಸರಕಾರವೂ ಈ ಪರಂಪರೆಯನ್ನು ನಿರ್ವಿಘ್ನವಾಗಿ ಮುಂದುವರಿಸುತ್ತಿದೆ.

ವರ್ಷ 2005ರ ರಾಷ್ಟ್ರೀಯ ಅಭಿವೃದ್ಧಿ ವರದಿಯ ಪ್ರಕಾರ ಮೂರನೆಯ ಜಗತ್ತಿನ ಸಂಕಟವು ಕಡಿಮೆಯಾಗುವ ಲಕ್ಷಣ ಕಾಣಿಸುತ್ತಿಲ್ಲ. ಹಸಿವು, ನಿರುದ್ಯೋಗ, ಆಹಾರದ ಕೊರತೆ, ಕ್ಷಾಮ, ಸಾವುಗಳ ಸರಮಾಲೆ ಮುಂದುವರಿದಿದೆ. 1900 ರಿಂದ 2004ರ ಅವಧಿಯಲ್ಲಿ ಸಮಸ್ತ ರಾಷ್ಟ್ರಗಳಾದ ಅಮೇರಿಕಾ, ಜಪಾನ್, ಜರ್ಮನಿ, ಬ್ರಿಟನ್, ಫ್ರಾನ್ಸ್, ಇಟೆಲಿ ಮತ್ತು ಕೆನಡಾದ ಶ್ರೀಮಂತಿಕೆ ಇತಿಹಾಸ ಹಿಂದೆಂದೂ ಕಂಡು ಕೇಳರಿಯದ ರೀತಿಯಲ್ಲಿ ವರ್ಧಿಸಿದೆ. ಆದರೆ, ಅಷ್ಟೇ ದುಃಖದಾಯಕವಾದ ಸ್ಥಿತಿಯೆಂದರೆ ಪ್ರತಿಯೊಬ್ಬ ವ್ಯಕ್ತಿಯ ಮೇಲೆ 168 ಡಾಲರ್‌ಗಳಷ್ಟು ಹೆಚ್ಚಿನ ಹಣ ಸೈನ್ಯಶಕ್ತಿಗೆ ಈ ವ್ಯಯವಾಗಿದೆ. ಈ ಒಂದೂವರೆ ದಶಕದಲ್ಲಿ ಆಫ್ರಿಕಾದ 13 ದೇಶಗಳ ಮಾನವ ವಿಕಾಸ (ಅಭಿವೃದ್ಧಿ) ಸೂಚ್ಯಂಕ ಪಾತಾಳಕ್ಕಿಳಿದಿದೆ. 2005ರಷ್ಟಕ್ಕೆ ಆಫ್ರಿಕಾದ 35 ಕೋಟಿ ಜನ ಬಡತನದ ಅಗ್ನಿಕುಂಡದಲ್ಲಿ ಬೆಂದು ಹೋದರು. ಜಾಗತೀಕರಣದ ಈಪರಿ ದೃಶ್ಯ ಯುದ್ಧಗ್ರಸ್ತ ವಿಭೀಷಿಕೆಗಿಂತಲೂ ಭಯಾನಕವಾದುದು.

ಬಾಲಕನ ಜೀವ ಉಳಿಸಿದ ಆಕರ ಕೋಶಗಳು



■ ಜಯ

ಅನೀಮೀಯ ರೋಗದಿಂದ ಬಳಲುತ್ತಿದ್ದ ಬಾಲಕನಿಗೆ ಅವನ ಒಂದೂವರೆ ವರ್ಷದ ತಂಗಿಯ ರಕ್ತದಿಂದ ಬೇರ್ಪಡಿಸಿದ ಆಕರ ಕೋಶಗಳಿಂದ ಡಾಕ್ಟರು ಬಾಲಕನ ಜೀವ ಉಳಿಸಿದ್ದಾರೆ. (ರಕ್ತದಲ್ಲಿರುವ ಬಿಳಿಯ ರಕ್ತ ಕಣಗಳನ್ನು ಕ್ಷೀಣಗೊಳಿಸುವ ಕಾಯಿಲೆಗೆ ಅನೀಮೀಯ ಎಂದು ಹೆಸರು.) ತಂಗಿಯ ಆಕರ ಕೋಶ ಚಿಕಿತ್ಸೆ ನೀಡಿದ ಮೂರು ವಾರಗಳ ನಂತರ ಅವನ ದೇಹದಲ್ಲಿನ ಬಿಳಿಯ ರಕ್ತ ಕಣಗಳ ಸಂಖ್ಯೆಯಲ್ಲಿ ಹೆಚ್ಚಳ ಕಾಣುತ್ತಿದ್ದು ಅನೀಮೀಯ ರಕ್ತ ಕಾಯಿಲೆಯಿಂದ ಸಂಪೂರ್ಣವಾಗಿ ಗುಣಮುಖವಾಗಲಿದ್ದಾನೆ. ಬಾಲಕನ ಬಿಳಿಯ ರಕ್ತ ಕಣಗಳ ಸಂಖ್ಯೆಯು ಸೊನ್ನೆಯ ಮಟ್ಟಕ್ಕಿಳಿದ ಕೂಡಲೇ ಡಾಕ್ಟರು ಅವನಿಗೆ ಆಕರ ಕೋಶಗಳನ್ನು ತುಂಬಲಾರಂಭಿಸಿದರು. ಈ ಚಿಕಿತ್ಸೆಯ ಆರುವಾರಗಳ ನಂತರ ಬಾಲಕನ ರಕ್ತದ ಗುಂಪು ಈಗಿರುವ 'ಎ ಪಾಸಿಟಿವ್' ನಿಂದ ತಂಗಿಯ ರಕ್ತದ ಗುಂಪಾದ 'ಒ ಪಾಸಿಟಿವ್'ಗೆ ಪರಿವರ್ತನೆ ಹೊಂದುವುದಂತೆ. ಆದರೆ ಹೆಣ್ಣು ಮಗುವಿನ ಆಕರ ಕೋಶಗಳನ್ನು ಬಳಸಿಕೊಂಡಿರು ವುದರಿಂದ ಕೆಲಮಟ್ಟಿಗೆ ಬಾಲಕನು ಹೆಣ್ಣು ಮಗುವಿನ ಲಕ್ಷಣಗಳನ್ನು ಹೊಂದುವ ಸಾಧ್ಯತೆಯಿದೆಯೆಂದು ಹೇಳಲಾಗಿದೆ.

ಆಕರ ಕೋಶವೆಂದರೇನು?

ಎಲ್ಲ ಜೀವಿಗಳು ಕೋಟ್ಯಾಂತರ ಸಂಖ್ಯೆಯ ಸಣ್ಣ ಸಣ್ಣ ಜೀವಕೋಶಗಳಿಂದ ಮಾಡಲ್ಪಟ್ಟಿವೆ. ಜೀವಕೋಶಗಳ ಆಧಾರದ ಮೇಲೆ ಜೀವಿಗಳನ್ನು ಎರಡು ವಿಧಗಳಾಗಿ ವಿಂಗಡಿಸಬಹುದು: ಏಕಕೋಶ ಜೀವಿಗಳು ಮತ್ತು ಬಹುಕೋಶ ಜೀವಿಗಳು. ಕ್ರಮವಾಗಿ ಅಮೀಬಾ ಮತ್ತು ಇಲಿ ಯನ್ನು ಇವುಗಳಿಗೆ ಉದಾಹರಣೆಯಾಗಿ ನೀಡಬಹುದು. ಬಹುಕೋಶ ಜೀವಿಗಳಿಂದ ಬೇರ್ಪಡಿಸಬಹುದಾದ ಮತ್ತು ಅಂಗವನ್ನು ಕಸಿಮಾಡಲು ಬಳಕೆಯಾಗಬಲ್ಲ ಜೀವಕೋಶಗಳೇ ಆಕರ ಕೋಶಗಳು (ಸ್ಟೆಮ್ ಸೆಲ್).

ಆಕರ ಕೋಶಗಳ ವಿಧಗಳು:



ಆಕರ ಕೋಶಗಳನ್ನು ವಿಶಾಲ ವ್ಯಾಪ್ತಿಯಲ್ಲಿ ಎರಡು ವಿಧಗಳಾಗಿ ವಿಂಗಡಿಸಬಹುದು: ಭ್ರೂಣ ಆಕರ ಕೋಶಗಳು ಮತ್ತು ವಯೋಮಾನದ ಆಕರ ಕೋಶಗಳು. ಭ್ರೂಣ ಆಕರ ಕೋಶಗಳನ್ನು ಜೀವಿಯೊಂದರ ಭ್ರೂಣವು ವಿಕಾಸಗೊಳ್ಳುವ ಸಂದರ್ಭದಲ್ಲಿ ಪಡೆಯಬಹುದಾದರೆ, ವಯೋಮಾನದ ಆಕರ ಕೋಶಗಳನ್ನು ಬೆಳೆದ ಜೀವಿಗಳ ಅಂಗಗಳಿಂದ ಪಡೆಯಲಾಗುತ್ತದೆ. ಭ್ರೂಣ ಆಕರ ಕೋಶಗಳನ್ನು ಒಂದು ಜೀವಿಯಿಂದ ಬೇರ್ಪಡಿಸಿ ಅಗತ್ಯವಿರುವ ಮತ್ತೊಂದು ಜೀವಿಯಲ್ಲಿ ಕಸಿ ಮಾಡಿ ವಿಶೇಷವಾದ ಅಂಗಾಂಗಳಾಗಿ ಬೆಳೆಸಬಹುದು. ಗಾಯಗೊಂಡು ಅಥವಾ ಕಾಯಿಲೆಯಿಂದ ಮಾನವನ ಅಂಗವೊಂದು ನಿರುಪಯುಕ್ತಗೊಂಡಲ್ಲಿ ಅಂತಹ ಅಂಗವನ್ನು ಕಸಿಮಾಡುವ ಮೂಲಕ ಬೆಳೆಸಬಲ್ಲ ಸಾಧ್ಯತೆಯಿರುವುದರಿಂದ, ಇಂತಹ ಆಕರ ಕೋಶಗಳ ಅಭಿವೃದ್ಧಿಯು ಹೆಚ್ಚಿನ ಕುತೂಹಲ ಕೆರಳಿಸಿದೆ. ವಯೋಮಾನದ ಆಕರ ಕೋಶಗಳನ್ನು ಒಂದು ಬೆಳೆದ ಜೀವಿಯಿಂದ ಬೇರ್ಪಡಿಸಿ ಮತ್ತೊಂದು ಜೀವಿಯ ಅಂಗಾಂಗಗಳ ರಿಪೇರಿಗಾಗಿ ಬಳಸಲಾಗುತ್ತದೆ. ಉದಾಹರಣೆಗೆ: ರಕ್ತ, ಚರ್ಮ ಅಥವಾ ಅಂತರಿಕ ಅಂಗಗಳು. ಇವುಗಳನ್ನು ಸಾಮಾನ್ಯವಾಗಿ ಕರುಳಬಳ್ಳಿಯ ರಕ್ತ ಮತ್ತು ಅಸ್ಥಿ(ಮೂಳೆಯ) ಸಾರದಿಂದ ಪಡೆಯಬಹುದು.



ಆಕರ ಕೋಶಗಳ ಸಂಶೋಧನೆ:

ಭ್ರೂಣ ಆಕರ ಕೋಶಗಳು ಅಥವಾ ಮಾನವ ಭ್ರೂಣ ಆಕರ ಕೋಶಗಳ ವಿಜ್ಞಾನ ಸಂಶೋಧನೆಯು ಕಳೆದ ಇಪ್ಪತ್ತು ವರ್ಷಗಳಿಂದ ಪ್ರಗತಿಯಲ್ಲಿದ್ದರೂ ಇದುವರೆಗೂ ಸಾರ್ವತ್ರಿಕವಾಗಿ ಅನುಮೋದನೆಗೊಂಡ ಪ್ರಯೋಗಗಳು ಲಭ್ಯವಿಲ್ಲ. ಇವುಗಳನ್ನು ಉತ್ಪಾದಿಸಬೇಕಾದರೆ ಭ್ರೂಣಗಳನ್ನು ಕೊಲ್ಲಬೇಕಾಗುತ್ತದೆ. ಆದ್ದರಿಂದ ಇವುಗಳ ಸಂಶೋಧನೆಗೆ ಹೆಚ್ಚಿನ ಪ್ರೋತ್ಸಾಹ ನೀಡಲಾಗುತ್ತಿಲ್ಲ. ಇದುವರೆಗೆ ನಡೆದಿರುವ ಎಲ್ಲ ಆಕರ ಕೋಶಗಳ ಸಂಶೋಧನೆಗಳನ್ನು ಇಲಿ ಮತ್ತು ಮನುಷ್ಯನ ಭ್ರೂಣಗಳ ಮೇಲೆಯೇ ನಡೆಸಲಾಗಿದೆ.

ಆದರೆ ವಯೋಮಾನ ಆಕರ ಕೋಶಗಳು ಯಥೇಚ್ಛವಾಗಿ ಅಂಗ ಕಸಿ ಚಿಕಿತ್ಸೆಯಲ್ಲಿ ಬಳಕೆಯಲ್ಲಿದ್ದು, ಭರವಸೆಯ ಹಾದಿಯಲ್ಲಿ ನಡೆದಿದೆ. ಇದರಲ್ಲಿ ಭ್ರೂಣ-ನಾಶ ಪ್ರಕ್ರಿಯೆಗಳೇನೂ ಇಲ್ಲದ್ದರಿಂದ, ಇದು ಯಾವುದೇ ವಿವಾದಕ್ಕೂ ಸಿಲುಕದೇ ಯಶಸ್ವಿಯಾಗಿ ಬಳಕೆಯಲ್ಲಿದೆ. ಅಂತೆಯೇ ಅಮೇರಿಕಾದಲ್ಲಿ ವಯೋಮಾನ ಆಕರ ಕೋಶಗಳ ಸಂಶೋಧನೆಗೆ ಮಾತ್ರವೇ ಧನಸಹಾಯ ದೊರೆಯುತ್ತದೆ. ಕೋಶವನ್ನು ವಿಭಜನೆ ಮಾಡಿ ತನ್ನಂತೆ ಇರುವ ಕೋಶವನ್ನು ಉತ್ಪಾದಿಸುವ ಶಕ್ತಿ ಇವುಗಳಿಗಿದೆ.

ಆಕರ ಕೋಶಗಳ ಸಂಶೋಧನೆಯಿಂದ ಕ್ಯಾನ್ಸರ್, ಪಾರ್ಕಿನ್‌ಸನ್ ಕಾಯಿಲೆ, ಬೆನ್ನು ಮೂಳೆ ಚಿಕಿತ್ಸೆ, ಮಾಂಸಖಂಡ ಪೆಟ್ಟು ಮುಂತಾದ ಸಂಕೀರ್ಣ ಕಾಯಿಲೆಗಳನ್ನು ಚಿಕಿತ್ಸೆ ನೀಡಿ ಪರಿಹರಿಸಬಲ್ಲ ವೈದ್ಯಕೀಯ ಸಾಮರ್ಥ್ಯವಿದೆ. ○

ಕವನ

ಅವ್ವ, ಮಗ ಮತ್ತು ಮೊಮ್ಮಗಳು

ಅವ್ವ ಈ ಹಳ್ಳಿಯಲ್ಲಿ
ಅರವತ್ತಕ್ಕೂ ಹೆಚ್ಚು ರಮಜಾನ
ಅರವತ್ತಕ್ಕೂ ಹೆಚ್ಚು ಯುಗಾದಿಗಳ ಕಂಡವಳು
ತನ್ನ ಬದುಕ ಬೇರುಗಳನ್ನು
ಈ ನೆಲದ ಅಳಗಲಕೂ ಹರಡಿಕೊಂಡವಳು
ಕಸುವನು ದಿನವೆಲ್ಲಾ ಉಂಡವಳು

ಮದುವೆಯಾದ ಮೂರು ಮುಂಗಾರು ಮಳೆಗಳಲ್ಲಿ
ವಿಧವೆಯಾದವಳು
ಒಂದೇ ಒಂದು ರಕ್ತದ ಕುಡಿ
ಉಡಿಯಲ್ಲಿ ತುಂಬಿಕೊಂಡವಳು

ಅವ್ವನಿಗೆ
ಮಳೆಗಾಲ-ಚಳಿಗಾಲ-ಬೇಸಿಗೆಕಾಲ
ಎಲ್ಲವೂ ಒಂದೊಂದು ಬೇರೆಯಲ್ಲ
ಎಂದೆಂದೂ ಮೈ ಒಡ್ಡಿಕೊಂಡವಳು
ಸೊಂಟಕ್ಕೆ ಉಡಿಗಂಟು ಹಾಕಿಕೊಂಡು
ಮೆತ್ತನೆ ಹತ್ತಿ ತೊಳೆಗಳ ಬಿಡಿಸಿದವಳು
ಹೊಟ್ಟೆ ಕಟ್ಟಿದವಳು
ಬಟ್ಟೆ ಬಿಟ್ಟವಳು
ಭೂತದ ನೆನಪಲ್ಲ ಭವಿಷ್ಯವ ಜಪಿಸಿದವಳು

ಮಗನ 'ಕಲೆಕ್ಟರ'
ಕನಸು ಹೊತ್ತವಳು
ತನು-ಮನವ ತೆತ್ತವಳು
ಇಂದಿಗೂ
ಅವ್ವನ ಕಂಗಳು
ಸೂಕ್ಷ್ಮದರ್ಶಕ-ದೂರದರ್ಶಕಗಳು
ಕಿವಿಗಳು
ಕವಿಗಳ ಮಾತು ಮರೆಯುವುದಿಲ್ಲ.

ಮಗ
ಆ ನಗರದ ಕಛೇರಿಯೊಂದರಲ್ಲಿ
ಕಾರಕೂನ
ಅವ್ವ
ತನ್ನ ಸಾಕಿದ್ದು, ಕಷ್ಟದಲ್ಲಿ ಬಾಳು ನೂಕಿದ್ದು
ಕಣ್ಣಲ್ಲಿ ಕಣ್ಣಿಟ್ಟು ಬೆಳೆಸಿದ್ದು
ಆಗೊಮ್ಮೆ-ಈಗೊಮ್ಮೆ
ಕುಟುಕುತ್ತದೆ-ಕಾಡುತ್ತದೆ
ಮಗನ ಮನ ಹಳ್ಳಿಯ ಕಡೆ ನೋಡುತ್ತದೆ.

ಎಂದೋ ಒಂದು ಸಲ
ಬೆಳಗು ಬರುತ್ತಾನೆ
ಬೈಗು ಹೋಗುತ್ತಾನೆ
ಬಂದಾಗಲೆಲ್ಲಾ ನೀರಿನ ಬಾಟಲ್
ಬಗಲ ಬ್ಯಾಗಿನಲಿ ಜಾಗ ಮಾಡಿಕೊಂಡಿರುತ್ತದೆ.

'ಇರು ಇವತ್ತೊಂದು ದಿವಸ;
ಹೊಲಕೆ ಹೋದ ಹುಸೇನಪ್ಪ ಬರ್‍ತಾನೆ' ಅವ್ವ
ಅಂದಾಗ
'ಇಲ್ಲವ್ವ ನನಗೆ ಸೂಟಿಯಿಲ್ಲ; ತಪ್ಪಿಸಿಕೊಳ್ಳಲಾಗದ
ಡ್ಯೂಟಿ'
ಅನ್ನುತ್ತಾನೆ ಮಗ-ನೊಗ ಕಳಚಿಕೊಂಡು
ಅವ್ವನ ಮುದಿ ಎದಿಗೆ ಗದಿಯಿಂದ
ಗುದ್ದಿದಂತಾಗುತ್ತದೆ.
ಕಂಬನಿ ಕೆನ್ನೆಗುಂಟ
ಭಿನ್ನವಾಗಿ ಇಳಿಯುತ್ತದೆ.

ಮಗ
ಪ್ಯಾಟಿಗೆ ನಡಿಯೆಂದಾಗಲೆಲ್ಲಾ
ಹಳ್ಳಿ ಕಳ್ಳು ಬಳ್ಳಿ
ಅವ್ವನ ಕಾಲಿಗೆ ತೊಡರಿಕೊಳ್ಳುತ್ತದೆ
ಎದಿಗೆ ಅಡರಿಕೊಳ್ಳುತ್ತದೆ
ಎಂದೋ ಒಂದು ಸಲ
ಅವ್ವ ಆ ಕಿಟಕಿ-ಬಾಗಿಲುಗಳ ನಡುವೆ
ಬಂಧಿಯಾಗುತ್ತಾಳೆ
ಮಗ-ಮೊಮ್ಮಗಳು-ಸೊಸೆ ಸಂದಿಯಲಿ
ಚಿಂದಿಯಾಗುತ್ತಾಳೆ

ಈಗ ಮಗ
ಮಗಳು-ಮಡದಿಯ
ಮುಂದಿನ ಗೊಂಬೆಯಾಗಿದ್ದಾನೆ
ಮೊಮ್ಮಗಳು
ವಾಹನಗಳ ಸಂತೆಯಲ್ಲಿ
ನಿಂತಿದ್ದಾಳೆ
ಸಿನಿಮಾ ಮಂದಿರಗಳಲ್ಲಿ
ಕುಂತಿದ್ದಾಳೆ
ಬಸ್ಸುಗಳಲ್ಲಿ ಏರುತ್ತಾಳೆ
ಪಾರ್ಕುಗಳಲ್ಲಿ ಜಾರುತ್ತಾಳೆ
ಕಾಂಕ್ರೀಟ್ ಕಟ್ಟಡಗಳ ನಡುವೆ
ಕರಗಿ ಹೋಗುತ್ತಿದ್ದಾಳೆ
ನಗರದ ಜನತೆಯ ಜೊತೆಗೆ
ನಾಜೂಕು ಆಗುತ್ತಿದ್ದಾಳೆ

ಮೊಮ್ಮಗಳಿಗೆ
'ಅಪ್ಪನ ಅವ್ವ' ಎಂದು ಕೂಡಲೇ
ರಸ್ತೆಯಲ್ಲದ ರಸ್ತೆ
ಮನೆಯಲ್ಲದ ಮನೆ
ದೀಪವಲ್ಲದ ದೀಪ
ನೀರಲ್ಲದ ನೀರು
ಎಲ್ಲಾ
ಕಣ್ಣುಗಳ ಮುಂದೆ ಭೂತಗಳಾಗಿ
ನಿಲ್ಲುತ್ತವೆ-ಕೊಲ್ಲುತ್ತವೆ.

ಆಗ
ಮೊಮ್ಮಗಳು
ಅಪ್ಪನ ಅವ್ವನ ಕಡೆ
ಬೆನ್ನು, ಮಾಡುತ್ತಾಳೆ
ಶಹರವ ಮತ್ತೆ ಮತ್ತೆ ನೋಡುತ್ತಾಳೆ.

■ ಪ್ರೊ. ಡಿ.ಎ.ಬಡಿಗೇರ, ಹರಪನಹಳ್ಳಿ

JANASHAKTHI KANNADA VARA PATRIKE : Printed by G.N.NAGARAJ, No 12, 18th Cross, S.R.Nagar, BANGALORE-560027 Published by: G.N.NAGARAJ, No 12, 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA (MARXIST) and Printed at: Kriya Prakashana, 12, 18th Cross, S.R.Nagar, BANGALORE - 560 027 Karnataka (State) and Published at BANGALORE No 12, 18th Cross, S.R.Nagar, BANGALORE-560027 Editor S.Y.GURURSHANTH, No12, 18th Cross, S.R.Nagar, BANGALORE - 560027 Editor: S.Y.GURUSHANTH